ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಜೂನ್ 12 ಶುಕ್ರವಾರ 2026

47

ಸಂಪುಟ: 47 | ಸಂಚಿಕೆ: 57 | ಪುಟಗಳು: 12

₹4

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್. ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ ಜಾಹೀರಾತಿಗಾಗಿ–ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, *website: www.mysurumithra.com*

ಮೈಸೂರು ಮಿತ್ರ

ಜೂ.18 ಮೈಸೂರಲ್ಲಿ ಎಸ್‌ಸಿ, ಎಸ್‌ಟಿ ಉದ್ಯಮಿಗಳ ಕಾರ್ಯಾಗಾರ

ಮೈಸೂರು, ಜೂ.11(ಜಿಎ)–ಕರ್ನಾಟಕ ವಾಣಿಜ್ಯ ಮತ್ತು ಕೈಗಾರಿಕೋದ್ಯಮಿಗಳ ಅಭಿವೃದ್ಧಿ ಸಂಘದ ವತಿಯಿಂದ ಜೂ.18ರಂದು ಬೆಳಗ್ಗೆ 10ಗಂಟೆಗೆ ನಗರದ ಹೆಬ್ಬಾಳ್ ಕೈಗಾರಿಕಾ ಪ್ರದೇಶದ ರಿಂಗ್ ರಸ್ತೆಯಲ್ಲಿನ ಹೋಟೆಲ್ ಕಲ್ಯಾಣಿ ಸಭಾಂಗಣದಲ್ಲಿ ನ್ಯಾಷನಲ್ ಎಸ್‌ಸಿ, ಎಸ್‌ಟಿ ಹಬ್ ಸಹಯೋಗದೊಂದಿಗೆ ಎಸ್‌ಸಿ, ಎಸ್‌ಟಿ ಉದ್ಯಮಿಗಳಿಗೆ ಒಂದು ದಿನದ ಕಾರ್ಯಾಗಾರ ಆಯೋಜಿಸಲಾಗಿದೆ ಎಂದು ಅಧ್ಯಕ್ಷ ಆರ್. ಮಂಜುನಾಥ್ ತಿಳಿಸಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಕಾರ್ಯಾಗಾರದಲ್ಲಿ ಎಂಎಸ್‌ಎಂಇ ಡಿಸಿಐ, ಎಂಆರ್‌ಪಿಎಲ್. ಪವರ್ ಗ್ರಿಡ್, ಬಿಇಎಂಎಲ್ ಮೊದಲಾದ ಕೇಂದ್ರ ಮತ್ತು ರಾಜ್ಯ ಸರ್ಕಾರದ ಅಂಗ ಸಂಸ್ಥೆಗಳು ಪ್ರಮುಖವಾಗಿ ಪಾಲ್ಗೊಳ್ಳಲಿವೆ. ಹಣಕಾಸು ಸಂಸ್ಥೆಗಳ ಪ್ರದರ್ಶನ, ಪ್ರಯೋಜನ, ನೋಂದಣಿ ಕಾರ್ಯಕ್ರಮದ ಜೊತೆಗೆ, ನಿರಂತರ ಮಾರ್ಗದರ್ಶಿಯಾಗಿ ನೆರವಾಗಲಾಗುವುದು ಎಂದರು.

ಎಸ್‌ಸಿ, ಎಸ್‌ಟಿ ಮಹಿಳಾ ಉದ್ಯಮಿಗಳಿಗಿರುವ ಕೇಂದ್ರ ಸರ್ಕಾರದ ಶೇ.4 ಮೀಸಲಾತಿ, ಸಾಮಾನ್ಯ ಮಹಿಳೆಯರಿಗೆ ಇರುವ ಶೇ.3 ಮೀಸಲಾತಿ, ವಿಶೇಷ ಚೇತನರು, ಅಲ್ಪಸಂಖ್ಯಾತರು, ಓಬಿಸಿಗಳಿಗೆ ಇರುವ ಶೇ. 13 ಮೀಸಲಾತಿ ಪ್ರಯೋಜನ ಸಂಬಂಧಪಟ್ಟ ಸಮುದಾಯಗಳಿಗೆ ತಲುಪದೇ ಹಿಂಬಡ್ತಿಯುಂಟಾಗಿರುವುದನ್ನು ಗಮನಿಸಿ ನೆರವಾಗುವ ಉದ್ದೇಶದಿಂದ ಈ ಕಾರ್ಯಾಗಾರ ಆಯೋಜಿಸಲಾಗಿದೆ. ನೋಂದಾಯಿಸಿಕೊಳ್ಳಲು ದೂ. 80736 04655, 72048 03540 ಅನ್ನು ಸಂಪರ್ಕಿಸಬಹುದು ಎಂದು ತಿಳಿಸಿದರು. ಸುದ್ದಿಗೋಷ್ಠಿಯಲ್ಲಿ ಎಸ್. ಮಂಜುನಾಥ್, ಕುಮಾರಸ್ವಾಮಿ, ಯಶ್ವಂತ್ ಉಪಸ್ಥಿತರಿದ್ದರು.

ಹೀರೋ ವುಮೆನ್ಸ್ ಪ್ರೊಫೆಷನಲ್ ಗಾಲ್ಫ್ ಟೂರ್ನಮೆಂಟ್‌ಗೆ ಚಾಲನೆ

ಮೈಸೂರು,ಜೂ.11(ಎಂಕೆ)–ಮೈಸೂರಿನ ಜಯಚಾಮರಾಜ ಒಡೆಯರ್ ಗಾಲ್ಫ್ ಕ್ಲಬ್ (ಜೆಡಬ್ಲ್ಯೂಜೆಸಿ) ಆವರಣದಲ್ಲಿ ಹಮ್ಮಿಕೊಂಡಿರುವ ಮೂರು ದಿನಗಳ 'ಹೀರೋ ವುಮೆನ್ಸ್ ಪ್ರೊಫೆಷನಲ್ ಗಾಲ್ಫ್ ಟೂರ್ನಮೆಂಟ್ (Hero Women's Pro Golf Tournament)-2026ಗೆ ಗುರುವಾರ ಚಾಲನೆ ದೊರೆಯಿತು.

ಚಾಮುಂಡಿಬೆಟ್ಟದ ತಪ್ಪಲಿನಲ್ಲಿರುವ ಸುವಿಶಾಲ ಗಾಲ್ಫ್ ಕ್ಲಬ್ ಆವರಣದಲ್ಲಿ ಗಾಲ್ಫ್ ಚೆಂಡನ್ನು ಗುರಿಯತ್ತ ಬಾರಿಸುವ ಮೂಲಕ ಮೈಸೂರು ಪ್ರಾದೇಶಿಕ ಆಯುಕ್ತ ನಿತೇಶ್ ಪಾಟೀಲ್ ಪಂದ್ಯಾವಳಿಗೆ ಚಾಲನೆ ನೀಡಿದರು. ಬಳಿಕ ಮಾತನಾಡಿದ ಅವರು, ಮೈಸೂರಿಗೆ ಇದೊಂದು ವಿಶೇಷ ದಿನ. ಮೊದಲ ಬಾರಿಗೆ 'ಹೀರೋ ವುಮೆನ್ಸ್ ಪ್ರೊಫೆಷನಲ್ ಗಾಲ್ಫ್ ಟೂರ್ನಮೆಂಟ್ ಆಯೋಜನೆ ಮಾಡಿರುವುದು ನಿಜಕ್ಕೂ ಶ್ಲಾಘನೀಯ. ಅತ್ಯುತ್ತಮ ವಾತಾವರಣದಲ್ಲಿ 51 ಮಹಿಳಾ ಗಾಲ್ಫ್ ಆಟಗಾರ್ತಿಯರು ತಮ್ಮ ಕೌಶಲ್ಯತೆ ಪ್ರದರ್ಶನಕ್ಕೆ ಸಜ್ಜಾಗಿದ್ದು, ಎಲ್ಲರಿಗೂ ಜಯ ಲಭಿಸಲಿ ಎಂದು ಶುಭಕೋರಿದರು.

ತುಂಬಾ ಪರಿಶ್ರಮದಿಂದ ಈ ಪಂದ್ಯಾವಳಿಯನ್ನು ಆಯೋಜಿಸಿದ್ದು, ಮೂರನೇ ಬಾರಿಗೆ ಪ್ರೊಫೆಷನಲ್ ಪಂದ್ಯಾವಳಿಯನ್ನು ಜಯಚಾಮರಾಜ ಒಡೆಯರ್ ಗಾಲ್ಫ್ ಕ್ಲಬ್ ವತಿಯಿಂದ ಆಯೋಜಿಸಿದ್ದು, ಪಂದ್ಯಾವಳಿ ಯಶಸ್ವಿಯಾಗಿ ಪ್ರತೀ ವರ್ಷವೂ ಇದೇ ರೀತಿ ಆಯೋಜನೆಯಾಗಲಿ ಎಂದು ಹಾರೈಸಿದರು.



ಮೈಸೂರಿನ ಜಯಚಾಮರಾಜ ಒಡೆಯರ್ ಗಾಲ್ಫ್ ಕ್ಲಬ್ (ಜೆಡಬ್ಲ್ಯೂಜೆಸಿ) ಆವರಣದಲ್ಲಿ ಹಮ್ಮಿಕೊಂಡಿರುವ ಮೂರು ದಿನಗಳ 'ಹೀರೋ ವುಮೆನ್ಸ್ ಪ್ರೊಫೆಷನಲ್ ಗಾಲ್ಫ್ ಟೂರ್ನಮೆಂಟ್–2026ಗೆ ಮೈಸೂರು ಪ್ರಾದೇಶಿಕ ಆಯುಕ್ತ ನಿತೇಶ್ ಪಾಟೀಲ್ ಗುರುವಾರ ಚಾಲನೆ ನೀಡಿದರು

ಜಯಚಾಮರಾಜ ಒಡೆಯರ್ ಗಾಲ್ಫ್ ಕ್ಲಬ್ ಅಧ್ಯಕ್ಷ ಹೆಚ್.ಎಸ್.ಅರುಣ್‌ಕುಮಾರ್ ಮಾತನಾಡಿ, ಯುವ ಪ್ರತಿಭೆಗಳ ಬೆಳೆಸಲು ಹಾಗೂ ಗಾಲ್ಫ್ ಕ್ರೀಡೆಯ ಪ್ರಚಾರಕ್ಕೆ ಜೆಡಬ್ಲ್ಯೂ ಕ್ಲಬ್ ಸಮರ್ಪಿತ ಕೇಂದ್ರವಾಗಿದ್ದು, ಮೊದಲ ಬಾರಿಗೆ ಹಮ್ಮಿಕೊಂಡಿರುವ 'ಹೀರೋ ವುಮೆನ್ಸ್ ಪ್ರೊಫೆಷನಲ್ ಗಾಲ್ಫ್ ಟೂರ್ನಮೆಂಟ್‌ನಲ್ಲಿ ದೇಶದ ವಿವಿಧ ಭಾಗಗಳಿಂದ ಪ್ರತಿಭಾವಂತ ಹವ್ಯಾಸಿ (ಅಮೆಚೂರ್) ಆಟಗಾರ್ತಿಯರು ಸೇರಿದಂತೆ ಒಟ್ಟು 51 ಆಟಗಾರ್ತಿಯರು ಪಾಲ್ಗೊಳ್ಳಲಿದ್ದಾರೆ.

17 ಲಕ್ಷ ರೂ.ಬಹುಮಾನ: ಮುಂದಿನ ಮೂರು ದಿನಗಳಲ್ಲಿ ಮೈಸೂರಿನ ಗಾಲ್ಫ್ ಅಭಿಮಾನಿಗಳು ಅತ್ಯುನ್ನತ ಮಟ್ಟದ ಸ್ಪರ್ಧಾತ್ಮಕ ಗಾಲ್ಫ್ ಕ್ರೀಡೆ ವೀಕ್ಷಿಸುವ ಅವಕಾಶವಿದ್ದು, ವಿಜೇತರಿಗೆ ಆಕರ್ಷಕ ಟ್ರೋಫಿಗಳೊಂದಿಗೆ ಒಟ್ಟು 17 ಲಕ್ಷ ರೂ. ಬಹುಮಾನ ನೀಡಲಾಗುವುದು ಎಂದು ಮಾಹಿತಿ ನೀಡಿದರು.

ಜಯಚಾಮರಾಜ ಒಡೆಯರ್ ಗಾಲ್ಫ್ ಕ್ಲಬ್ ಕ್ಯಾಪ್ಟನ್ ಎಂ.ಎಸ್.ಯಶ್ವಂತ್, ಗೌರವ ಕಾರ್ಯದರ್ಶಿ ಕೆ.ಎಸ್. ಸುಧೀರ್ ಭಟ್, ಗೌರವ ಖಜಾಂಚಿ ಡಿ.ವಿ.ಶ್ರೀಧರ್, ಟೂರ್ನಿಮೆಂಟ್ ಅಧ್ಯಕ್ಷ ಫಾಲ್ಗುಣ ವಿ.ಉರ್ಸ್, ಸಮಿತಿ ಸದಸ್ಯರಾದ ಎಂ.ಎ.ಮಂಜುನಾಥ್, ಸುರೇಶ್ ಬಲರಾಮ್, ಎಂ.ಎಸ್.ದಿನೇಶ್‌ಕುಮಾರ್, ಟೂರ್ನಮೆಂಟ್ ನಿರ್ದೇಶಕ ಪರಮಜಿತ್ ಸಿಂಗ್, ವಿಮೆನ್ಸ್ ಗಾಲ್ಫ್ ಅಸೋಸಿಯೇಷನ್ ಆಫ್ ಇಂಡಿಯಾದ ವಿವೇಕ್ ಶರ್ಮಾ ಮತ್ತು ನಿಶಿಕಾಂತ್ ಝಾ ಉಪಸ್ಥಿತರಿದ್ದರು.

ನಾಳೆ ಚಿರ ಆಲಯ ಕೇಂದ್ರ ಉದ್ಘಾಟನೆ

ನರದ ಸಮಸ್ಯೆ, ಅಂಗವೈಕಲ್ಯ ಹೊಂದಿರುವವರಿಗೆ ಆಶ್ರಯ

ಮೈಸೂರು, ಜೂ.11(ಜಿಎ)–ಚಿರಂತನ ಸಂಸ್ಥೆ ವತಿಯಿಂದ ನರಕ್ಕೆ ಸಂಬಂಧಿಸಿದ ಸಮಸ್ಯೆ, ಇನ್ನಿತರ ಅಂಗವೈಕಲ್ಯ ಹೊಂದಿರುವವರಿಗಾಗಿ ಸಮಗ್ರ ವಸತಿ ಮತ್ತು ಜೀವನ ಕೌಶಲ್ಯ ಕಲಿಸುವ ಚಿರ ಆಲಯ ಕೇಂದ್ರವನ್ನು ತಾಲೂಕಿನ ದೊಡ್ಡ ಕಾನ್ಯ, ಸಿಂಧುವಳ್ಳಿ ಗ್ರಾಪಂ ವ್ಯಾಪ್ತಿಯ ಶಂಕರ್ ಸುಹಾಸ್ ಟ್ರಸ್ಟ್ ಆವರಣದಲ್ಲಿ ಆರಂಭಿಸಲಾಗಿದೆ ಎಂದು ವ್ಯವಸ್ಥಾಪಕ ಟ್ರಸ್ಟಿ ರಚನಾ ತಿಳಿಸಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಜೂ.13 ರಂದು ಬೆಳಗ್ಗೆ 11.30ಕ್ಕೆ ಕೇಂದ್ರವು ಉದ್ಘಾಟನೆಗೊಳ್ಳಲಿದ್ದು, ಮುಖ್ಯ ಅತಿಥಿಗಳಾಗಿ ಪಾಲಿಕೆ ಕಂದಾಯ ವಿಭಾಗದ ಉಪ ಆಯುಕ್ತ ಜಿ.ಎಸ್.ಸೋಮಶೇಖರ್, ಗ್ರಾಮದ ಕಾರ್ಯನಿರ್ವಾಹಕ ನಿರ್ದೇಶಕ ಡಾ.ಬಸವರಾಜು ಆರ್.ಶ್ರುಶ್ರೂತ್ ಹಾಗೂ ವಾಕ್ ಮತ್ತು ಶ್ರವಣ ಸಂಸ್ಥೆಯ ಮಾಜಿ ಪ್ರಾಧ್ಯಾಪಕರಾದ ಡಾ.ರಾಜಲಕ್ಷ್ಮಿ ಆಗಮಿಸಲಿದ್ದಾರೆ ಎಂದರು.

ಅಂದು ಕೇಂದ್ರವು ಆಸಕ್ತರಿಗೆ ಮುಕ್ತ ಭೇಟಿ ಅವಕಾಶವಿದ್ದು, ನಿವಾಸಿಗಳು ಕಲಿಯಲು, ಬೆಳೆಯಲು, ಜೀವನ ಕೌಶಲ್ಯ ಅಭಿವೃದ್ಧಿಪಡಿಸಿಕೊಳ್ಳಲು ನೆರವಾಗುವ ಉದ್ದೇಶ. ಮಾಹಿತಿಗೆ ದೂ. 99452 32961, 99807 10912, 98459 89228 ಸಂಪರ್ಕಿಸಬಹುದು ಎಂದರು. ಗೋಷ್ಠಿಯಲ್ಲಿ ಟ್ರಸ್ಟಿ ನಾರಾಯಣಸ್ವಾಮಿ ಇದ್ದರು.

ಪಿಯು ಕಾಲೇಜು ಉಪನ್ಯಾಸಕರ ಸಂಘದ ಪದಾಧಿಕಾರಿಗಳಿಗೆ ಸನ್ಮಾನ



ಪದವಿ ಪೂರ್ವ ಕಾಲೇಜುಗಳ ಉಪನ್ಯಾಸಕರ ಸಂಘದ ನೂತನ ಪದಾಧಿಕಾರಿಗಳನ್ನು ವಿಧಾನ ಪರಿಷತ್ ಸದಸ್ಯ ಕೆ.ವಿವೇಕಾನಂದ ಸನ್ಮಾನಿಸಿದರು.

ಮೈಸೂರು, ಜೂ.11(ಪಿಎಂ)– ಪದವಿಪೂರ್ವ ಕಾಲೇಜುಗಳ ಉಪನ್ಯಾಸಕರ ಸಂಘದ ನೂತನ ರಾಜ್ಯಾಧ್ಯಕ್ಷ ನಿಂಗೇಗೌಡ ಹಾಗೂ ಮೈಸೂರು ಜಿಲ್ಲಾ ಪ ಪೂರ್ವ ಕಾಲೇಜುಗಳ ಉಪನ್ಯಾಸಕರ ಸಂಘದ ಪದಾಧಿಕಾರಿಗಳನ್ನು ವಿಧಾನಪರಿಷತ್ ಸದಸ್ಯ ಕೆ.ವಿವೇಕಾನಂದ ಸನ್ಮಾನಿಸಿದರು. ಪದವಿಪೂರ್ವ ಕಾಲೇಜುಗಳ ಉಪನ್ಯಾಸಕರ ಸಂಘದ ಜಿಲ್ಲಾಧ್ಯಕ್ಷ ಎಂ.ಎಂ.ಮಹದೇವ, ಉಪಾಧ್ಯಕ್ಷೆ ಆರ್.ಬಿ.ವೀಣಾ, ಪ್ರಧಾನ ಕಾರ್ಯದರ್ಶಿ ಎಂ.ಮಹೇಶ್ (ಕ್ಯಾತಮಾರನಹಳ್ಳಿ), ಕಾರ್ಯಾಧ್ಯಕ್ಷ, ಡಾ.ಉಮೇಶ್ ಬೇವಿನಹಳ್ಳಿ, ಕಾರ್ಯದರ್ಶಿ ಸಿ.ಪಿ. ಸಂಜಯ್, ಸಂಘಟನಾ ಪ್ರಧಾನ ಕಾರ್ಯದರ್ಶಿ ಡಾ.ಎಂ.ಆರ್. ಆಶಾ, ಜಂಟಿ ಕಾರ್ಯದರ್ಶಿ ಡಾ.ಆರ್.ರವಿಕುಮಾರ್, ಸಂಚಾಲಕ ಗಂಗಾಧರ, ಖಜಾಂಚಿ ಹೆಚ್.ಕೆ.ಮಧುಸೂದನ್ ಅವರನ್ನು ಸನ್ಮಾನಿಸಲಾಯಿತು. ಈ ಪದಾಧಿಕಾರಿಗಳ 2026ರಿಂದ 2031ರ ಅವಧಿಗೆ ನೂತನವಾಗಿ ಆಯ್ಕೆಯಾಗಿದ್ದಾರೆ. ಅನುದಾನಿತ ಕಾಲೇಜುಗಳ ಉಪನ್ಯಾಸಕರ ಸಂಘದ ಅಧ್ಯಕ್ಷ ಮಹದೇವಸ್ವಾಮಿ, ಹಿರಿಯ ಉಪನ್ಯಾಸಕ ಉಮೇಶ್ ಇನ್ನಿತರರು ಉಪಸ್ಥಿತರಿದ್ದರು.

ಇಂದಿನಿಂದ ಮಾವು, ಹಲಸು ಮೇಳ



ಮೈಸೂರು, ಜೂ.11(ಜಿಎ)–ಮೈಸೂರಿನ ವಿದ್ಯಾರಣ್ಯಪುರಂ ಸ್ಟರ್ಲಿಂಗ್ ಚಿತ್ರಮಂದಿರ ಬಳಿಯ ನಿತ್ಯಾನಂದ ಕಲ್ಯಾಣ ಮಂಟಪದಲ್ಲಿ ಜೂ. 12, 13, 14 ರಂದು ಮಾವು ಮತ್ತು ಹಲಸು ಮೇಳ ಆಯೋಜಿಸಲಾಗಿದೆ. ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಆಯೋಜಕ ರಾಹುಲ್ ಈ ವಿಷಯ ತಿಳಿಸಿ, ಮೇಳದಲ್ಲಿ ರುಚಿ ರುಚಿಯಾದ ಮಾವು, ಹಲಸಿನ ಕಾಯಿಯ ಬಗೆ ಬಗೆಯ ಖಾದ್ಯಗಳನ್ನು ಸವಿದು, ಇನ್ನಿತರ ಶಾಪಿಂಗ್ ಮಾಡಬಹುದು. ಹಲಸಿನ ಉತ್ಪನ್ನ, ಸ್ವದೇಶೀ ಉತ್ಪನ್ನ, ಆರೋಗ್ಯ ಉತ್ಪನ್ನ, ಸಾವಯವ ಪದಾರ್ಥ, ರಾಗಿ ಉತ್ಪನ್ನ, ಉತ್ತಮ ಸೀರೆ, ರೆಡಿಮೇಡ್ ಡ್ರೆಸ್, ಹ್ಯಾಂಡ್ ಮೇಡ್ ಬ್ಲೌಸ್, ಇನ್ನಿತರ ಗೃಹಬಳಕೆ ಹಾಗೂ ಅಲಂಕಾರಿಕ ವಸ್ತುಗಳ ಪ್ರದರ್ಶನ ಮತ್ತು ಮಾರಾಟ ಇರಲಿದೆ. ಈ ಮೇಳ ಬೆಳಗ್ಗೆ 10ರಿಂದ ರಾತ್ರಿ 10ರವರೆಗೆ ತೆರೆದಿರಲಿದೆ ಎಂದರು. ಸುದ್ದಿಗೋಷ್ಠಿಯಲ್ಲಿ ವಿಘ್ನೇಶ್, ಬಸವಣ್ಣ ಉಪಸ್ಥಿತರಿದ್ದರು.

ಅಭಿನಂದನೆ...



ಬಿಜೆಪಿಯಿಂದ ವಿಧಾನಪರಿಷತ್ ಅಭ್ಯರ್ಥಿಯಾಗಿ ಆಯ್ಕೆಯಾಗಿರುವ ಬಿಜೆಪಿ ಹಿಂದುಳಿದ ವರ್ಗಗಳ ಮೋರ್ಚಾ ರಾಜ್ಯಾಧ್ಯಕ್ಷ ರಘು ಕೌಟಿಲ್ಯ ಅವರನ್ನು ಮೈಸೂರು ನಗರ ಎಸ್ಸಿ ಮೋರ್ಚಾ ಅಧ್ಯಕ್ಷ ಕಾರ್ತಿಕ್ ಮರಿಯಪ್ಪ, ವಕೀಲ, ನಗರ ಜಿಲ್ಲಾಧ್ಯಕ್ಷ ಶಿವರಾಜ್, ಕದಂಬ ಕನ್ನಡ ಸೇನೆ ಓಬಿಸಿ ಮೋರ್ಚಾ ರಾಜ್ಯ ಕಾರ್ಯಕಾರಣಿ ಸದಸ್ಯ ಗಿರೀಶ್, ನಗರ ಪ್ರಧಾನ ಕಾರ್ಯದರ್ಶಿ ಸ್ವಾಮಿ, ಶ್ರೀನಿವಾಸ್ ಮಂಜುನಾಥ್ ಅಭಿನಂದಿಸಿದರು.

ಇಂದಿನಿಂದ ಮೈಸೂರಲ್ಲಿ ವಿಶೇಷ ಸೀರೆಗಳ ಪ್ರದರ್ಶನ, ಮಾರಾಟ


ಮೈಸೂರು, ಜೂ.11(ಜಿಎ)–ಮೈಸೂರಿನ ವಿಜಯನಗರದಲ್ಲಿರುವ ಕಂಕಣ ಸಿಲ್ಕ್ಸ್‌ನಲ್ಲಿ ವಿಶೇಷ ಸೀರೆಗಳ ಪ್ರದರ್ಶನ ಮತ್ತು ಮಾರಾಟವನ್ನು ಜೂ.12ರಿಂದ 14ರವರೆಗೆ ಆಯೋಜಿಸಲಾಗಿದೆ. ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಕಂಕಣ ಸಿಲ್ಕ್ಸ್‌ನ ವ್ಯವಸ್ಥಾಪಕಿ ರಶ್ಮಿ ಈ ವಿಷಯ ತಿಳಿಸಿ, ಇದೇ ಮೊದಲ ಬಾರಿಗೆ ಸಂಸ್ಥೆ ವತಿಯಿಂದ ವಿಶೇಷ ಸೀರೆಗಳ ಪ್ರದರ್ಶನ ಮತ್ತು ಮಾರಾಟ ಆಯೋಜಿಸಿದ್ದು, ಇಲ್ಲಿ ಕಾಂಚಿಪುರಂ ಸೀರೆ, ಬನಾರಸ್ ಸೀರೆ, ಪೈಠಾಣಿ, ಪಟನ್ ಪಟೋಲಾ, ಮೈಸೂರು ಕ್ರೇಪ್, ಮೈಸೂರು ಸಿಲ್ಕ್, ಅರ್ಗಾಂಜಾ, ಜಾರ್ಜೆಟ್, ಶಿಫನ್, ಲೇನಿನ್, ಕಾಟನ್ ಸೀರೆ, ಡಿಸೈನರ್ ಸೀರೆಗಳು, ಕೈಯ್ಯಿಂದ ನೇಯ್ದ ವಿಶೇಷ ವಿನ್ಯಾಸದ ಸೀರೆಗಳ ಪ್ರದರ್ಶನ ಮತ್ತು ಮಾರಾಟಕ್ಕಿದ್ದು, ಸುಮಾರು 750 ರಿಂದ 3 ಲಕ್ಷದ ವರೆಗಿನ ಸೀರೆಗಳು ಲಭ್ಯವಿದೆ. ಶೇ.50 ರಿಯಾಯಿತಿ ದರದಲ್ಲಿ ಖರೀದಿಸಬಹುದು ಎಂದರು. ಸುದ್ದಿಗೋಷ್ಠಿಯಲ್ಲಿ ತೌಫೀಕ್ ಅಹ್ಮದ್ ಉಪಸ್ಥಿತರಿದ್ದರು.



ಪ್ರಸಾದ ವಿತರಣೆ...



ಬಿಜೆಪಿ ಚಾಮರಾಜ ಕ್ಷೇತ್ರ ಘಟಕದ ವತಿಯಿಂದ ನರೇಂದ್ರ ಮೋದಿಯವರು ಪ್ರಧಾನ ಮಂತ್ರಿಯಾಗಿ ದೀರ್ಘಾವಧಿ ಸೇವೆ ಸಲ್ಲಿಸಿದ ಹಿನ್ನೆಲೆಯಲ್ಲಿ ಒಂಟಿಕೊಪ್ಪಲಿನ ಚಂದ್ರಮೌಳೇಶ್ವರ ದೇವಸ್ಥಾನದಲ್ಲಿ ಪೂಜೆ ಸಲ್ಲಿಸಿ, ಪ್ರಸಾದ ವಿತರಣೆ ಮಾಡಲಾಯಿತು. ಈ ವೇಳೆ ಸಂಸದ ಯದುವೀರ್, ಬಿಜೆಪಿ ನಗರಾಧ್ಯಕ್ಷ ಎಲ್.ನಾಗೇಂದ್ರ, ಚಾಮರಾಜ ವಿಧಾನಸಭಾ ಕ್ಷೇತ್ರದ ಅಧ್ಯಕ್ಷ ದಿನೇಶ್‌ಗೌಡ, ಪ್ರಧಾನ ಕಾರ್ಯದರ್ಶಿಗಳಾದ ರಾಮೇಗೌಡ, ದಾಸಪ್ರಕಾಶ್, ನಗರ ಉಪಾಧ್ಯಕ್ಷ ರಮೇಶ್, ದಿ ಮೈಸೂರು ಕೋ–ಆಪರೇಟಿವ್ ಬ್ಯಾಂಕ್ ನಿರ್ದೇಶಕ ಕೆ.ಗಿರೀಶ್ ಮತ್ತಿತರರು ಉಪಸ್ಥಿತರಿದ್ದರು.



ದೆಹಲಿಯ ಕರ್ನಾಟಕ ಭವನದಲ್ಲಿ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರನ್ನು ಮುಡಾ ಮಾಜಿ ಅಧ್ಯಕ್ಷ, ಕೆಪಿಸಿಸಿ ಸದಸ್ಯ ಎಚ್.ವಿ.ರಾಜೀವ್ ಅಭಿನಂದಿಸಿದರು. ಈ ವೇಳೆ ಮಾಜಿ ಸಚಿವ ಎಸ್.ಟಿ.ಸೋಮಶೇಖರ್, ಶಾಸಕ ಎ.ಸಿ.ಶ್ರೀನಿವಾಸ್ ಉಪಸ್ಥಿತರಿದ್ದರು.

ಪ್ರತಿಭಾ ಪುರಸ್ಕಾರಕ್ಕೆ ಅರ್ಜಿ ಆಹ್ವಾನ

ಮೈಸೂರು,ಜೂ.11(ಜಿಎ)–ಮೈಸೂರು ಜಿಲ್ಲಾ ಗಾಣಿಗರ ಸಂಘದ ವತಿಯಿಂದ ಈ ಬಾರಿಯ ಎಸ್‌ಎಸ್‌ಎಲ್‌ಸಿ, ಪಿಯುಸಿ ಫಲಿತಾಂಶದಲ್ಲಿ ಶೇ.80ಕ್ಕಿಂತ ಹೆಚ್ಚು ಅಂಕ ಪಡೆದ ಸಮುದಾಯದ ಮಕ್ಕಳಿಗೆ ಪ್ರತಿಭಾ ಪುರಸ್ಕಾರಕ್ಕೆ ಅರ್ಜಿ ಆಹ್ವಾನಿಸಲಾಗಿದೆ.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಸಂಘದ ಅಧ್ಯಕ್ಷ ಎನ್.ಸಿ.ಉಮೇಶ್ ಈ ವಿಷಯ ತಿಳಿಸಿ, ಅರ್ಜಿ ಸಲ್ಲಿಸಲು ಜು.10 ಕೊನೆ ದಿನಾಂಕವಾಗಿದೆ. ಅರ್ಜಿ ಜೊತೆ ಅಂಕಪಟ್ಟಿ, ಆಧಾರ್ ಕಾರ್ಡ್, ಜಾತಿ ಪ್ರಮಾಣಪತ್ರ, ಭಾವಚಿತ್ರಗಳನ್ನು ಲಗತ್ತಿಸಬೇಕು. ಅರ್ಜಿಯನ್ನು ಎನ್.ಸಿ. ಉಮೇಶ್, ನಂ. 45, ಹಳೆ ಕೆಸರೆ, ಎಂಐಟಿ ಕಾಲೇಜು ರಸ್ತೆ, ಮೈಸೂರು, ಈ ವಿಳಾಸಕ್ಕೆ ಸಲ್ಲಿಸಬೇಕು. ಹೆಚ್ಚಿನ ಮಾಹಿತಿಗೆ ದೂ. 98860 28262 ಅಥವಾ 99006 30037 ನ್ನು ಸಂಪರ್ಕಿಸಬಹುದು ಎಂದರು.

ಸುದ್ದಿಗೋಷ್ಠಿಯಲ್ಲಿ ಹೇಮಂತ್ ಕುಮಾರ್, ರಮೇಶ್, ಶಿವಣ್ಣ, ಮಂಜು, ಕೃಷ್ಣಶೆಟ್ಟಿ ಉಪಸ್ಥಿತರಿದ್ದರು.

ನಿಧನ



ಬಿ.ಶ್ರೀನಿವಾಸ್

ಮೈಸೂರು,ಜೂ.11–ಮೈಸೂರಿನ ಗಾಂಧಿನಗರದ ಶ್ರೀ ಸಿದ್ದಪ್ಪಾಜಿ ದೇವಸ್ಥಾನದ 2ನೇ ಕ್ರಾಸ್ ನಿವಾಸಿ ಮತ್ತು ಲೇಟ್ ಬಸವರಾಜು ಅವರ ಪುತ್ರ ಬಿ.ಶ್ರೀನಿವಾಸ್ (50) ಹೃದಯಾಘಾತದಿಂದ ಮೈಸೂರಿನ ಖಾಸಗಿ ಆಸ್ಪತ್ರೆಯಲ್ಲಿ ಬುಧವಾರ ನಿಧನರಾದರು. ಮೃತರು ತಾಯಿ ಪುಟ್ಟಮ್ಮ, ಸಹೋದರರಾದ ಬಿ.ಸುಬ್ರಹ್ಮಣ್ಯ, ಬಿ.ಪ್ರಸಾದ್, ಬಿ.ರಾಜೇಶ್ ಮತ್ತು ಅಕ್ಕಂದಿರು ಹಾಗೂ ಅಪಾರ ಬಂಧು–ಬಳಗವನ್ನು ಅಗಲಿದ್ದಾರೆ. ಮೃತರ ಅಂತ್ಯಕ್ರಿಯೆಯು ಬುಧವಾರವೇ ಗಾಂಧಿನಗರದ ಆದಿಜಾಂಬವ ರುದ್ರಭೂಮಿಯಲ್ಲಿ ನೆರವೇರಿಸಲಾಯಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

12.06.2026 ಶುಕ್ರವಾರ, ಮಳೆ ನಕ್ಷತ್ರ: ಮೃಗಶಿರ 08.06.2026ರಿಂದ 21.06.2026ರವರೆಗೆ ಪರಾಭವ ನಾಮ ಸಂವತ್ಸರ, ಉತ್ತರಾಯಣ, ಗ್ರೀಷ್ಮ ಋತು, ಜ್ಯೇಷ್ಠ (ಅಧಿಕ) ಮಾಸ, ಕೃಷ್ಣ ಪಕ್ಷ, ತಿಥಿ: ದ್ವಾದಶಿ, ನಕ್ಷತ್ರ: ಭರಣಿ, ರಾಹುಕಾಲ: ಬೆಳಗ್ಗೆ 10.30ರಿಂದ 12ರವರೆಗೆ

ಮೈಸೂರು ಆಕಾಶವಾಣಿ



ಬೆಳಗ್ಗೆ: 6.10 ಗೀತಾರಾಧನ, 6.30 ಚಿಂತನ, 6.35 ಮತ್ತು ಸಂಜೆ 6.10 ಜ್ಞಾನ ಜ್ಯೋತಿ ಜೀವನ ಪಾಠ ಕಲಿಸಿದ ಸಾಧಕಿಯರ ಪರಿಚಯ ಮಾಲಿಕೆ, ಪ್ರಸ್ತುತಿ: ಬಿ.ಕೆ.ಮೀನಾಕ್ಷಿ, 6.40 ಪದಸಂಸ್ಕೃತಿ–ಕನ್ನಡ ಪದಗಳ ಬಳಕೆ ಕಲಿಕೆಯ ವಿಶಿಷ್ಟ ಬಾನುಲಿ ಸರಣಿ, 6.50 ರೈತರಿಗೆ ಸಲಹೆ, 7.15 ಪ್ರಾಯೋಜಿತ ಕಾರ್ಯಕ್ರಮ–ಕಾಡುಕಲಿಸುವ ಪಾಠ, ಪ್ರಾಯೋಜಕರು–Prabha Super Specialty Eye Clinic, Bengaluru & Vittala Institute of Ophthalmology, Bengaluru, ಪ್ರಸ್ತುತಿ–ಟಿ.ಎಸ್. ಗೋಪಾಲ್, 8.30 ಯೋಗದತ್ತ ಜಗತ್ತು–ಅಂತಾರಾಷ್ಟ್ರೀಯ ಯೋಗ ದಿನದ ಸಂದರ್ಭದಲ್ಲಿ ವಿಶೇಷ ಕಾರ್ಯಕ್ರಮ ಸರಣಿ, 8.45 ಕನ್ನಡ ಚಿತ್ರಗೀತೆಗಳು, 9.00 ನಮ್ಮ ಅರೋಗ್ಯ–ಅಂತಾರಾಷ್ಟ್ರೀಯ ಯೋಗ ದಿನದ ಸಂದರ್ಭದಲ್ಲಿ ಯೋಗದ ದಿನದ ಮಹತ್ವ ಕುರಿತು ಮೈಸೂರಿನ ಸರ್ಕಾರಿ ಆರ್ಯುವೇದ ಸಂಶೋಧನಾ ಕೇಂದ್ರದ ಸಹಾಯಕ ನಿರ್ದೇಶಕರಾದ ಡಾ.ಲಕ್ಷ್ಮಿನಾರಾಯಣ ಶೆಣೈ ಅವರೊಂದಿಗೆ ಮಾತುಕತೆ. ಇವರೊಂದಿಗೆ ಭಾಗವಹಿಸುತ್ತಾರೆ–ಎನ್.ಕೇಶವಮೂರ್ತಿ, 9.30 ಗಾಂಧೀ ಸ್ಮೃತಿ, 10.00 ಕರ್ನಾಟಕ ಶಾಸ್ತ್ರೀಯ ಸಂಗೀತ, ಪ್ರೊ. ಟಿ.ಎನ್.ಕೃಷ್ಣನ್–ವೈಯೋಲಿನ್ ವಾದನ, 10.30 ಹಿಂದಿ ಚಿತ್ರಗೀತೆಗಳು, 11.00 ನಿಮ್ಮೊಂದಿಗೆ ಮೈಸೂರು ಆಕಾಶವಾಣಿ 'ಋತುಮಾನ' ಸಂಬಂಧ, ಪ್ರೇರಣೆ, ನೆನಪುಗಳ ಕಥನ, ಪ್ರಸ್ತುತಿ: ಅರ್ಚನಾ ಪಿ. ಆರ್ಯ

ಮಧ್ಯಾಹ್ನ: 12.05 ವನಿತಾ ವಿಹಾರ, 12.35 ದೇವರನಾಮ–ಶುಭಾ ರಾಘವೇಂದ್ರ, 12.45 ಕಾದಂಬರಿ ವಿಹಾರ–ಕೃಪಾಕರ ಸೇನಾನಿ ಅವರ ಕೆನ್ನಾಯಿಯ ಜಾಡಿನಲಿ ಕೃತಿಯ ಬಾನುಲಿ ಓದು. ಪ್ರಸ್ತುತಿ: ಜಿ ಶಾಂತಕುಮಾರ್, 1.00 ಪ್ರಗತಿ ಪಥ–ಕೇಂದ್ರ ಸರ್ಕಾರದ ವಿವಿಧ ಅಭಿವೃದ್ಧಿ ಯೋಜನೆಗಳ ಸರಣಿ, 1.20 ಭಾವಗೀತೆಗಳು–ವೃಂದಗಾನ, 1.30 ಸಂದೇಶ ಆಧಾರಿತ ಶ್ರೋತೃಗಳ ಮೆಚ್ಚಿನ ಚಿತ್ರಗೀತೆಗಳ ಕಾರ್ಯಕ್ರಮ, 2.40 ದಾರಿ ದೀಪ–ಪ್ರಾಯೋಜಿತ ಕಾರ್ಯಕ್ರಮ. ಪ್ರಾಯೋಜಕರು: FEBA India, 2.55 ಸಿರಿಗನ್ನಡಂ ಗೆಲ್ಗೆ, ಪ್ರಸ್ತುತಿ: ಜಿ.ಕೆ.ರವೀಂದ್ರಕುಮಾರ್, 3.00 ಕರ್ನಾಟಕ ಶಾಸ್ತ್ರೀಯ ಸಂಗೀತ, ಕೆ.ಸತ್ಯನಾರಾಯಣ–ಕೀಬೋರ್ಡ್ ವಾದನ, 4.00 ಮಹಿಳಾರಂಗ–ಸಖೀ ಸಂವಾದ, ವಿಷಯ–ಪ್ಲಾಸ್ಟಿಕ್ ಬಳಕೆಯನ್ನು ಮಿತಗೊಳಿಸುವುದು ಹೇಗೆ?, ಪ್ರಸ್ತುತಿ–ಸಹನ ಹಾಗೂ ನೇತ್ರಾ, 4.30 ವೃತ್ತಿ ಮಾರ್ಗದರ್ಶನ–ಶಿಕ್ಷಣ ಮುಗಿಸಿದ ನಂತರ ಉದ್ಯೋಗ ಹುಡುಕುವ ಸಂದರ್ಭ ದಲ್ಲಿ ವಿಶೇಷವಾಗಿ ಐ.ಟಿ. ಕ್ಷೇತ್ರದಲ್ಲಿ ಆಕಾಂಕ್ಷಿಗಳು ಹೊಂದಿರಲೇ ಬೇಕಾದ Soft Skills ಮತ್ತು ಮೂಲಭೂತ ಗುಣಗಳ ಕುರಿತು Soft Skill Trainer ಮತ್ತು Career Empowerment Coach ಆದ ಶ್ರೀಮತಿ ಅನೋಖಾ ಅನೂಪ್ ಜೈನ್ ಅವರೊಡನೆ ಮಾತುಕತೆ. ಭಾಗವಹಿಸುತ್ತಾರೆ–ಅರ್ಚನಾ ಆರ್ಯ, 5.05 ಸಂದೇಶ ಆಧಾರಿತ ಶ್ರೋತೃಗಳ ಮೆಚ್ಚಿನ ಚಿತ್ರಗೀತೆಗಳ ಕಾರ್ಯಕ್ರಮ, 6.50 ಕೃಷಿರಂಗ, ಪ್ರಾಯೋಜಿತ ಕಾರ್ಯಕ್ರಮ ಕೃಷಿ ಮಾರಾಟ ರಂಗ, ಪ್ರಾಯೋಜಕರು–ಕರ್ನಾಟಕ ರಾಜ್ಯ ಕೃಷಿ ಮಾರಾಟ ಮಂಡಳಿ, ಮೈಸೂರು ಕೃಷಿ ಮಾರಾಟ ಇಲಾಖೆ ಕಾರ್ಯಚಟುವಟಿಕೆಗಳು ಹಾಗೂ ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಗಳಲ್ಲಿ ಮಾರಾಟ ವ್ಯವಸ್ಥೆ ಕುರಿತು ಮೈಸೂರಿನ ಕೃಷಿ ಮಾರಾಟ ಇಲಾಖೆಯ ಉಪನಿರ್ದೇಶಕಿ ಎಸ್.ಸಂಗೀತಾ ಅವರೊಂದಿಗೆ ಸಂದರ್ಶನ, ಸಂದರ್ಶಕರು–ಎನ್. ಕೇಶವಮೂರ್ತಿ, 7.45 ಕನ್ನಡದಲ್ಲಿ ಭಾಷಣ, 8.00 ಕನ್ನಡ ಭಾರತಿ–ಕರ್ನಾಟಕ ಲೇಖಕಿಯರ ಸಂಘದ ಅಧ್ಯಕ್ಷೆ ಡಾ.ಸುನಂದಮ್ಮ ಅವರೊಂದಿಗೆ ಸಂದರ್ಶನ. ಸಂದರ್ಶಕರು–ಕತೆಗಾರ್ತಿ ಡಾ.ಎಂ.ಎಸ್.ವೇದ, 9.30 ಕರ್ನಾಟಕ ಶಾಸ್ತ್ರೀಯ ಸಂಗೀತ, ಕೆ.ವಿ.ಕೃಷ್ಣ–ವೀಣಾವಾದ, 10.00 ತತ್ವ ಸಂಚಾರ–ಜನಪದ ಗಾಯಕರ ತತ್ವಗಾಯನ, 10.30 ಸವಿನೆನಪು

■ **ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ** : ಬೆನ್ನುನೋವು, ಕತ್ತು ನೋವಿನ ಸಮಸ್ಯೆಗಳಿಗೆ ಆಕ್ಯುಪಂಕ್ಚರ್, ಯೋಗ ಚಿಕಿತ್ಸಾ ಶಿಬಿರ, ಅರ್ಥೈಟಿಸ್ ಚಿಕಿತ್ಸಾ ಶಿಬಿರ, ಕುತ್ತಿಗೆ ನೋವು ಹಾಗೂ ಬೆನ್ನು ನೋವು ತಪಾಸಣೆ ಚಿಕಿತ್ಸಾ ಶಿಬಿರ, ಸಯಾಟೀಕ/ಗೃಧ್ರಸಿ ರೋಗದ ಚಿಕಿತ್ಸಾ ಶಿಬಿರ, ಸ್ಥಳ: ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ, ಲಲಿತಾದ್ರಿಪುರ ರಸ್ತೆ, ಆಲನಹಳ್ಳಿ, ಬೆಳಗೆ 9.30 ರಿಂದ

■ **ಜಗದ್ಗುರು ಶ್ರೀ ಮನ್ಮಧ್ವಾಚಾರ್ಯ ಮೂಲ ಸಂಸ್ಥಾನ, ಉತ್ತರಾದಿ ಮಠ, ಮೈಸೂರು, ರೋಗಮೋಚನ ಶ್ರೀ ಧನ್ವಂತರಿ ಸನ್ನಿಧಾನ:** ಶ್ರೀ ಶ್ರೀ 1008 ಶ್ರೀ ಸತ್ಯಾತ್ಮತೀರ್ಥ ಶ್ರೀಪಾದಂಗಳವರ ಮೈಸೂರು ದಿಗ್ವಿಜಯ–2026, ಶ್ರೀ ಸತ್ಯ ಸಂಕಲ್ಪ ತೀರ್ಥರ ಹಾಗೂ ಶ್ರೀ ಸತ್ಯಸಂತುಷ್ಟ ತೀರ್ಥರ ದಿವ್ಯ ಸನ್ನಿಧಾನ, ಬೆಳಗ್ಗೆ 7.30ರಿಂದ ಪಾದಪೂಜೆ, ಮುದ್ರಾಧಾರಣೆ ಹಾಗೂ ಧನ್ವಂತರಿ ಹೋಮ, ಗೋ ಪೂಜಾ, ಸಂಕಲ್ಪ ಸಹಿತ ಅಪೂವ ದಾನ, ಶ್ರೀಮನ್ಮೂಲರಾಮದೇವರ ಪೂಜೆ, ಸಂಜೆ 4.30ರಿಂದ ಹರಿನಾಮ ಭಜನೆ (ಭಜನಾ ಮಂಡಳಿಗಳಿಂದ), ಸಾಂಸ್ಕೃತಿಕ ಕಾರ್ಯಕ್ರಮ, ವಿದ್ವಾಂಸರಿಂದ ಪ್ರವಚನ, ಗಣ್ಯರಿಗೆ ಸನ್ಮಾನ, ಶ್ರೀಪಾದಂಗಳ ವರ ಅನುಗ್ರಹ ಸಂದೇಶ, ಬೆಳಗ್ಗೆ 6ರಿಂದ ಸಂಜೆ 6ರವರೆಗೆ ಪುರುಷೋತ್ತಮ ಸ್ತುತಿ ಲಹರಿ, ಸಂಜೆ 5.30 ರಿಂದ ವಿದುಷಿ ಸಂಗೀತಾ ಕಟ್ಟಿ ಅವರಿಂದ ದಾಸಾಂಜಲಿ, ಸ್ಥಳ: ಶ್ರೀ ಕಾಶಿ ವಿಶ್ವೇಶ್ವರ ಸನ್ನಿಧಿ ಆವರಣ, ಅಗ್ರಹಾರ

■ **ಸುಯೋಗ್ ಆಸ್ಪತ್ರೆ** : ಜೀರ್ಣಾಂಗ ಕಾಯಿಲೆಗಳ ಉಚಿತ ತಪಾಸಣಾ ಶಿಬಿರ, ಸ್ಥಳ: ಸುಯೋಗ್ ಆಸ್ಪತ್ರೆ, ರಾಮಕೃಷ್ಣನಗರ, ಬೆಳಗ್ಗೆ 10 ರಿಂದ.

■ **ಶಾರದಾ ವಿಲಾಸ ಫಾರ್ಮಸಿ ಕಾಲೇಜು, ಕ್ಯೂರ್ ಪ್ಲಸ್ ರಕ್ತನಿಧಿ ಕೇಂದ್ರ** : ರಕ್ತದಾನ ಶಿಬಿರ, ಮುಖ್ಯ ಅತಿಥಿಗಳು : ಕ್ಯೂರ್ ಪ್ಲಸ್ ಬ್ಲಡ್ ಸೆಂಟರ್‌ನ ಸುಧಾನಂದ್ ಗ್ರೂಪ್‌ನ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಕ್ಯಾಪ್ಟನ್ ರಘುದಾಸ್, ಶಾರದಾ ವಿಲಾಸ ಶಿಕ್ಷಣ ಸಂಸ್ಥೆ ಗೌರವ ಕಾರ್ಯದರ್ಶಿ ಆರ್. ದಿನೇಶ್, ಅಧ್ಯಕ್ಷತೆ : ಶಾರದಾ ವಿಲಾಸ ಫಾರ್ಮಸಿ ಕಾಲೇಜು ಪ್ರಿನ್ಸಿಪಾಲ್ ಡಾ. ಹನುಮಂತಚಾರ್ ಜೋಶಿ, ಸ್ಥಳ: ಪ್ರೊ. ಚಿನ್ನಸ್ವಾಮಿ ಶೆಟ್ಟಿ ಸಮ್ಮೇಳನ ಸಭಾಂಗಣ, ಬೆಳಗ್ಗೆ 10ಕ್ಕೆ.

■ **ವಿಶ್ವಮಾನವ ಮೈಸೂರು ವಿಶ್ವವಿದ್ಯಾನಿಲಯ ನೌಕರರ ವೇದಿಕೆ, ನವ ವಿಶ್ವಮಾನವ ಟ್ರಸ್ಟ್** : ದಿವಂಗತ ರಾಜಶೇಖರ ಕೋಟಿ ಸ್ಮರಣಾರ್ಥ ಹಾಗೂ ವಿಶ್ವ ಪರಿಸರ ದಿನಾಚರಣೆ ಪ್ರಯುಕ್ತ ಗಿಡ ನೆಡುವ ಕಾರ್ಯಕ್ರಮ, ಉಪಸ್ಥಿತರು: ಮೈಸೂರು ವಿವಿ ಕುಲಪತಿ ಪ್ರೊ.ಎನ್.ಕೆ.ಲೋಕನಾಥ್, ಕುಲಸಚಿವೆ ಎಂ.ಕೆ.ಸವಿತಾ, ಅಪರ ಪ್ರಾದೇಶಿಕ ಆಯುಕ್ತ ಡಾ. ಪಿ.ಶಿವರಾಜು, ಕರಾಮುವಿವಿ ಕುಲಸಚಿವ ಪ್ರೊ. ಎಸ್.ಕೆ.ನವೀನ್‌ಕುಮಾರ್, ಉಪ ಪೊಲೀಸ್ ಆಯುಕ್ತ ಕೆ.ಎಸ್.ಸುಂದರ್‌ರಾಜ್, ಹಿರಿಯ ಪತ್ರಕರ್ತ ಅಂಶಿಪ್ರಸನ್ನ ಕುಮಾರ್, ಸಹಾಯಕ ಪೊಲೀಸ್ ಆಯುಕ್ತ ಪಿ.ರವಿಪ್ರಸಾದ್, ರಶ್ಮಿ ಎಂ.ಆರ್., ಪತ್ರಕರ್ತೆ ರಶ್ಮಿ ಕೋಟಿ, ಪ್ರಿನ್ಸಿಪಾಲ್ ಡಾ.ಷಣ್ಮುಗಂ, ಡಾ. ಗೋವಿಂದರಾಜು, ಪ್ರೊ. ಎಸ್. ಶಿವರಾಜಪ್ಪ, ಡಾ.ಇ.ಸಿ. ನಿಂಗರಾಜೇಗೌಡ, ಸ್ಥಳ: ಮಹಾರಾಜ ಕಾಲೇಜು ಆವರಣ, ಬೆಳಗ್ಗೆ 10.30ಕ್ಕೆ.

■ **ಶ್ರೀ ಬಸವೇಶ್ವರ ಸಾಂಸ್ಕೃತಿಕ ಪ್ರತಿಷ್ಠಾನ** : ರಾಜರ್ಷಿ ನಾಲ್ವಡಿ ಕೃಷ್ಣರಾಜ ಒಡೆಯರ್ ಜಯಂತಿ ಮಹೋತ್ಸವ ಹಾಗೂ ವಿವಿಧ ಕ್ಷೇತ್ರದ ಸಾಧಕರಿಗೆ ಶ್ರೀ ನಾಲ್ವಡಿ ಕೃಷ್ಣರಾಜ ಒಡೆಯರ್ ಪ್ರಶಸ್ತಿ ಪ್ರದಾನ ಸಮಾರಂಭ, ಸಾನ್ನಿಧ್ಯ : ಎಸ್‌ಜಿವಿಕೆ ಸಮೂಹ ವಿದ್ಯಾಸಂಸ್ಥೆ ಅಧ್ಯಕ್ಷ ಸೋಮಶೇಖರ ಸ್ವಾಮೀಜಿ, ಉದ್ಘಾಟನೆ : ಕಾಂಗ್ರೆಸ್ ಮುಖಂಡ ಎನ್.ಎಂ. ನವೀನ್‌ಕುಮಾರ್, ಪುಷ್ಪಾರ್ಚನೆ : ಹಿರಿಯ ಸಮಾಜ ಸೇವಕ ಡಾ. ಕೆ. ರಘುರಾಂ ವಾಜಪೇಯಿ, ಪ್ರಧಾನ ನುಡಿ : ಜಿಲ್ಲಾ ಕಸಾಪ ಅಧ್ಯಕ್ಷ ಮಡ್ಡೀಕೆರೆ ಗೋಪಾಲ್, ಅಧ್ಯಕ್ಷತೆ : ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ ಅಂಬಳೆ ಶಿವಣ್ಣ, ಮುಖ್ಯ ಅತಿಥಿಗಳು : ಡಾ. ಎಂ.ಜಿ.ಆರ್. ಅರಸ್, ಮಹಿಳಾ ಘಟಕದ ಅಧ್ಯಕ್ಷೆ ಶ್ರೀಮತಿ ರತ್ನ ಹಾಲಪ್ಪಗೌಡ, ಪತ್ರಕರ್ತ ಮೂಗೂರು ನಂಜುಂಡಸ್ವಾಮಿ, ಸ್ಥಳ: ನಮನ ಕಲಾಮಂಟಪ, ಕೃಷ್ಣಮೂರ್ತಿಪುರಂ, ಬೆಳಗ್ಗೆ 11.30ಕ್ಕೆ.

■ **ಶ್ರೀ ಜಿ.ಟಿ.ದೇವೇಗೌಡರ ಅಭಿಮಾನಿಗಳು, ಚಾಮುಂಡೇಶ್ವರಿ ಕ್ಷೇತ್ರ** : ಬೆಳಗ್ಗೆ 10ಕ್ಕೆ ಲಲಿತಾಭಿನಂದನ, 'ಸಹಕಾರ ರತ್ನ' ಪ್ರಶಸ್ತಿ ಪುರಸ್ಕೃತರಾದ ಲಲಿತಾ ಜಿ.ಟಿ.ದೇವೇಗೌಡರಿಗೆ ಲಲಿತಾಭಿನಂದನ ಸಮಾರಂಭ, ಸಾನ್ನಿಧ್ಯ : ಆದಿಚುಂಚನಗಿರಿ ಮಠದ ಪೀಠಾಧಿ ಪತಿ ನಿರ್ಮಲಾನಂದನಾಥ ಸ್ವಾಮೀಜಿ, ರಾಮಕೃಷ್ಣ ಆಶ್ರಮದ ಸ್ವಾಮಿ ಮುಕ್ತಿದಾ ನಂದ, ಪಾಂಡವಪುರ ಬೇಬಿ ಮಠದ ತ್ರಿನೇತ್ರ ಮಹಾಂತ ಶಿವಯೋಗಿ ಸ್ವಾಮೀಜಿ, ಅಧ್ಯಕ್ಷತೆ : ರಾಜ್ಯ ಸರ್ಕಾರದ ಮುಖ್ಯ ಕಾರ್ಯದರ್ಶಿ ಶಾಲಿನಿ ರಜನೀಶ್, ಮುಖ್ಯ ಅತಿಥಿಗಳು : ಚಿತ್ರ ನಿರ್ಮಾಪಕಿ ಶ್ರೀಮತಿ ಅಶ್ವಿನಿ ಪುನೀತ್ ರಾಜ್‌ಕುಮಾರ್, ಶಾಸಕ ಜಿ.ಟಿ.ದೇವೇಗೌಡ, ಪ್ರಯೋಗಶೀಲ ಕೃಷಿ ಸಾಧಕರಾದ ಶ್ರೀಮತಿ ಡಾ.ಕವಿತಾ ಮಿಶ್ರಾ, ಅಭಿನಂದಿತರು ಸಹಕಾರ ರತ್ನ ಪ್ರಶಸ್ತಿ ಪುರಸ್ಕೃತರಾದ ಶ್ರೀಮತಿ ಲಲಿತಾ ಜಿ.ಟಿ.ದೇವೇಗೌಡ, ಕಿರುಹೊತ್ತಿಗೆ ಬಿಡುಗಡೆ: ಮೈಸೂರು ವಿವಿ ವಿಶ್ರಾಂತ ಕುಲಪತಿ ಪ್ರೊ. ಕೆ.ಎಸ್.ರಂಗಪ್ಪ, ಅಭಿನಂದನಾ ಭಾಷಣ: ವಿಶ್ರಾಂತ ಪ್ರಾಂಶುಪಾಲ ಪ್ರೊ. ಎಂ. ಕೃಷ್ಣೇಗೌಡ; ಮಧ್ಯಾಹ್ನ 2.30ರಿಂದ ಶ್ರೀಮತಿ ನಿರುಪಮಾ–ರಾಜೇಂದ್ರ ಮತ್ತು ತಂಡದಿಂದ ನೃತ್ಯ ಸಂಭ್ರಮ ವೈಭವ, ಸ್ಥಳ: ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾಲಯ ಘಟಿಕೋತ್ಸವ ಭವನ.

■ **ಮೈಸೂರು ನಗರ ಮತ್ತು ಜಿಲ್ಲಾ ಬ್ರಾಹ್ಮಣ ಸಂಘ** : ನೂತನ ಪದಾಧಿಕಾರಿಗಳ ನೇಮಕ ಪತ್ರ ವಿತರಣಾ ಕಾರ್ಯಕ್ರಮ, ಉಪಸ್ಥಿತರು : ಮೈಸೂರು ನಗರ ಮತ್ತು ಜಿಲ್ಲಾ ಬ್ರಾಹ್ಮಣ ಸಂಘದ ಅಧ್ಯಕ್ಷ ಡಿ.ಟಿ. ಪ್ರಕಾಶ್, ಸ್ಥಳ: ಸಂಘದ ಕಚೇರಿ ಆವರಣ, ಸರಸ್ವತಿಪುರಂ, ಸಂಜೆ 5ಕ್ಕೆ.

■ **ಅಖಿಲ ಭಾರತ ಶರಣ ಸಾಹಿತ್ಯ ಪರಿಷತ್ತು, ಮೈಸೂರು ನಗರ ಘಟಕ** : ದತ್ತಿ ಕಾರ್ಯಕ್ರಮ ಮತ್ತು ವಿದ್ಯಾರ್ಥಿಗಳಿಂದ ವಚನ ವ್ಯಾಖ್ಯಾನ, ಉದ್ಘಾಟನೆ : ಪ್ರಾಧ್ಯಾಪಕರಾದ ಶ್ರೀಮತಿ ಹುಸ್ಕೂರು ಅಂಬಿಕಾ ಶಿವನಂಜಪ್ಪ, ಅಧ್ಯಕ್ಷತೆ : ಅಖಿಲ ಭಾರತ ಶರಣ ಸಾಹಿತ್ಯ ಪರಿಷತ್ ಅಧ್ಯಕ್ಷ ಡಾ. ಜಯಪ್ಪ ಹೊನ್ನಾಳಿ, ಉಪಸ್ಥಿತರು : ಶ್ರೀಮತಿ ಎಂ. ರೇಖಾದೇವಿ, ಸ್ಥಳ: ಡಿ. ದೇವರಾಜ ಅರಸು ವೃತ್ತಿಪರ ಬಾಲಕಿಯರ ವಿದ್ಯಾರ್ಥಿ ನಿಲಯ, ದಟ್ಟಗಳ್ಳಿ, ಸಂಜೆ 5.30 ರಿಂದ.

■ **ಗಾನಭಾರತೀ** : ಶ್ರೀ ವಾಸುದೇವ ಉಡುಪ ಸಂಸ್ಮರಣಾ ಕಾರ್ಯಕ್ರಮ, ವಿದ್ವಾನ್ ಮಧುರೈ ಎನ್. ಶಿವಗಣೇಶ್ ಅವರಿಂದ ಗಾಯನ, ವಿದ್ವಾನ್ ಕೇಶವ ಮೋಹನ ಕುಮಾರ್–ವಯೋಲಿನ್, ವಿದ್ವಾನ್ ಅದಮ್ಯ ರಮಾನಂದ್–ಮೃದಂಗ, ವಿದ್ವಾನ್ ಭಾರ್ಗವ ಹಾಲಂಬಿ–ಘಟಂ, ಸ್ಥಳ: ವೀಣೆ ಶೇಷಣ್ಣ ಭವನ, ಆದಿಚುಂಚನಗಿರಿ ರಸ್ತೆ, ಕುವೆಂಪುನಗರ, ಸಂಜೆ 6 ರಿಂದ.

■ **ಶ್ರೀ ರಾಮಾಭ್ಯುದಯ ಸಭಾ ಚಾರಿಟಬಲ್ ಟ್ರಸ್ಟ್**: ಅಂಜನಾನಂದನೋತ್ಸವ, ಡಾ.ಎನ್.ಕೆ.ರಾಮಶೇಷನ್ ಅವರಿಂದ ಶ್ರೀ ಸುಂದರಕಾಂಡ ಪ್ರವಚನ, ಸ್ಥಳ: ಶ್ರೀರಾಮ ಮಂದಿರ, ಶಿವರಾಂಪೇಟೆ, ಸಂಜೆ 6.30ರಿಂದ.

■ **ನಾಟ್ಯಾಲೇಖ ರಂಗಸಮೂಹ** : ನಾಟ್ಯಾಲೇಖ ರಂಗ ಸಮೂಹ ತಂಡದ ಕಲಾವಿದರಿಂದ ಅಮಿತ್ ಜೆ. ರೆಡ್ಡಿ ನಿರ್ದೇಶನದ 'ಘಾಟಿ' ನಾಟಕ ಪ್ರದರ್ಶನ, ಸ್ಥಳ: ಕಿರು ರಂಗಮಂದಿರ, ಸಂಜೆ 7ಕ್ಕೆ.

ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಜೂನ್ 12 ಶುಕ್ರವಾರ 2026

ಸಂಪುಟ: 47 | ಸಂಚಿಕೆ: 57 | ಪುಟಗಳು: 12

₹4

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್.ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ ಜಾಹೀರಾತಿಗಾಗಿ– ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.com

ಸಂಪುಟ ವಿಸ್ತರಣೆಗೆ ತಯಾರಿ
ಹೊಸಬರಿಗೆ ಆದ್ಯತೆ!

ಬೆಂಗಳೂರು: ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ನೇತೃತ್ವದ ಸಂಪುಟಕ್ಕೆ ಸೇರ್ಪಡೆಯಾಗಲು ಸಚಿವ ಸ್ಥಾನದ ಆಕಾಂಕ್ಷಿಗಳು ಹೊಸದಿಲ್ಲಿಯಲ್ಲಿ ಬೀಡುಬಿಟ್ಟಿದ್ದು, ಮಂತ್ರಿ ಸ್ಥಾನಕ್ಕಾಗಿ ಹೈಕಮಾಂಡ್ ಮಟ್ಟದಲ್ಲಿ ತೀವ್ರ ಲಾಬಿ ನಡೆಸುತ್ತಿದ್ದಾರೆ.

ಮೊದಲ ಹಂತದಲ್ಲಿ 13 ಮಂದಿಗೆ ಸಂಪುಟದಲ್ಲಿ ಅವಕಾಶ ಕಲ್ಪಿಸಿದ್ದು, ಯು.ಟಿ.ಖಾದರ್, ಡಾ.ಯತೀಂದ್ರ ಅವರನ್ನು ಹೊರತುಪಡಿಸಿದರೆ ಬಹುತೇಕರು ಈ ಹಿಂದೆ ಸಿದ್ದರಾಮಯ್ಯ ಅವಧಿಯಲ್ಲಿ ಸಚಿವರಾಗಿದ್ದವರೇ ಇದ್ದಾರೆ. ಇದೀಗ ಎರಡನೇ ಹಂತದಲ್ಲಿ ಹೊಸಮುಖಗಳಿಗೆ ಆದ್ಯತೆ ನೀಡಲು ಹೈಕಮಾಂಡ್ ಸೂಚನೆ ನೀಡಿದೆ ಎಂದು ತಿಳಿದು ಬಂದಿದೆ. ಹೀಗಾಗಿ ಹಲವು ಶಾಸಕರು ಮಂತ್ರಿ ಸ್ಥಾನಕ್ಕಾಗಿ ಪೈಪೋಟಿ ನಡೆಸಿದ್ದಾರೆ.

ಸಂಪುಟದಲ್ಲಿ ಇನ್ನೂ 20 ಸ್ಥಾನಗಳು ಖಾಲಿ ಉಳಿದಿದ್ದು, ಈ ತಿಂಗಳ ಅಂತ್ಯಕ್ಕೆ ಎರಡನೇ ಹಂತದಲ್ಲಿ ಸಂಪುಟಕ್ಕೆ ಯಾರೆಲ್ಲಾ ಸೇರ್ಪಡೆಯಾಗಲಿದ್ದಾರೆ ಎಂಬುದು ಗೊತ್ತಾಗಲಿದೆ. ಇನ್ನೂ ಎರಡು ವರ್ಷದಲ್ಲಿ ವಿಧಾನಸಭೆ ಚುನಾವಣೆಯೂ ಬರುತ್ತಿದೆ. ಆ ಹಿನ್ನೆಲೆಯಲ್ಲಿ ಡಿ.ಕೆ.ಶಿವಕುಮಾರ್ ನೇತೃತ್ವದ ಸಂಪುಟದಲ್ಲಿ ಯುವಕರಿಗೆ ಆದ್ಯತೆ ನೀಡಬೇಕು ಎಂಬ ಒತ್ತಾಯವೂ ಕೇಳಿಬಂದಿದೆ.

2028ರ ಚುನಾವಣೆಯಲ್ಲಿ ಪಕ್ಷವನ್ನು ಗೆಲ್ಲಿಸುವ ನಿಟ್ಟಿನಲ್ಲಿ ಹಾಗೂ ಪಕ್ಷ ಸಂಘಟನೆ ದೃಷ್ಟಿಯಿಂದ ಹೊಸ ಮುಖಗಳಿಗೆ ಅವಕಾಶ ನೀಡುವ ಸಾಧ್ಯತೆಗಳಿವೆ. ■10ನೇ ಪುಟಕ್ಕೆ

ಸಂಪುಟ ಸೇರಲು ಲಾಬಿಗಿಳಿದ ಹಿರಿಯ ಶಾಸಕ ಷಡಕ್ಷರಿಗೆ ಲಘು ಪಾರ್ಶ್ವವಾಯು!

ದೆಹಲಿ ಆಸ್ಪತ್ರೆಯಲ್ಲಿ ಚಿಕಿತ್ಸೆ



ಬೆಂಗಳೂರು, ಜೂ.11(ಕೆಎಂಶಿ)–ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಸಂಪುಟದಲ್ಲಿ ಅವಕಾಶ ಪಡೆಯುವ ಉದ್ದೇಶದಿಂದ ವರಿಷ್ಠರ ಭೇಟಿಗಾಗಿ ದೆಹಲಿಯಲ್ಲಿ ಬಿಡಾರ ಹೂಡಿದ್ದ ಹಿರಿಯ ಶಾಸಕ ಕೆ. ಷಡಕ್ಷರಿ ಲಘು ಪಾರ್ಶ್ವವಾಯುವಿಗೀಡಾಗಿ ಆಸ್ಪತ್ರೆಗೆ ದಾಖಲಾಗಿದ್ದಾರೆ.

ನೀತಿ ಆಯೋಗದ ಸಭೆಯಲ್ಲಿ ಭಾಗವಹಿಸಲು ಕಳೆದ ಎರಡು ದಿನಗಳಿಂದ ದೆಹಲಿಯಲ್ಲೇ ಬಿಡಾರ ಹೂಡಿರುವ ಮುಖ್ಯಮಂತ್ರಿಯವರು ಜೂನ್ 20 ರ ನಂತರ ತಮ್ಮ ಮಂತ್ರಿ ಮಂಡಲ ವಿಸ್ತರಣೆ ಕಸರತ್ತು ನಡೆಸಲಿದ್ದಾರೆ. ಕಳೆದ ಬುಧವಾರ ಎಐಸಿಸಿ ನಾಯಕರನ್ನು ಭೇಟಿ ಮಾಡಿ, ಈ ಸಂಬಂಧ ಒಂದು ಸುತ್ತಿನ ಮಾತುಕತೆ ನಡೆಸಿರುವ ಮುಖ್ಯಮಂತ್ರಿಯವರು ಮತ್ತೊಂದು ಸುತ್ತಿನ ಚರ್ಚೆ ನಡೆಸಲು ದೆಹಲಿ ■10ನೇ ಪುಟಕ್ಕೆ

ಎಸ್‌ಸಿ, ಎಸ್‌ಟಿ ವಿದ್ಯಾರ್ಥಿಗಳಿಗೆ 9, 10ನೇ ತರಗತಿಗೂ ಆರ್‌ಟಿಇ ವಿಸ್ತರಣೆ

ಶಿಕ್ಷಣ ಇಲಾಖೆ ಸುತ್ತೋಲೆಗೆ ಹೈಕೋರ್ಟ್ ಮಧ್ಯಂತರ ತಡೆ

ಬೆಂಗಳೂರು : ಕಡ್ಡಾಯ ಶಿಕ್ಷಣ ಹಕ್ಕು (ಆರ್‌ಟಿಇ) ಕಾಯ್ದೆಯಡಿ 2025–26ನೇ ಶೈಕ್ಷಣಿಕ ವರ್ಷಗಳಲ್ಲಿ ಎಂಟನೇ ತರಗತಿಯಲ್ಲಿ ತೇರ್ಗಡೆಯಾದ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ವಿದ್ಯಾರ್ಥಿಗಳಿಗೆ 9 ಮತ್ತು 10ನೇ ತರಗತಿವರೆಗೂ ಅದೇ ಶಾಲೆಯಲ್ಲಿ ವಿದ್ಯಾಭ್ಯಾಸ ಮುಂದುವರಿಸಲು ಅನುಮತಿ ನೀಡಿ ಶಿಕ್ಷಣ ಇಲಾಖೆ ಹೊರಡಿಸಿದ್ದ ಸುತ್ತೋಲೆಗೆ ಹೈಕೋರ್ಟ್ ಮಧ್ಯಂತರ ತಡೆಯಾಜ್ಞೆ ನೀಡಿದೆ.



ರಾಜ್ಯ ಸರ್ಕಾರ 2026ರ ಮೇ 21 ರಂದು ಹೊರಡಿಸಿದ್ದ ಸುತ್ತೋಲೆ ಪ್ರಶ್ನಿಸಿ ಖಾಸಗಿ ಅನುದಾನರಹಿತ ಇಂಗ್ಲಿಷ್ ಮಾಧ್ಯಮ ಶಾಲೆಗಳ ಪ್ರತಿನಿಧಿ ಸಂಸ್ಥೆಯಾಗಿರುವ ಕರ್ನಾಟಕದ ಖಾಸಗಿ ಶಾಲೆಗಳ ಸಂಘ ಸೇರಿ ವಿವಿಧ ಶಿಕ್ಷಣ ಸಂಸ್ಥೆಗಳು ಸಲ್ಲಿಸಿದ್ದ ಅರ್ಜಿಯನ್ನು ನ್ಯಾಯಮೂರ್ತಿ ಅಶೋಕ್ ಎಸ್.ಕಿಣಗಿ ಅವರಿದ್ದ ಏಕಸದಸ್ಯ ನ್ಯಾಯಪೀಠ ಗುರುವಾರ ವಿಚಾರಣೆ ನಡೆಸಿತು. ಕೆಲ ಕಾಲ ಅರ್ಜಿ ಆಲಿಸಿದ ನ್ಯಾಯಪೀಠ, ಅರ್ಜಿಯಲ್ಲಿ ಪ್ರಸ್ತಾಪಿಸಲಾಗಿರುವ ವಿಷಯ ಪರಿಶೀಲನೆಗೊಳಪಡಬೇಕಾದ ಅವಶ್ಯಕತೆಯಿದ್ದು, ಅಂತಿಮ ಇತ್ಯರ್ಥದ ತನಕ ಸುತ್ತೋಲೆಯ ಜಾರಿಗೆ ತಡೆ ನೀಡಬೇಕೆಂಬ ಅರ್ಜಿದಾರರ ಮಧ್ಯಂತರ ಮನವಿ ಪರಿಗಣಿಸಲಾಗುತ್ತಿದ್ದು, ಮುಂದಿನ ವಿಚಾರಣೆವರೆಗೆ ಸುತ್ತೋಲೆಗೆ ತಡೆ ನೀಡಲಾಗಿದೆ ಎಂದು ಆದೇಶಿಸಿತು.

ಜತೆಗೆ, ಅರ್ಜಿಯಲ್ಲಿ ಪ್ರತಿವಾದಿಗಳಾದ ರಾಜ್ಯ ಸರ್ಕಾರದ ಮುಖ್ಯ ಕಾರ್ಯದರ್ಶಿ, ಶಾಲಾ ಶಿಕ್ಷಣ ಇಲಾಖೆ ಆಯುಕ್ತರಿಗೆ ನೋಟಿಸ್ ಜಾರಿಗೊಳಿಸಿ ■10ನೇ ಪುಟಕ್ಕೆ

ರಾಜ್ಯದ ಅಭಿವೃದ್ಧಿಗೆ ನೆರವಾಗಲು ಪ್ರಧಾನಿ ಮೋದಿಯವರಲ್ಲಿ ಸಿಎಂ ಡಿ.ಕೆ.ಶಿವಕುಮಾರ್ ಮನವಿ



ಗುರುವಾರ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ನವದೆಹಲಿಯಲ್ಲಿ ಪ್ರಧಾನಮಂತ್ರಿ ನರೇಂದ್ರ ಮೋದಿ, ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಅವರನ್ನು ಭೇಟಿಯಾಗಿ ರಾಜ್ಯದ ಅಭಿವೃದ್ಧಿಗೆ ಸಹಕರಿಸುವಂತೆ ಮನವಿ ಮಾಡಿದರು.

ಬೆಂಗಳೂರು, ಜೂ.11(ಕೆಎಂಶಿ)– ಕರ್ನಾಟಕ ರಾಜ್ಯದ ಅಭಿವೃದ್ಧಿಗೆ ನೆರವು ಮತ್ತು ಸಹಕಾರ ನೀಡುವಂತೆ ಪ್ರಧಾನಿ ನರೇಂದ್ರ ಮೋದಿ, ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಅವರಿಗೆ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಮನವಿ ಮಾಡಿದ್ದಾರೆ.

ದೆಹಲಿಯಲ್ಲಿ ನಡೆಯುತ್ತಿರುವ ನೀತಿ ಆಯೋಗದ ಸಭೆಯಲ್ಲಿ ಭಾಗವಹಿಸಿದ ನಂತರ ಪ್ರಧಾನಿ ಹಾಗೂ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಅವರನ್ನು ಪ್ರತ್ಯೇಕವಾಗಿ ಭೇಟಿ ಮಾಡಿ, ರಾಜ್ಯದ ಅಭಿವೃದ್ಧಿಗೆ ಸಂಬಂಧಿಸಿದಂತೆ ಸಮಾಲೋಚನೆ ನಡೆಸಿದರು. ಮುಖ್ಯಮಂತ್ರಿಯಾಗಿ ಅಧಿಕಾರ ವಹಿಸಿಕೊಂಡ ನಂತರ ಮೊದಲ ಬಾರಿಗೆ ದೆಹಲಿಗೆ ತೆರಳುತ್ತಿದ್ದಂತೆ ಪ್ರಧಾನಿಯವರನ್ನು ಭೇಟಿ ಮಾಡಿ, ಕೇಂದ್ರ ಮತ್ತು ರಾಜ್ಯದ ನಡುವೆ ಹಳಸಿದ್ದ ಸಂಬಂಧಕ್ಕೆ ತೆರೆ ಎಳೆಯುವ ಪ್ರಯತ್ನ ಮಾಡಿದರು. ಸಿದ್ದರಾಮಯ್ಯ ಅಧಿಕಾರ ವಹಿಸಿಕೊಂಡ ನಂತರ ನೀತಿ ಆಯೋಗದ ಸಭೆಗಳಿಗಾಗಲೀ, ಪ್ರಧಾನಿಯವರು ಕರೆದಿರುವ ಯಾವುದೇ ಸಭೆಗಳಿಗೂ ಭಾವಹಿಸದೆ, ಸಚಿವರನ್ನು ನಿಯೋಜನೆ ಮಾಡುತ್ತಿದ್ದರು.

ಅಷ್ಟೇ ಅಲ್ಲ ಅಧಿಕಾರ ವಹಿಸಿಕೊಂಡ ನಂತರ ಪ್ರಧಾನಿ ಭೇಟಿ ಮಾಡುವ ಗೋಜಿಗೂ ಸಿದ್ದರಾಮಯ್ಯ ಹೋಗಿರಲಿಲ್ಲ. ಅವರ ಮೂರು ವರ್ಷದ ಆಡಳಿತ ಅವಧಿಯಲ್ಲಿ ಒಂದೆರಡು ಬಾರಿ ಮಾತ್ರ ಪ್ರಧಾನಿಯವರನ್ನು ಭೇಟಿ ಮಾಡಿ, ರಾಜ್ಯದ ಅಭಿವೃದ್ಧಿಗೆ ಸಂಬಂಧಿಸಿದಂತೆ ಚರ್ಚೆ ಮಾಡಿದ್ದರು.

ಕಳೆದ ಮೂರು ವರ್ಷಗಳಲ್ಲಿ ಉಂಟಾಗಿದ್ದ ಕಂದಕವನ್ನು ಮುಚ್ಚಿ, ರಾಜ್ಯದ ಅಭಿವೃದ್ಧಿ ಪರ ನಿಲ್ಲುವಂತೆ ಪ್ರಧಾನಿ ಮತ್ತು ಹಣಕಾಸು ಸಚಿವರಿಗೆ ಮನವಿ ಮಾಡಿಕೊಂಡಿದ್ದಾರೆ.

ಕೇಂದ್ರದ ವಿವಿಧ ಇಲಾಖೆಗಳಲ್ಲಿ ನೆನೆಗುದಿಗೆ ಬಿದ್ದಿರುವ ಅಭಿವೃದ್ಧಿಗೆ ಹಣ ದೊರಕಿಸಿಕೊಡುವಂತೆ ಮತ್ತು ಜಿಎಸ್‌ಟಿ ಬಾಕಿ ನೀಡುವಂತೆಯು ಕೋರಿಕೆ ಇಟ್ಟಿದ್ದಾರೆ.

ಮೇಕೆದಾಟು ಯೋಜನೆಗೆ ಅನುಮತಿ, ಭದ್ರಾ ಮೇಲ್ದಂಡ ಯೋಜನೆಗೆ ಪ್ರಕಟಿಸಿರುವ ಅನುದಾನ ನೀಡುವಂತೆಯು ಪ್ರಧಾನಿಯವರ ಬಳಿ ನಿವೇದನೆ ಮಾಡಿಕೊಂಡಿದ್ದಾರೆ. ಪ್ರಧಾನಿ ಭೇಟಿಯ ನಂತರ ಹಣಕಾಸು ಸಚಿವರನ್ನು ಭೇಟಿ ಮಾಡಿದ ಮುಖ್ಯಮಂತ್ರಿಯವರು ರಾಜ್ಯದ ಆರ್ಥಿಕ ಪರಿಸ್ಥಿತಿಯನ್ನು ಅವರ ಗಮನಕ್ಕೆ ತಂದಿದ್ದಲ್ಲದೆ, ಕೆಲವು ಮಹತ್ವಾಕಾಂಕ್ಷಿ ಯೋಜನೆಗಳಿಗೆ ಆರ್ಥಿಕ ನೆರವು ನೀಡುವಂತೆ ಕೋರಿಕೆ ಇಟ್ಟಿದ್ದಾರೆ.

ಕೋಲ್ಕತ್ತದಲ್ಲಿ ವಿಧಾನಸಭೆ ಚುನಾವಣೆಗೆ ಬಳಸಿದ್ದ 4,000 ಇವಿಎಂ ಅಗ್ನಿಗಾಹುತಿ

ಕೋಲ್ಕತ್ತ: ಸರ್ಕಾರಿ ಕಟ್ಟಡದಲ್ಲಿ ಸಂಭವಿಸಿದ ಅಗ್ನಿ ಅವಘಡದಲ್ಲಿ 4,000ಕ್ಕೂ ಅಧಿಕ ವಿದ್ಯುನ್ಮಾನ ಮತಯಂತ್ರಗಳು ಸುಟ್ಟು ಹೋಗಿವೆ ಎಂದು ಪಶ್ಚಿಮ ಬಂಗಾಳದ ಅಗ್ನಿಶಾಮಕ ಮತ್ತು ತುರ್ತು ಸೇವೆಗಳ ಸಚಿವ ಕೌಶಿಕ್ ಚೌಧುರಿ ಹೇಳಿದ್ದಾರೆ.

ಈ ಸಂಬಂಧ ಪ್ರಕರಣ ದಾಖಲಿಸಿಕೊಂಡಿರುವ ಪೊಲೀಸರು ತನಿಖೆ ಕೈಗೊಂಡಿದ್ದಾರೆ ಎಂದು ಅವರು ತಿಳಿಸಿದ್ದಾರೆ. ದಕ್ಷಿಣ ಕೋಲ್ಕತ್ತದ ಅಲಿಪೋರ್ ಪ್ರದೇಶದ ಸರ್ಕಾರಿ ಕಟ್ಟಡದ 9ನೇ ಮಹಡಿಯಲ್ಲಿ ಬುಧವಾರ ಅಗ್ನಿ ಅವಘಡ ಸಂಭವಿಸಿದೆ. ಈ ಕಟ್ಟಡದಲ್ಲಿ ದಕ್ಷಿಣ 24 ಪರಗಣ ಜಿಲ್ಲಾ ಪರಿಷತ್ ಕಚೇರಿ ಸೇರಿ ಇತರೆ ಸರ್ಕಾರಿ ಕಚೇರಿಗಳೂ ಇದ್ದವು.

ವಿವಾದ ಇತ್ಯರ್ಥಕ್ಕೆ ಮಧ್ಯಸ್ಥಿಕೆ ನಿರ್ಣಾಯಕ: ಸುಪ್ರೀಂಕೋರ್ಟ್



ನವದೆಹಲಿ: ಭಾರತೀಯ ನ್ಯಾಯಾಂಗವು ಮಧ್ಯಸ್ಥಿಕೆಯನ್ನು ಬಲಿಷ್ಠವಾದ ವಿವಾದ ಪರಿಹಾರ ಕಾರ್ಯ ವಿಧಾನವಾಗಿ ಪ್ರೋತ್ಸಾಹಿಸುತ್ತದೆ ಎಂದು ಮುಖ್ಯ ನ್ಯಾಯಮೂರ್ತಿ ಸೂರ್ಯಕಾಂತ್ ಹೇಳಿದರು.

ಬ್ರಿಟನ್‌ನಲ್ಲಿರುವ ಭಾರತೀಯ ಹೈ ಕಮಿಷನ್ ಕಚೇರಿ ಆಯೋಜಿಸಿದ ತಂತ್ರಜ್ಞಾನ ಮತ್ತು ಮಧ್ಯಸ್ಥಿಕೆ ಭವಿಷ್ಯ ಕುರಿತ ಉನ್ನತ ಮಟ್ಟದ ಚರ್ಚೆಯಲ್ಲಿ ಅವರು ಮಾತನಾಡಿದರು. ಮಧ್ಯಸ್ಥಿಕೆಯನ್ನು ವಿವಾದ ಪರಿಹಾರದ ಪರ್ಯಾಯ ಆಯ್ಕೆಯಾಗಿ ಮಾತ್ರವಲ್ಲ, ಬಲವಾದ ಕಾರ್ಯ ವಿಧಾನವಾಗಿಯೇ ನ್ಯಾಯಾಂಗ ಪರಿಗಣಿಸುತ್ತದೆ ಎಂದರು.

ಸುಪ್ರೀಂಕೋರ್ಟ್‌ನ ಕಾನೂನು ಸೇವೆಗಳ ಸಮಿತಿಯು (ಎಸ್‌ಸಿಎಲ್ ಎಸ್‌ಸಿ) ತರಬೇತಿ ಪಡೆದ ಮಧ್ಯಸ್ಥಿಕೆದಾರರ ದೊಡ್ಡ ತಂಡವನ್ನೇ ರಚಿಸಿದೆ. ಭಾರತದಲ್ಲಿ ಪ್ರತಿ ನಗರದಲ್ಲಿ, ಪ್ರತಿ ■10ನೇ ಪುಟಕ್ಕೆ

ಮಲ್ಲಿಕಾರ್ಜುನ ಖರ್ಗೆ ಸೇರಿ ರಾಜ್ಯದಿಂದ ನಾಲ್ವರು ರಾಜ್ಯಸಭೆಗೆ ಅವಿರೋಧ ಆಯ್ಕೆ



ಮಲ್ಲಿಕಾರ್ಜುನ ಖರ್ಗೆ | ಮನ್ಸೂರ್ ಅಲಿಖಾನ್ | ಪವನ್ ಖೇರಾ | ಪ್ರೊ. ನಾಗರಾಜು

ಬೆಂಗಳೂರು, ಜೂ.11(ಕೆಎಂಶಿ)– ರಾಷ್ಟ್ರೀಯ ಕಾಂಗ್ರೆಸ್ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಸೇರಿದಂತೆ ನಾಲ್ಕು ಮಂದಿ ರಾಜ್ಯ ಸಭೆಗೆ ಅವಿರೋಧವಾಗಿ ಆಯ್ಕೆಗೊಂಡಿದ್ದಾರೆ.

ಮಲ್ಲಿಕಾರ್ಜುನ ಖರ್ಗೆ ಅವರಲ್ಲದೆ, ಎಐಸಿಸಿ ವಕ್ತಾರ ಪವನ್ ಖೇರಾ, ಮನ್ಸೂರ್ ಅಲಿಖಾನ್, ಬಿಜೆಪಿಯ ಪ್ರೊ. ಎಂ.ನಾಗರಾಜು ಅವಿರೋಧವಾಗಿ ಆಯ್ಕೆಗೊಂಡರು. ವಿಧಾನಸಭೆಯಿಂದ ರಾಜ್ಯಸಭೆಯ ನಾಲ್ಕು ಸ್ಥಾನಗಳಿಗೆ ನಡೆದ ಚುನಾವಣೆಯಲ್ಲಿ ಕಾಂಗ್ರೆಸ್‌ನ ಮೂವರು, ಬಿಜೆಪಿಯ ಒಬ್ಬರು ನಾಮಪತ್ರ ಸಲ್ಲಿಸಿದ್ದರು.

ನಾಮಪತ್ರ ಹಿಂತೆಗೆದುಕೊಳ್ಳಲು ಕಡೇ ದಿನವಾದ ಇಂದು, ಯಾವುದೇ ಅಭ್ಯರ್ಥಿ ಕಣದಿಂದ ಹಿಂದೆ ಸರಿಯದಿದ್ದರಿಂದ ವಿಧಾನಸಭೆಯ ಕಾರ್ಯದರ್ಶಿ ಹಾಗೂ ಚುನಾವಣಾಧಿಕಾರಿ ಎಂ.ಕೆ. ವಿಶಾಲಾಕ್ಷಿ ರಾಜ್ಯಸಭೆಗೆ ಈ ಅಭ್ಯರ್ಥಿಗಳು ■10ನೇ ಪುಟಕ್ಕೆ

ಮೈಸೂರು ಜಿಲ್ಲೆಯಲ್ಲಿ 13 ಸಾವಿರ
ಅನರ್ಹ 'ಗೃಹಲಕ್ಷ್ಮಿ' ಫಲಾನುಭವಿಗಳು!

ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆಯಿಂದ ಕಟ್ಟುನಿಟ್ಟಿನ ಪರಿಶೀಲನೆ

● 8 ಸಾವಿರ ಫಲಾನುಭವಿಗಳು ಸಾವು ● 5 ಸಾವಿರ ಫಲಾನುಭವಿಗಳಿಂದ ಜಿಎಸ್‌ಟಿ ಪಾವತಿ ● ನಕಲಿ ಫಲಾನುಭವಿಗಳಿಗೂ ಕೊಕ್ ● ಮತ್ತಷ್ಟು ಪರಿಷ್ಕರಣೆ ಸಾಧ್ಯತೆ

ಮೈಸೂರು, ಜೂ.11(ಬಿಎಲ್‌ಯು)– ಮೈಸೂರು ಜಿಲ್ಲೆಯ ಗೃಹಲಕ್ಷ್ಮಿ ಯೋಜನೆಯ ಫಲಾನುಭವಿಗಳ ಪರಿಷ್ಕರಣೆಯ ಮೊದಲ ಹಂತದಲ್ಲಿ 13 ಸಾವಿರ ಅನರ್ಹ 'ಗೃಹಲಕ್ಷ್ಮಿ' ಫಲಾನುಭವಿಗಳನ್ನು ಗುರುತಿಸಲಾಗಿದೆ.

ರಾಜ್ಯ ಕಾಂಗ್ರೆಸ್ ಸರ್ಕಾರ ಕಳೆದ ಮೂರು ವರ್ಷದ ಹಿಂದೆ ಅಧಿಕಾರಕ್ಕೆ ಬಂದ ಸಂದರ್ಭದಲ್ಲಿ ಗೃಹಲಕ್ಷ್ಮಿ ಯೋಜನೆಯನ್ನು ಜಾರಿಗೊಳಿಸಿ ಪ್ರತಿಯೊಂದು ಕುಟುಂಬದ ಯಜಮಾನಿಗೆ ಎರಡು ಸಾವಿರ ರೂಪಾಯಿ ನೀಡುವುದಾಗಿ ವಾಗ್ದಾನ ಮಾಡಿತ್ತು. ಈ ಸಂಬಂಧ ಪಡಿತರ ಚೀಟಿ, ಆಧಾರ್ ಕಾರ್ಡ್ ಹಾಗೂ ಬ್ಯಾಂಕ್ ಖಾತೆಯೊಂದಿಗೆ ನೋಂದಣಿ ಮಾಡಿಸಿಕೊಳ್ಳುವಂತೆ ಸೂಚನೆ ನೀಡಿತ್ತು.

ಅದರಂತೆ ಕಳೆದ ಮೂರು ವರ್ಷದ ಹಿಂದೆ ಮೈಸೂರು ಜಿಲ್ಲೆಯಲ್ಲಿ 6,99,666 ಫಲಾನುಭವಿಗಳು ನೋಂದಣಿ ಮಾಡಿಸಿಕೊಂಡಿದ್ದರು. ಹೀಗೆ ನೋಂದಣಿ ಮಾಡಿಸಿಕೊಂಡ ಪ್ರತಿ ಕುಟುಂಬದ ಯಜಮಾನಿಗೆ ತಿಂಗಳಿಗೆ 2 ಸಾವಿರ ರೂಪಾಯಿಯನ್ನ ಅವರ ಬ್ಯಾಂಕ್ ಖಾತೆಗೆ ನೇರವಾಗಿ ಪಾವತಿ ಮಾಡಲಾಗುತ್ತಿತ್ತು. ಮೈಸೂರು ಜಿಲ್ಲೆಯ ಗೃಹಲಕ್ಷ್ಮಿ ಫಲಾನುಭವಿಗಳಿಗೆ ರಾಜ್ಯ ಸರ್ಕಾರ ಪ್ರತಿ ವರ್ಷ 134 ಕೋಟಿ ರೂಪಾಯಿಗಳನ್ನು ನೀಡುತ್ತಿದೆ. ಅಂದರೆ ಕಳೆದ ■10ನೇ ಪುಟಕ್ಕೆ



ಮೃತರಿಗೂ ಗೃಹಲಕ್ಷ್ಮಿ ಭಾಗ್ಯ

ಮೈಸೂರು	8000 ಜನ
ಚಾಮರಾಜನಗರ	4739 ಜನ
ಕೊಡಗು	2193 ಜನ
ಮಂಡ್ಯ	9168 ಜನ
ಹಾಸನ	8033 ಜನ

ಗೃಹಲಕ್ಷ್ಮಿ ಯೋಜನೆ ಆರಂಭವಾದಂದಿನಿಂದ ಮೃತಪಟ್ಟವರ ಖಾತೆಗಳಿಗೆ 2000 ರೂ. ಪಾವತಿಯಾಗುತ್ತಾ ಬಂದಿದೆ. ಇದರಿಂದ ಸರ್ಕಾರದ ಬೊಕ್ಕಸಕ್ಕೆ ನೂರಾರು ಕೋಟಿ ನಷ್ಟವಾಗಿದೆ.

60 ಲಕ್ಷ ಮುಟ್ಟುಗೋಲು

ಗೃಹಲಕ್ಷ್ಮಿ ಅನರ್ಹ ಫಲಾನುಭವಿಗಳನ್ನು ಗುರುತಿಸುವ ನಿಟ್ಟಿನಲ್ಲಿ ಸಮಗ್ರವಾಗಿ ಪರಿಶೀಲನೆ ನಡೆಸಲಾಯಿತು. ಇದರಲ್ಲಿ ಸುಮಾರು 8 ಸಾವಿರ ಫಲಾನುಭವಿಗಳು ಮೃತಪಟ್ಟಿರುವುದು ದೃಢಪಟ್ಟಿತು. ಈಗಾಗಲೇ ಅವರ ಖಾತೆಗೆ ಹಣ ಕೂಡ ಜಮಾ ಆಗಿತ್ತು. ಮೃತಪಟ್ಟವರ ಖಾತೆಗೆ ಜಮಾ ಆಗಿದ್ದ ಸುಮಾರು 60 ಲಕ್ಷ ಹಣವನ್ನು ಬ್ಯಾಂಕ್‌ಗಳಿಂದ ವಾಪಾಸು ಪಡೆದು ಅದನ್ನು ಈಗಾಗಲೇ ಸರ್ಕಾರಕ್ಕೆ ವರ್ಗಾಯಿಸಲಾಗಿದೆ.

– ನಾಗರಾಜು
ಉಪ ನಿರ್ದೇಶಕರು, ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ, ಮೈಸೂರು.

ಸೊಸೆ ಇಲ್ಲ ಮಗಳು ಫಲಾನುಭವಿಯಾಗಬಹುದು!

ಗೃಹಲಕ್ಷ್ಮಿ ಯೋಜನೆಯಡಿ ನೋಂದಣಿ ಮಾಡಿಸಿಕೊಂಡಿರುವ ಫಲಾನುಭವಿಗಳಲ್ಲಿ ಅತ್ತೆ ಮೃತಪಟ್ಟಿದ್ದರೆ ಆ ಕುಟುಂಬದ ಸೊಸೆ ಹಾಗೂ ತಾಯಿ ಮೃತಪಟ್ಟಿದ್ದರೆ ಮಗಳು ಈಗ ಗೃಹಲಕ್ಷ್ಮಿ ಯೋಜನೆಯ ಫಲಾನುಭವಿಯಾಗಲು ಅರ್ಹತೆ ಹೊಂದಿರುತ್ತಾರೆ.

ಅತ್ತೆ ಅಥವಾ ತಾಯಿ ಮೃತಪಟ್ಟಿದ್ದರೆ ಅವರ ಮರಣ ಪ್ರಮಾಣ ಪತ್ರವನ್ನು ಸಲ್ಲಿಸಿ ಸೊಸೆ ಅಥವಾ ಮಗಳು ಗೃಹಲಕ್ಷ್ಮಿ ಯೋಜನೆಗೆ ನೋಂದಣಿ ಮಾಡಿಸಿಕೊಂಡರೆ ಕುಟುಂಬದ ಈ ಯಜಮಾನಿಗೆ ತಿಂಗಳಿಗೆ ತಲಾ ಎರಡು ಸಾವಿರ ರೂಪಾಯಿ ಅವರ ಬ್ಯಾಂಕ್ ಖಾತೆಗೆ ಪಾವತಿ ಆಗುತ್ತದೆ. ಆದರೆ ಸೊಸೆ ಅಥವಾ ಮಗಳು ಜಿಎಸ್ ಟಿ ಪಾವತಿ ಮಾಡುತ್ತಿದ್ದರೆ ಫಲಾನುಭವಿಯಾಗುವ ಅರ್ಹತೆ ಕಳೆದುಕೊಳ್ಳುತ್ತಾರೆ.

ನಕ್ಕರೆ ಅದೇ ಸ್ವರ್ಗ

ಶ್ಯಾಮ್ : ಹೆಂಡತಿಯರನ್ನು ಖುಷಿಯಾಗಿ ಇಡೋದೆ ಕಷ್ಟ. ಏನ್ ಮಾಡಬೇಕು ಅಂತ ತಲೆಕೆಟ್ಟೋಗಿದೆ

ರಾಮ್ : ಹೆಂಡತಿಯನ್ನು ಖುಷಿಯಾಗಿ ಇಡುವ ಅತ್ಯುತ್ತಮ ವಿಧಾನವೆಂದರೆ, ನಿಮ್ಮ ಪರ್ಸ್‌ನ ಬಾಯಿ ಯಾವಾಗಲೂ ತೆರೆದಿರಬೇಕು ಮತ್ತು ನಿಮ್ಮ ಬಾಯಿ ಮುಚ್ಚಿರಬೇಕು ಅಷ್ಟೆ!

ಮೈಸೂರು ಮಿತ್ರ

ಶುಕ್ರವಾರ, ಜೂನ್ 12, 2026

ಸತ್ಯೇನೋತ್ತಭಿತಾ ಭೂಮಿಃ ನ ಹಿ ಸತ್ಯಾತ್ಪರೋ ಧರ್ಮಃ

(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)

ಸಂಪಾದಕ: ಎಂ.ಗೋವಿಂದೇಗೌಡ M.A.

ಅಮೃತ ವಾಹಿನಿ..........

ಎಲ್ಲದರಲ್ಲೂ ಎಲ್ಲರಲ್ಲೂ ಒಳ್ಳೆಯದನ್ನೇ ಗುರುತಿಸಲು ಸಾಧ್ಯವಾಗುವಂತೆ ನಮ್ಮ ಮನಸ್ಸನ್ನು ತರಬೇತುಗೊಳಿಸಬೇಕು.

ವೇದ ಸುಳ್ಳಾದರೂ ಗಾದೆ ಸುಳ್ಳಾಗದು } ಹಾಲಿಗೆ ಹುಳಿ ಹಿಂಡಿದರೆ ಮೊಸರು, ಮಣ್ಣಿಗೆ ನೀರು ಹಾಕಿದರೆ ಕೆಸರು.

ನಿಮ್ಮ ಪತ್ರಗಳು

ಶುದ್ಧ ಕುಡಿಯುವ ನೀರು ಪೂರೈಸಿ



ಮಾನ್ಯರೆ,

ಮೈಸೂರಿನ ಮಂಡಿಮೊಹಲ್ಲಾದ ಸೊಪ್ಪಿನಕೇರಿ 1ನೇ ಕ್ರಾಸ್ ನ ಬೀದಿಯಲ್ಲಿನ ಮನೆಗಳ ನಲ್ಲಿಗಳಲ್ಲಿ ಕಲುಷಿತ ನೀರು ಬರುತ್ತಿದೆ. ಈ ನೀರು ಕುಡಿಯುವುದಕ್ಕೆ ಯೋಗ್ಯವಲ್ಲ. ಜೆಸ್ಕೋದವರು ಹಾಕಿದ ಪೈಪ್‌ಲೈನ್‌ನಿಂದ ಬರುವ ಈ ನೀರಲ್ಲಿ ಒಳ ಚರಂಡಿ ನೀರು ಮಿಶ್ರಣವಾಗಿರುವ ಅನುಮಾನವಿದೆ. ಇತ್ತೀಚೆಗೆ ಬರುತ್ತಿರುವ ನೀರು ದುರ್ವಾಸನೆಯಿಂದಲೂ ಕೂಡಿದೆ. ಈ ಬಗ್ಗೆ ಯಾದವಗಿರಿಯ ವಾಣಿ ವಿಲಾಸ ನೀರು ಸರಬರಾಜು ವಿಭಾಗ ಹಾಗೂ ಮೈಸೂರು ನಗರ ಪಾಲಿಕೆ ಅಧಿಕಾರಿಗಳು ಗಮನಹರಿಸಿ ಶುದ್ಧವಾದ ಕುಡಿಯುವ ನೀರನ್ನು ಕಲ್ಪಿಸಿಕೊಡಬೇಕೆಂದು ಮನವಿ.

– ಶಿವ ಶಂಕರ, ಸೊಪ್ಪಿನಕೇರಿ, ಮಂಡಿ ಮೊಹಲ್ಲಾ

ಮೈಸೂರು ನಗರ ಬಸ್ ನಿಲ್ದಾಣದಲ್ಲಿ ಬೀದಿನಾಯಿಗಳ ಹಾವಳಿ ತಪ್ಪಿಸಿ

ಮಾನ್ಯರೇ

ಮೈಸೂರು ನಗರ ಬಸ್ ನಿಲ್ದಾಣದಲ್ಲಿ ಬಿದಿನಾಯಿಗಳ ಹಾವಳಿ ವಿಪರೀತವಾಗಿದೆ. ದಿನನಿತ್ಯ ಬೊಗಳುತ್ತಾ, ಕಚ್ಚಾಡುತ್ತ ಬಸ್ಸಿಗಾಗಿ ಕಾಯುತ್ತಿರುವ ಪ್ರಯಾಣಿಕರಲ್ಲಿ ಭಯ ಹುಟ್ಟಿಸುತ್ತಿವೆ. ಮಾನ್ಯ ಸರ್ವೋಚ್ಚ ನ್ಯಾಯಾಲಯವು ತನ್ನ ಇತ್ತೀಚಿನ ಆದೇಶದಲ್ಲಿ ರೈಲು ನಿಲ್ದಾಣ, ಬಸ್ ನಿಲ್ದಾಣ, ಆಸ್ಪತ್ರೆ, ಶಿಕ್ಷಣ ಸಂಸ್ಥೆ ಮತ್ತಿತರ ಸಾರ್ವಜನಿಕ ಸ್ಥಳಗಳಲ್ಲಿ ಬೀದಿನಾಯಿಗಳ ಹಾವಳಿಯನ್ನು ನಿವಾರಿಸುವಂತೆ ಆದೇಶ ನೀಡಿರುವುದರಿಂದ ಸಂಬಂಧಪಟ್ಟ ಮೈಸೂರು ಮಹಾನಗರ ಪಾಲಿಕೆ ಅಧಿಕಾರಿಗಳು ಇತ್ತ ಗಮನಹರಿಸಿ ಮೈಸೂರು ನಗರ ಬಸ್ ನಿಲ್ದಾಣದ ಪ್ರಯಾಣಿಕರಲ್ಲಿ ಭೀತಿ ಮೂಡಿಸಿರುವ ನಾಯಿಗಳ ಹಾವಳಿಯನ್ನು ತಪ್ಪಿಸಬೇಕೆಂದು ಮನವಿ.

– ಸರೋಜಮ್ಮ, ನಿವೃತ್ತ ಶಿಕ್ಷಕಿ ಜೆ.ಪಿ.ನಗರ ಮೈಸೂರು

ಪರಿಸರ ಶಿಕ್ಷಣ ಸುಧಾರಣೆ ಕಾಣಲಿ

ಮಾನ್ಯರೇ,

ನಮ್ಮ ದೇಶವು ಹವಾಮಾನ ವೈಪರೀತ್ಯಕ್ಕೆ ತುತ್ತಾಗುವ ಅಪಾಯದಲ್ಲಿದ್ದರೂ, ಭಾರತದ ಶಾಲಾ ಪಠ್ಯಕ್ರಮಗಳು ಪರಿಸರ ವಿಜ್ಞಾನವನ್ನು ಕೇವಲ ನೆನಪಿಟ್ಟುಕೊಳ್ಳುವ ವಿಷಯವನ್ನಾಗಿ ಮಾಡಿವೆ. ಅಂತರರಾಷ್ಟ್ರೀಯ ಪಠ್ಯಕ್ರಮಗಳು ಕಾರ್ಬನ್ ಎಕನಾಮಿಕ್ಸ್ (ಇಂಗಾಲದ ಅರ್ಥಶಾಸ್ತ್ರ) ಮತ್ತು ಪರಿಸರ ವ್ಯವಸ್ಥೆಗಳ ಪರಸ್ಪರ ಸಂಬಂಧವನ್ನು ಕಲಿಸಿದರೆ, ಸಿ.ಬಿ.ಎಸ್.ಇ ಮತ್ತು ರಾಜ್ಯ ಮಂಡಳಿಗಳು ಕೇವಲ ಮಾಲಿನ್ಯದ ವ್ಯಾಖ್ಯಾನಗಳನ್ನು ಕಂಠಪಾಠ ಮಾಡಿಸುತ್ತವೆ. ಸಂಶೋಧನೆಗಳ ಪ್ರಕಾರ ಶೇಕಡಾ 80 ಕ್ಕಿಂತ ಹೆಚ್ಚು ವಿದ್ಯಾರ್ಥಿಗಳು ಜಾಗತಿಕ ತಾಪಮಾನ ಏರಿಕೆಯನ್ನು ವ್ಯಾಖ್ಯಾನಿಸ ಬಲ್ಲರು. ಆದರೆ ಸ್ಥಳೀಯ ಹವಾಮಾನ ನೀತಿಗಳನ್ನು ಗುರುತಿಸಲು ವಿಫಲರಾಗುತ್ತಾರೆ. ನಾವು ನಿಷ್ಕ್ರಿಯ ಜ್ಞಾನದಿಂದ ಸಕ್ರಿಯ ನಾಗರಿಕ ವಿಜ್ಞಾನದತ್ತ ತುರ್ತಾಗಿ ಬದಲಾಗಬೇಕಿದೆ. ಶಿಕ್ಷಣ ಸಚಿವಾಲಯವು ಪ್ರಾಯೋಗಿಕ ಪರಿಸರ ಅರ್ಥಶಾಸ್ತ್ರವನ್ನು ಕಡ್ಡಾಯಗೊಳಿಸಬೇಕು. ಸ್ಥಳೀಯ ಕೆರೆಗಳ ನೀರಿನ ಗುಣಮಟ್ಟದ ಮೇಲ್ವಿಚಾರಣೆ ಮತ್ತು ಇಂಗಾಲದ ಹೆಜ್ಜೆಗುರುತು (ಕಾರ್ಬನ್ ಫುಟ್‌ಪ್ರಿಂಟ್) ನಕ್ಷೆ ತಯಾರಿಕೆಯನ್ನು ಶಾಲಾ ಗ್ರೇಡಿಂಗ್‌ಗೆ ಅಳವಡಿಸುವುದರಿಂದ ವಿದ್ಯಾರ್ಥಿಗಳನ್ನು ಕೇವಲ ಪಠ್ಯಪುಸ್ತಕ ಓದುಗರಿಗಿಂತ ನಿಜವಾದ ಪರಿಸರ ರಕ್ಷಕರನ್ನಾಗಿ ಪರಿವರ್ತಿಸಬಹುದು.

–ಡಾ. ಎಚ್.ಕೆ. ವಿಜಯಕುಮಾರ್, ಮೈಸೂರು.

'ನಮ್ಮ ಕ್ಲಿನಿಕ್'ನಲ್ಲಿ ರಕ್ತ ಪರೀಕ್ಷಿಸುವ ಉಪಕರಣಗಳೇ ಇಲ್ಲ

ಮಾನ್ಯರೆ,

ಮೈಸೂರಿನ ವಿಜಯನಗರ 4ನೇ ಹಂತ, 2ನೇ ಘಟ್ಟ, ಮೈಸೂರು ರಾಜಾರಾಮಣ್ಣ ಸರ್ಕಲ್ ಪಕ್ಕ 'ನಮ್ಮ ಕ್ಲಿನಿಕ್' ತೆರೆದಿದ್ದಾರೆ. ಅಲ್ಲಿ ರಕ್ತ ಪರೀಕ್ಷಿಸಲು ಸೂಕ್ತ ರಕ್ತ ಸಂಗ್ರಹಣೆ ಮಾಡುವ ಉಪಕರಣಗಳೇ ಇಲ್ಲ. ಈ ಉಪಕರಣಗಳಿಗೆ ಇಂಡೆಂಟ್ ಹಾಕಿ ಜಿಲ್ಲಾ ಆಸ್ಪತ್ರೆಗೆ ಕಳುಹಿಸಲಾಗಿದೆ. ಇನ್ನೂ ಬಂದಿಲ್ಲ ಎಂದು ಒಂದು ತಿಂಗಳಿಂದ ಅಲ್ಲಿಯ ಸಿಬ್ಬಂದಿ ಹೇಳುತ್ತಿದ್ದಾರೆ. ಹಾಗಾದರೆ ಮೈಸೂರಿನ ಜಿಲ್ಲಾ ಆಸ್ಪತ್ರೆಯಲ್ಲಿ ಈ ಉಪಕರಣಗಳಿಲ್ಲವೇ? ರಕ್ತ ಪರೀಕ್ಷೆಗೆ ಈ ಭಾಗದ ಸಾರ್ವಜನಿಕರು ಒಂದು ತಿಂಗಳಿಂದ ತಿರುಗುತ್ತಿದ್ದಾರೆ. ಜಿಲ್ಲಾ ವೈದ್ಯಾಧಿಕಾರಿಗಳು ಈ ಉಪಕರಣಗಳನ್ನು ನೀಡಲು ತುರ್ತು ಕ್ರಮ ಕೈಗೊಳ್ಳುವಂತೆ ಈ ಮೂಲಕ ಮನವಿ ಮಾಡುತ್ತೇವೆ.


– ಬಿ.ಜಿ. ರಂಗೇಗೌಡ, ವಿಜಯನಗರ 4ನೇ ಹಂತ, ಮೈಸೂರು.

ದೇವೇಗೌಡರ ನಿರಾಸೆ ಹಾಗೂ ನೆಮ್ಮದಿ!

ಮಾನ್ಯರೆ,

ದೇವೇಗೌಡರಿಗೆ ರಾಜ್ಯಸಭಾ ಟಿಕೆಟ್ ಕೈ ತಪ್ಪಿದ್ದು
ಕರ್ನಾಟಕದ ಜನರಿಗೆ ಮಾಡಿದ ಅವಮಾನ
ಎಂದು ಭಾವಿಸಿ ತಪ್ಪು ತಿಳಿಯುವುದಕ್ಕಿಂತ...
ಇಳಿ ವಯಸ್ಸಿನಲ್ಲಿರುವ ದೇವೇಗೌಡರು
ತಮ್ಮ ಆರೋಗ್ಯದ ಮೇಲೆ
ಇನ್ನಷ್ಟು ಕಾಳಜಿ, ಕಳಕಳಿ ತೋರಿಸಿಕೊಂಡು
ಶತಕದ ಗಡಿದಾಟಲೆಂದು ಪಕ್ಷದ ಹಿರಿಯರು
ಹರಸಿ ಹಾರೈಸಿದ್ದಾರೆಂದು ಭಾವಿಸೋಣ!

–ಹರಳಹಳ್ಳಿ ಪುಟ್ಟರಾಜು, ಪಾಂಡವಪುರ.



ಸದ್ಗುರು
ಸಂಸ್ಥಾಪಕರು,
ಇಶಾ ಫೌಂಡೇಷನ್

ಅನುಭಾವದ ಚಿಂತನೆಗಳು

ಜನರ ನಿರೀಕ್ಷೆಗಳು ನಿಮ್ಮನ್ನು ಕೆಳಕ್ಕೆ ತಳ್ಳುತ್ತಿವೆಯೇ?

ಬೇರೆ ಬೇರೆ ಜನರಿಗೆ ನಿಮ್ಮ ಕುರಿತು ಬೇರೆ ಬೇರೆ ನಿರೀಕ್ಷೆಗಳಿರುತ್ತವೆ. ಈ ನಿರೀಕ್ಷೆಗಳು ಒಂದನ್ನೊಂದು ತುಳಿಯುತ್ತಿರುತ್ತವೆ. ನಿಮ್ಮ ಹೆಂಡತಿಗೆ ನೀವು ಸಂಜೆ 5:30ಕ್ಕೆ ಮನೆಗೆ ಬರಬೇಕು ಎಂಬ ನಿರೀಕ್ಷೆ ಇದ್ದರೆ, ನಿಮ್ಮ ಬಾಸ್‌ಗೆ ನೀವು ರಾತ್ರಿ 7:30ರವರೆಗೆ ಆಫೀಸಿನಲ್ಲಿರಬೇಕು ಎಂಬ ನಿರೀಕ್ಷೆ ಇರುತ್ತದೆ. ದಿನದಲ್ಲಿ ಇರುವುದು ಕೇವಲ ಇಪ್ಪತ್ನಾಲ್ಕು ಗಂಟೆಗಳಾದರೂ, ನೀವು ನಿಮ್ಮ ತಂದೆತಾಯಂದಿರ, ನಿಮ್ಮ ಮಕ್ಕಳ, ನಿಮ್ಮ ಬಾಸ್‌ನ ಮತ್ತು ಎಲ್ಲಕ್ಕಿಂತ ಮಿಗಿಲಾಗಿ ನಿಮ್ಮ ಸಂಗಾತಿಯ ನಿರೀಕ್ಷೆಗಳನ್ನು ಪೂರೈಸಬೇಕಾದರೆ, ನಿಮಗೆ ವಾಸ್ತವದಲ್ಲಿ ದಿನಕ್ಕೆ ಅರವತ್ತು ಗಂಟೆಗಳು ಬೇಕಾಗುತ್ತವೆ. 'ಈ ಹೆಚ್ಚುವರಿ ಸಮಯವನ್ನು ನಾನು ಎಲ್ಲಿಂದ ತರಲಿ?' ಎನ್ನುವುದೇ ಈಗಿರುವ ಪ್ರಶ್ನೆ.

ಸದ್ಯದಲ್ಲಿ, ನಿಮ್ಮ ಸಾಮರ್ಥ್ಯಗಳಿಗೆ ಮೀರಿದ ನಿರೀಕ್ಷೆಗಳನ್ನು ಜನರು ನಿಮ್ಮ ಮೇಲೆ ಇರಿಸಿಕೊಂಡಿದ್ದಾರೆ. ಅದನ್ನು ಶಪಿಸದಿರಿ. ಜನರು ನಿಮ್ಮಿಂದ ದೊಡ್ಡ ಸಂಗತಿಗಳನ್ನು ನಿರೀಕ್ಷಿಸುತ್ತಿರುವುದು ಒಂದು ಬಹುದೊಡ್ಡ ವರವೇ ಸರಿ. ಜನರು ನಿಮ್ಮನ್ನು ನೋಡಿ, 'ಓಹ್! ಇವನಿಂದ ನಾವು ಯಾವ ನಿರೀಕ್ಷೆಯನ್ನೂ ಇಟ್ಟುಕೊಳ್ಳಲು ಸಾಧ್ಯವಿಲ್ಲ' ಎಂದುಕೊಂಡು, ನಿಮ್ಮಿಂದ ಯಾವುದೇ ನಿರೀಕ್ಷೆಗಳನ್ನು ಹೊಂದದೇ ಇದ್ದರೆ ಅದು ನಿಮಗೆ ಒಳ್ಳೆಯದು ಎಂದುಕೊಂಡಿದ್ದೀರೇನು? ನಿಮ್ಮ ಬಾಸ್‌ಗೆ ನಿಮ್ಮಿಂದ ಯಾವ ನಿರೀಕ್ಷೆಯೂ ಇರದಿದ್ದರೆ, ನಿಮ್ಮನ್ನು ಕೆಲಸದಿಂದ ತೆಗೆದುಹಾಕಲಾಗುತ್ತದೆ. ಅವರೆಲ್ಲರೂ ನಿಮ್ಮಿಂದ ಹಲವಾರು ವಿಷಯಗಳನ್ನು ನಿರೀಕ್ಷಿಸುತ್ತಿದ್ದಾರೆ. ಇದು ನಿಮಗಿರುವ ಮಿತಿಗಳನ್ನು ಮೀರಿ ಹೋಗಲು ಮತ್ತು ಜೀವನದಲ್ಲಿ ಏನನ್ನಾದರೂ ಸಾಧಿಸಲು ಒಂದು ಸುವರ್ಣಾವಕಾಶ.

ಇದರರ್ಥ ನೀವು ಎಲ್ಲರ ನಿರೀಕ್ಷೆಗಳನ್ನು ಪೂರೈಸಲು ಏನಾದರೂ ಅತ್ಯುತ್ತಮವಾದುದನ್ನು ಮಾಡುತ್ತೀರಿ ಎಂದೇ? ಅದೆಂದಿಗೂ ಸಾಧ್ಯವಿಲ್ಲ. ಆದರೆ, ಅವರೆಲ್ಲರೂ ಸಹ ನೀವು ನೀಡಬಹುದಾದಕ್ಕಿಂತ ಹೆಚ್ಚಿನದನ್ನು ನಿರಂತರವಾಗಿ ನಿಮ್ಮಿಂದ ನಿರೀಕ್ಷಿಸುತ್ತಿದ್ದರೆ, ಅದರರ್ಥ ನಿಮ್ಮ ಜೀವನ ಚೆನ್ನಾಗಿ ನಡೆಯುತ್ತಿದೆ ಎಂದು. ನಿಮ್ಮ ಅಭ್ಯುದಯವನ್ನು ಆನಂದಿಸಿ, ಅದನ್ನು ದೂಷಿಸಬೇಡಿ. ನಿಮ್ಮಿಂದ ಮಾಡಲು ಸಾಧ್ಯವಾಗುವುದನ್ನು ಅತ್ಯುತ್ತಮವಾಗಿ ಮಾಡಿ ಅಷ್ಟೆ.

ಇದು ನಿಮ್ಮ ಚಟುವಟಿಕೆಯಲ್ಲಿ ನಿಖರವಾಗಿರುವುದರ ಬಗ್ಗೆಯಲ್ಲ. ಜೀವನದಲ್ಲಿ ನಿಖರತೆ ಎನ್ನುವಂತದ್ದೇನೂ ಇಲ್ಲ. ನಿಖರವಾಗಿ ಆಗುವ ಒಂದೇ ಒಂದು ವಿಷಯವೆಂದರೆ, ಅದು ಸಾವು. ನೀವು ನಿಖರತೆಯನ್ನು ಬಯಸಿದರೆ, ಅರಿವಿಲ್ಲದಂತೆಯೇ ನೀವು ಸಾವನ್ನು ಹುಡುಕುತ್ತಿರುತ್ತೀರಿ. ಜೀವನದಲ್ಲಿ ನಿಖರತೆಯನ್ನು ಅರಸಬೇಡಿ. ನೀವು ಯಾವುದೇ ನ್ಯೂನತೆಗಳನ್ನು ಹೊಂದಿಲ್ಲದ ಕಾರಣದಿಂದ ಜೀವನವು ಸುಂದರವಾಗುವುದಿಲ್ಲ. ಜೀವನವು ಸುಂದರವಾಗುವುದು ನೀವು ಮಾಡುವ ಎಲ್ಲವನ್ನೂ ಮನಃಪೂರ್ವಕವಾಗಿ ಮಾಡುತ್ತೀರಿ ಎಂಬ



> ಯಾರ ನಿರೀಕ್ಷೆಗಳೂ ಇಲ್ಲದೆಯೇ ನಿಮ್ಮನ್ನು ನೀವು ನಿಮ್ಮ ಪರಮ ಮಿತಿಗೆ ವಿಸ್ತರಿಸಿಕೊಳ್ಳಲು ಸಂಪೂರ್ಣವಾಗಿ ಬೇರೆಯದ್ದೇ ರೀತಿಯ ಪ್ರಜ್ಞೆ ಮತ್ತು ಜಾಗೃತಿಯ ಅವಶ್ಯಕತೆ ಇರುತ್ತದೆ. ಅದಕ್ಕಾಗಿ ನಿಮ್ಮೊಳಗಿನ ಬೇರೆ ಒಂದು ಅಂಶ ಬೇಕಾಗುತ್ತದೆ. ಸದ್ಯಕ್ಕೆ ನೀವು ಹಾಗಿಲ್ಲ. ಜನರ ನಿರೀಕ್ಷೆಗಳಿಂದ ಮಾತ್ರ ನೀವು ಮುನ್ನಡೆಯುತ್ತಿದ್ದೀರಿ. ಹಾಗಾಗಿ ಅವರು ನಿಮ್ಮಿಂದ ದೊಡ್ಡ ದೊಡ್ಡ ವಿಷಯಗಳನ್ನು ನಿರೀಕ್ಷಿಸಲು ಬಿಡಿ. ನೀವು ಪರಿಸ್ಥಿತಿಗಳನ್ನು ನಿಮ್ಮ ಕೈಲಾದ ಮಟ್ಟಕ್ಕೆ ನಿಭಾಯಿಸಿ.

ಕಾರಣಕ್ಕಾಗಿ. ಜೀವನವು ಎಂದಿಗೂ ಅತ್ಯುತ್ತಮವಾಗುವುದಿಲ್ಲ.

ಏಕೆಂದರೆ ನೀವೀಗ ಎಂಥದ್ದೇ ರೀತಿಯಲ್ಲಾದರೂ ಕಾರ್ಯನಿರ್ವಹಿಸುತ್ತಲಿರಿ. ಆದರೆ ಅದನ್ನು ನೀವು ಇನ್ನೂ ಸ್ವಲ್ಪ ಉತ್ತಮವಾಗಿ ಮಾಡಬಹುದು, ಅಲ್ಲವೇ? ಆದ್ದರಿಂದ ಇಲ್ಲಿ ಅತ್ಯುತ್ತಮ ಎನ್ನುವ ಪ್ರಶ್ನೆಯಿಲ್ಲ. ದೊಡ್ಡ ನಿರೀಕ್ಷೆಗಳಿರುವಾಗ ಮಾತ್ರ, ನೀವು ನಿಮ್ಮ ಮಿತಿಗಳನ್ನು ಮೀರಿ ವಿಸ್ತರಿಸಿ ಹೋಗುತ್ತೀರಿ. ನೀವು ವಿಸ್ತರಿಸಿಕೊಳ್ಳಬಹುದು ಎಂದಾದರೆ, ನೀವಿನ್ನೂ ನಿಮ್ಮ ಮಿತಿಯನ್ನು ತಲುಪಿಲ್ಲ ಎಂದರ್ಥ. ಯಾವುದೇ ನಿರೀಕ್ಷೆಗಳು ಇಲ್ಲದೇ ಹೋದರೆ, ನೀವು ನಿಮ್ಮ ಸಂಪೂರ್ಣ ಸಾಮರ್ಥ್ಯವನ್ನು ಎಂದಿಗೂ ಕಂಡುಕೊಳ್ಳುವುದಿಲ್ಲ.

ಯಾರ ನಿರೀಕ್ಷೆಗಳೂ ಇಲ್ಲದೆಯೇ ನಿಮ್ಮನ್ನು ನೀವು ನಿಮ್ಮ ಪರಮ ಮಿತಿಗೆ ವಿಸ್ತರಿಸಿಕೊಳ್ಳಲು ಸಂಪೂರ್ಣವಾಗಿ ಬೇರೆಯದ್ದೇ ರೀತಿಯ ಪ್ರಜ್ಞೆ ಮತ್ತು ಜಾಗೃತಿಯ ಅವಶ್ಯಕತೆ ಇರುತ್ತದೆ. ಅದಕ್ಕಾಗಿ ನಿಮ್ಮೊಳಗಿನ ಬೇರೆ ಒಂದು ಅಂಶ ಬೇಕಾಗುತ್ತದೆ. ಸದ್ಯಕ್ಕೆ ನೀವು ಹಾಗಿಲ್ಲ. ಜನರ ನಿರೀಕ್ಷೆಗಳಿಂದ ಮಾತ್ರ ನೀವು ಮುನ್ನಡೆಯುತ್ತಿದ್ದೀರಿ. ಹಾಗಾಗಿ ಅವರು ನಿಮ್ಮಿಂದ ದೊಡ್ಡ ದೊಡ್ಡ ವಿಷಯಗಳನ್ನು ನಿರೀಕ್ಷಿಸಲು ಬಿಡಿ. ನೀವು ಪರಿಸ್ಥಿತಿಗಳನ್ನು ನಿಮ್ಮ ಕೈಲಾದ ಮಟ್ಟಕ್ಕೆ ನಿಭಾಯಿಸಿ. ಕೆಲವೊಂದು ಸಂಗತಿಗಳು ಯಾವಾಗಲೂ ನಿಮ್ಮ ನಿಯಂತ್ರಣದಿಂದ ಹೊರಗಿರುತ್ತವೆ. ನೀವು ಹೆಚ್ಚು ಹೆಚ್ಚು ವಿಷಯಗಳಲ್ಲಿ ತೊಡಗಿಸಿಕೊಂಡಂತೆಲ್ಲಾ, ನಿಮ್ಮ ಜೀವನದಲ್ಲಿ ಹೆಚ್ಚು ಹೆಚ್ಚು ವಿಷಯಗಳು ತಪ್ಪಾಗುತ್ತವೆ. ಆದರೆ ಅದಕ್ಕಿಂತ ಹೆಚ್ಚು ವಿಷಯಗಳು ಸರಿಯಾಗಿ ನಡೆಯುತ್ತವೆ. ಯಾವುದನ್ನಾದರೂ ಪೂರೈಸುವೆನೋ ಇಲ್ಲವೋ ಎಂಬ ಪರಿಭಾಷೆಯಲ್ಲಿ ನೀವು ನಿಮ್ಮ ಜೀವನದ ಗುಣಮಟ್ಟ ಅಥವಾ ನಿಮ್ಮ ಜೀವನದ ಯಶಸ್ಸನ್ನು ಅಳೆಯಬಾರದು. ನಿಮ್ಮನ್ನು ನೀವು ಸಂಪೂರ್ಣವಾಗಿ ಸಮರ್ಪಿಸಿಕೊಂಡಿದ್ದೀರೇ ಎನ್ನುವುದರ ಮೇಲೆ ಅದನ್ನು ಅಳೆಯಬೇಕು. ನಿಮ್ಮ ಸಾಮರ್ಥ್ಯ, ಪರಿಸ್ಥಿತಿಗಳು ಮತ್ತು ಇನ್ನಿತರೆ ಸಂಗತಿಗಳು ಹೇಗೆ ಕೂಡಿಬರುತ್ತವೆ ಎನ್ನುವುದಕ್ಕೆ ಅನುಸಾರವಾಗಿ ಏನಾಗಬೇಕೋ ಅದು ಆಗುತ್ತದೆ. ಅದರಲ್ಲಿ ಅನೇಕ ವಿಷಯಗಳು ಒಳಗೊಂಡಿರುತ್ತವೆ. ಆದರೆ ನಿಮ್ಮ ಜೀವನದಲ್ಲಿ ನಿಮಗೇನು ಮುಖ್ಯವೋ ಅದಕ್ಕಾಗಿ ನಿಮ್ಮನ್ನು ನೀವು ನೂರಕ್ಕೆ ನೂರರಷ್ಟು ಸಮರ್ಪಿಸಿಕೊಂಡಿದ್ದೀರೇ? ಅದೇ ಪ್ರಶ್ನೆ.

ಮಹತ್ತರವಾದ ಪ್ರಾಮುಖ್ಯತೆಯನ್ನು ಹೊಂದಿರುವಂತದ್ದೇನನ್ನೂ ನೀವು ಕೈಗೆತ್ತಿಕೊಂಡಿಲ್ಲ. ನೀವೇನಿದ್ದರೂ ಕೆಲಸಕ್ಕೆ ಹೋಗುತ್ತೀರಿ, ನಿಮ್ಮ ಕುಟುಂಬವನ್ನು ನಿರ್ವಹಿಸುತ್ತೀರಿ–ಇದು ಕೇವಲ ಬದುಕುಳಿಯುವಿಕೆ ಅಷ್ಟೆ, ಅದೇನೂ ಅಂತಹ ದೊಡ್ಡ ವಿಷಯವಲ್ಲ. ಇದನ್ನು ಮಾಡಲು ವಿಶೇಷವಾದದ್ದೇನೂ ಬೇಕಿಲ್ಲ. ಆದರೆ, ಬಹಳಷ್ಟು ಜನರು ಇದನ್ನು ತಮ್ಮ ಜೀವಿತಾವಧಿಯ ಪ್ರಯಾಸವನ್ನಾಗಿಸಿಕೊಂಡಿದ್ದಾರೆ. ಅವರ ಇಡೀ ಜೀವನದ ಉದ್ದೇಶ ಹೊಟ್ಟೆಪಾಡಿಗಾಗಿ ಕೆಲಸ ಮಾಡಿ ಹೇಗೋ ಒಂದು ಬದುಕುಳಿಯುವುದೇ ಆಗಿದೆ. ಅದು ಹಾಗೆಯೇ ಇರಬೇಕು ಎಂದೇನಿಲ್ಲ. ಮಾನವರು ಇದಕ್ಕಿಂತ ಬಹಳಷ್ಟು ಹೆಚ್ಚಿನ ಸಾಮರ್ಥ್ಯವನ್ನು ಹೊಂದಿದ್ದಾರೆ. ಈ ಸಾಮರ್ಥ್ಯವು ಅಭಿವ್ಯಕ್ತವಾಗಬೇಕಾದರೆ, ನಿಮ್ಮ ಮನಸ್ಸು ಸಾಕಷ್ಟು ತಿಳಿಯಾಗಬೇಕು. ಇದನ್ನು ಮಾಡಲು ಸರಳ ಸಾಧನ ಮತ್ತು ಅಭ್ಯಾಸಗಳಿವೆ. ಅವುಗಳನ್ನು ನೀವು ನಿಶ್ಚಿತ ಅವಧಿಯವರೆಗೆ ಮಾಡಿದರೆ, ನಿಮ್ಮ ಮನಸ್ಸು ತಿಳಿಯಾಗುವುದನ್ನು ನೀವೇ ನೋಡುತ್ತೀರಿ ಮತ್ತು ನೀವು ಯಾವುದೇ ವಿಷಯಗಳನ್ನು ಸ್ಪಷ್ಟವಾಗಿ ನೋಡಬಲ್ಲವರಾಗುತ್ತೀರಿ, ಏಕೆಂದರೆ ಇದು ನಿಮ್ಮ ಸಾಮರ್ಥ್ಯದಿಂದಾಚೆಗೆ ಇರುವಂತದ್ದಲ್ಲ. ಇದು ನೀವು ಮಾಡಬಹುದಾದಂತಹ ವಿಷಯವಾಗಿದ್ದು ಅದನ್ನು ನಿಮಗಾಗಿ ಸಾಧ್ಯವಾಗಿಸಿಕೊಳ್ಳಲು ನೀವು ಬದ್ಧರಾಗಬೇಕು.

ಸಹಕಾರ ಕ್ಷೇತ್ರದ ಸೇವಾ ರತ್ನ ಶ್ರೀಮತಿ ಲಲಿತಾ ಜಿ.ಟಿ.ದೇವೇಗೌಡ

> ನನಗೆ ಈವರೆಗೆ ದಕ್ಕಿರುವ ಗೌರವವು ನಿಜಕ್ಕೂ ನನ್ನ ಪೂರ್ವಜನ್ಮದ ಸುಕೃತವಾಗಿದೆ. ಅಧಿಕಾರ ಶಾಶ್ವತವಲ್ಲ ಎಂಬ ಸತ್ಯದ ಅರಿವಿರುವ ನಮ್ಮ ಕುಟುಂಬ, ಅಧಿಕಾರ ಇರಲಿ ಇಲ್ಲದಿರಲಿ ಸದಾಕಾಲ ಸಮಾಜ ಸೇವೆಯಲ್ಲಿ ತೊಡಗಿಸಿಕೊಂಡಿದೆ. ದಾನ–ಧರ್ಮವನ್ನು ಕರ್ತವ್ಯವಾಗಿ ಪಾಲಿಸಿಕೊಂಡು ಬಂದಿದ್ದೇವೆ. ಯಾವುದೇ ಭೇದಭಾವವಿಲ್ಲದೆ ಕಷ್ಟ ಎಂದವರಿಗೆ ನಮ್ಮ ಕುಟುಂಬ ಕೈಲಾದ ನೆರವು ನೀಡುತ್ತಿದೆ. ಜಿಲ್ಲೆಯ ಯಾವುದೇ ಭಾಗದ ದೇವಸ್ಥಾನಗಳ ನಿರ್ಮಾಣ, ಜೀರ್ಣೋದ್ಧಾರ, ಕುಡಿಯುವ ನೀರಿನ ಸೌಕರ್ಯ, ದೇವತಾ ಪೂಜಾ ಕಾರ್ಯಗಳು, ಅನ್ನಸಂತರ್ಪಣೆ, ಉಚಿತ ಸಾಮೂಹಿಕ ವಿವಾಹ ಸೇರಿದಂತೆ ನಾನಾ ಸೇವಾ ಕಾರ್ಯಗಳಲ್ಲಿ ವರ್ಷವಿಡೀ ಭಾಗಿಯಾಗುತ್ತಿದೆ. ಜನರೂ ರಾಜಕೀಯ ಮೀರಿದ ಪ್ರೀತಿ–ವಿಶ್ವಾಸವನ್ನು ನಮ್ಮ ಕುಟುಂಬಕ್ಕೆ ದಯಪಾಲಿಸಿರುವ ತೃಪ್ತಿ ಇದೆ.
>
> –ಲಲಿತಾ ಜಿ.ಟಿ.ದೇವೇಗೌಡ


ಶ್ರೀಮತಿ ಲಲಿತಾ ಜಿ.ಟಿ.ದೇವೇಗೌಡ ಅವರು ಗೃಹಿಣಿಯಾಗಿ ಕುಟುಂಬ ನಿಭಾಯಿಸುವುದರ ಜೊತೆಗೆ ಸಹಕಾರ ಹಾಗೂ ರಾಜಕೀಯ ಕ್ಷೇತ್ರದಲ್ಲೂ ಯಶಸ್ವಿಯಾಗಿ ಮಹಿಳೆಯರಿಗೆ ಪ್ರೇರಣೆಯಾಗಿದ್ದಾರೆ. ಹಿರಿಯ ರಾಜಕಾರಣಿ, ಚಾಮುಂಡೇಶ್ವರಿ ಕ್ಷೇತ್ರದ ಶಾಸಕ ಜಿ.ಟಿ.ದೇವೇಗೌಡರ ಧರ್ಮಪತ್ನಿಯಾದ ಇವರು, ಪತಿಯ ಬಲ–ಬೆಂಬಲಕ್ಕೂ ಮಿಗಿಲಾಗಿ ಸ್ವಂತ ಪರಿಶ್ರಮ, ಜನರೊಂದಿಗಿನ ಒಡನಾಟದಿಂದ ದಕ್ಕಿದ ಅವಕಾಶದಲ್ಲಿ ಸಮರ್ಥವಾಗಿ ದುಡಿದಿದ್ದಾರೆ. ಜೊತೆಗೆ ಪತಿಯ ರಾಜಕೀಯ ಏಳು–ಬೀಳುಗಳಲ್ಲಿ ಜೊತೆಗೆ ನಿಂತಿದ್ದಾರೆ. 'ಸಹಕಾರ ರತ್ನ ಪ್ರಶಸ್ತಿ' ಪುರಸ್ಕೃತರಾದ ಇವರನ್ನು 'ಲಲಿತಾಭಿನಂದನ' ಸಮಾರಂಭದ ಮೂಲಕ ಗೌರವಿಸಲಾಗುತ್ತಿದೆ.

ಲಲಿತಾ ಅವರು ಕೆ.ಆರ್.ನಗರ ತಾಲೂಕು ಬಸವರಾಜಪುರದ ಕಾಳೇಗೌಡರು ಹಾಗೂ ಶ್ರೀಮತಿ ಲಕ್ಷ್ಮೀದೇವಮ್ಮ ಅವರ ಹಿರಿಯ ಪುತ್ರಿ. ಕೌಟುಂಬಿಕ ಕಾರಣಗಳಿಂದಾಗಿ ಇವರ ಕುಟುಂಬ ಮೈಸೂರು ತಾಲೂಕಿನ ಗುಂಗ್ರಾಲ್ ಛತ್ರಕ್ಕೆ ಸ್ಥಳಾಂತರಗೊಂಡಿತು. ಈ ಮೂಲಕ ಲಲಿತಾ ಅವರಿಗೆ ತಾತನ ಮನೆಯಲ್ಲೇ ಬೆಳೆಯುವ ಅವಕಾಶ ಕಲ್ಪಿತವಾಯಿತು. ಇಲ್ಲಿನ ಸರ್ಕಾರಿ ಶಾಲೆಯಲ್ಲಿ ಪ್ರಾಥಮಿಕ ಶಿಕ್ಷಣ, ಸಮೀಪದ ಕಲ್ಲೂರ ನಾಗನಹಳ್ಳಿಯ ಸರ್ಕಾರಿ ಶಾಲೆಯಲ್ಲಿ ಮಾಧ್ಯಮಿಕ ಶಿಕ್ಷಣ ಪಡೆದ ಬಳಿಕ ಚಿಕ್ಕಮ್ಮನ ಮನೆಯಲ್ಲಿದ್ದುಕೊಂಡು ಕೆ.ಆರ್.ನಗರದ ಡೋರ್ನಹಳ್ಳಿಯಲ್ಲಿ ಪ್ರೌಢಶಾಲೆಗೆ ಸೇರಿದರು. 8ನೇ ತರಗತಿ ಮುಗಿಸಿ ಬೇಸಿಗೆ ರಜೆಗೆ ಊರಿಗೆ ಬಂದಿದ್ದಾಗ ಮದುವೆ ಪ್ರಸ್ತಾಪ ಬಂದಿತು.

ಕೌಟುಂಬಿಕ ಜವಾಬ್ದಾರಿ: ಓದುವ ಆಸೆಯಿದ್ದರೂ ಹಿರಿಯರ ಮಾತಿನಂತೆ ತಮ್ಮ ತಾಯಿಯ ಸಹೋದರ ಜಿ.ಟಿ.ದೇವೇಗೌಡರನ್ನು ವರಿಸಲು ಒಪ್ಪಿದರು. 1981ರಲ್ಲಿ ಮೈಸೂರಿನ ಶಿಲ್ಪಿ ಸಿದ್ದಲಿಂಗಪ್ಪನವರ ಛತ್ರದಲ್ಲಿ ವಿವಾಹ ನೆರವೇರಿತು. ಮಕ್ಕಳಾದ ಅನ್ನಪೂರ್ಣ, ಯಶೋಧ ಮತ್ತು ಜಿ.ಡಿ.ಹರೀಶ್‌ಗೌಡ(ಶಾಸಕ) ಆರಂಭದಲ್ಲಿ ಮೈಸೂರಿನ ಸೆಂಟ್ ಜೋಸೆಫ್ ಶಾಲೆಗೆ ಊರಿನಿಂದಲೇ ಓಡಾಡುತ್ತಿದ್ದರು. ನಂತರ ಮಕ್ಕಳಿಗೆ ಅನುಕೂಲಕ್ಕಾಗಿ ಇಡೀ ಕುಟುಂಬ ಪಡುವಾರಹಳ್ಳಿಯ ಬಾಡಿಗೆ ಮನೆಗೆ 1993 ರಲ್ಲಿ ಸ್ಥಳಾಂತರಗೊಂಡಿತು. ಪಡುವಾರಹಳ್ಳಿ ಮನೆ ಜಿಟಿಡಿ ಅವರ ರಾಜಕೀಯ ಮಹತ್ವದ ಬೆಳವಣಿಗೆಗೆ ಸಾಕ್ಷಿಯಾಯಿತು. ಸಾಂಸಾರಿಕ ಜವಾಬ್ದಾರಿಯನ್ನು ತಾವೇ ನಿಭಾಯಿಸುವ ಮೂಲಕ ಲಲಿತಾ ಅವರು ಪತಿಯ ಬೆಳವಣಿಗೆಗೆ ಸಹಕಾರಿಯಾದರು.

ಸಹಕಾರ ಕ್ಷೇತ್ರಕ್ಕೆ ಪಾದಾರ್ಪಣೆ: ಜನರೊಂದಿಗಿನ ನಿರಂತರ ಒಡನಾಟ ಲಲಿತಾ ಅವರ ಸಹಕಾರ ಹಾಗೂ ರಾಜಕೀಯ ಸೇವೆಗೂ ಅನುವು ಮಾಡಿಕೊಟ್ಟಿತು. 2008ರಲ್ಲಿ ಹುಣಸೂರಿನಲ್ಲಿ ಖಾಸಗಿ ಸೊಸೈಟಿ ಸ್ಥಾಪನೆ ಪ್ರಯತ್ನ ಕಾರಣಾಂತರಗಳಿಂದ ವಿಫಲವಾದಾಗ ಮುಂಚೂಣಿಯಲ್ಲಿದ್ದ ಕೆಲವು ಸ್ಥಳೀಯರು ಆ ಜವಾಬ್ದಾರಿ ವಹಿಸಿಕೊಳ್ಳುವಂತೆ ಅವರನ್ನು ಮನವಿ ಮಾಡಿದರು. ಈ ಬಗ್ಗೆ ಅವರಿಗೆ ಅಷ್ಟೊಂದು ಮಾಹಿತಿ ಇಲ್ಲದ ಕಾರಣ ಅವರನ್ನು ಪತಿ ಜಿಟಿಡಿ ಅವರ ಬಳಿಗೆ ಕಳುಹಿಸಿದರು. ಆದಾಗ್ಯೂ ಅಂತಿಮವಾಗಿ ಸಂಸ್ಥೆಯ ಜವಾಬ್ದಾರಿ ಲಲಿತಾ ಅವರ ಹೆಗಲೇರಿತು. ಮೂಗು ಮುರಿಯುವವರು, ಕೊಂಕು ಮಾತುಗಳನ್ನಾಡುವವರ ನಡುವೆ ಧೃತಿಗೆಡದೆ ಶ್ರೀ ಲಕ್ಷ್ಮೀ ಮಹಿಳಾ ವಿವಿಧೋದ್ದೇಶ ಸಹಕಾರ ಸಂಘವನ್ನು ಸ್ಥಾಪಿಸುವಲ್ಲಿ ಸಫಲವಾದರು.

ಸಂಘವನ್ನು ಸಮರ್ಥವಾಗಿ ಮುನ್ನಡೆಸುವುದರ ಜೊತೆಗೆ ಮಹಿಳೆಯರನ್ನು ಸಂಘಟಿಸಿ, 4 ಸಾವಿರ ಮಹಿಳಾ ಷೇರುದಾರ ನೋಂದಣಿ ಮಾಡಿಸಿದರು. ಒಂದು ಕೋಟಿ ರೂ. ಠೇವಣಿ ಸಂಗ್ರಹವಾದ ಹಿನ್ನೆಲೆಯಲ್ಲಿ ಸಂಘದ ಸದಸ್ಯರಿಗೆ ವಿವಿಧ ಸಾಲ ಸೌಲಭ್ಯಗಳನ್ನು ಕಲ್ಪಿಸಿ, ಅವರೆಲ್ಲರ ಕುಟುಂಬಗಳ ಆರ್ಥಿಕ ಬೆಳವಣಿಗೆಗೆ ನೆರವಾಗಲು ಸಾಧ್ಯವಾಯಿತು. ಸಕಾಲದಲ್ಲಿ ಸಾಲ ವಸೂಲಾತಿ ಮಾಡಿದ ಪರಿಣಾಮ ಚೊಚ್ಚಲ ಆರ್ಥಿಕ ವರ್ಷದಲ್ಲೇ 19 ಲಕ್ಷ ರೂ. ಲಾಭ ಗಳಿಸಿತು. ಲಲಿತಾ ಜಿ.ಟಿ.ದೇವೇಗೌಡರ ನೇತೃತ್ವದಲ್ಲಿ ಸೊಸೈಟಿಯ ಸಾಧನೆ ಕಂಡು ಟೀಕಾಕಾರರೂ ಹುಬ್ಬೇರಿಸಿದರು. ಸಂಸ್ಥೆಗೆ ಸ್ವಂತ ಕಟ್ಟಡ, ಕೆಲವು ವಾಣಿಜ್ಯ ಮಳಿಗೆಗಳು ನಿರ್ಮಾಣದೊಂದಿಗೆ ಸಂಘವು



ಹಂತ ಹಂತವಾಗಿ ಬೆಳೆದು ಜಿಲ್ಲೆಯ ಪ್ರತಿಷ್ಠಿತ ಸಹಕಾರಿ ಸಂಸ್ಥೆಗಳಲ್ಲಿ ಒಂದಾಗಿ ಗುರುತಿಸಿಕೊಂಡಿದೆ. ಇಂದಿಗೂ ಲಲಿತಾ ಅವರು ಸಂಸ್ಥೆಯ ಮಾರ್ಗದರ್ಶಕರಾಗಿ ಅಭಿವೃದ್ಧಿಗೆ ಕೈಜೋಡಿಸಿದ್ದಾರೆ.

ರಾಜಕೀಯದಲ್ಲೂ ಯಶಸ್ವಿ: ರಾಜಕೀಯ ಬೆಳವಣಿಗೆಯಲ್ಲಿ 2008ರ ವಿಧಾನಸಭಾ ಚುನಾವಣೆ ವೇಳೆಗೆ ಜಿ.ಟಿ.ದೇವೇಗೌಡರು ಜೆಡಿಎಸ್ ತೊರೆದು ಬಿಜೆಪಿ ಸೇರಿ, ಹುಣಸೂರು ಕ್ಷೇತ್ರದಲ್ಲಿ ಸ್ಪರ್ಧಿಸಿ ಪರಾಜಿತರಾದರು. ಬಿಜೆಪಿ ಆಡಳಿತದಲ್ಲಿ ಜಿಟಿಡಿ ಕರ್ನಾಟಕ ಗೃಹ ಮಂಡಳಿ ಅಧ್ಯಕ್ಷರಾಗಿ ನೇಮಕಗೊಂಡರು. ಆಗ ಜಿಪಂ ಚುನಾವಣೆ ಘೋಷಣೆಯಾಯಿತು. ಜಿಟಿಡಿ ಸೋಲಿನಿಂದ ಬೇಸರಗೊಂಡಿದ್ದ ಅವರ ಆಪ್ತರು, ಜಿಪಂ ಚುನಾವಣೆಯಲ್ಲಿ ಲಲಿತಾ ಅವರ ಸ್ಪರ್ಧೆಗೆ ಪಟ್ಟು ಹಿಡಿದರು. ಹಾಗಾಗಿ ಹುಣಸೂರು ತಾಲೂಕಿನ ಹನಗೋಡು ಕ್ಷೇತ್ರದಿಂದ ಲಲಿತಾ ಅವರು ಸ್ಪರ್ಧಿಸಿ, 5,500 ಮತಗಳ ಅಂತರದಿಂದ ಗೆಲುವು ಸಾಧಿಸಿ, ಜಿಲ್ಲಾ ಪಂಚಾಯಿತಿ ಶಿಕ್ಷಣ–ಆರೋಗ್ಯ ಸ್ಥಾಯಿ ಸಮಿತಿಯ ಅಧ್ಯಕ್ಷರಾಗಿಯೂ ಸೇವೆ ಸಲ್ಲಿಸಿದರು.

ಪತ್ತಿನ ಮಹಾಮಂಡಲದ ಚುಕ್ಕಾಣಿ: 2014ರಲ್ಲಿ ರಾಜ್ಯ ಪತ್ತಿನ ಸಹಕಾರ ಸಂಘಗಳ ಮಹಾಮಂಡಳದ ಚುನಾವಣೆ ಎದುರಾಯಿತು. ಹುಣಸೂರಿನ ಸೊಸೈಟಿಯೂ ಸದಸ್ಯತ್ವ ಹೊಂದಿದ್ದರಿಂದ ಲಲಿತಾ ಅವರಿಗೆ ಮತ್ತೊಂದು ಮಹತ್ವದ ಅವಕಾಶ ದಕ್ಕಿತು. ಹುಣಸೂರು ಸೊಸೈಟಿಯ ಪ್ರತಿನಿಧಿಯಾಗಿ ಚುನಾವಣೆಯಲ್ಲಿ ಸ್ಪರ್ಧಿಸಿ ಗೆಲುವು ಸಾಧಿಸುವ ಮೂಲಕ ಮಹಾಮಂಡಳದ ನಿರ್ದೇಶಕರಾಗಿ ಆಯ್ಕೆಯಾದರು. ಸಾಮಾನ್ಯ ಕ್ಷೇತ್ರ ದಿಂದ ಪುರುಷ ಅಭ್ಯರ್ಥಿಗಳೊಂದಿಗೆ ಸ್ಪರ್ಧಿಸಿ ಗೆಲುವು ಸಾಧಿಸಿದ್ದ ಏಕೈಕ ಮಹಿಳಾ ನಿರ್ದೇಶಕಿ ಎಂಬ ಹೆಗ್ಗಳಿಕೆಗೂ ಪಾತ್ರರಾದರು. ಲಲಿತಾ ಅವರು 2019ರಲ್ಲಿ 2ನೇ ಬಾರಿಗೆ ಅತೀ ಹೆಚ್ಚು ಮತಗಳೊಂದಿಗೆ ಮಹಾಮಂಡಳದ ನಿರ್ದೇಶಕರಾಗಿ ಚುನಾಯಿತರಾದರು. ಈ ಅವಧಿಯಲ್ಲಿ ಮಹಾ ಮಂಡಳದ ಅಧ್ಯಕ್ಷರಾಗಿ ಅವಿರೋಧವಾಗಿ ಆಯ್ಕೆಯಾಗುವ ಮೂಲಕ ಲಲಿತಾ ಜಿ.ಟಿ.ದೇವೇಗೌಡರು ದಾಖಲೆ ನಿರ್ಮಿಸಿದರು.

> **ಕರ್ನಾಟಕ ಸರ್ಕಾರವು 2020ರಲ್ಲಿ 'ಸಹಕಾರ ರತ್ನ' ಪ್ರಶಸ್ತಿ ನೀಡಿ ಅಭಿನಂದಿಸಿದೆ. 'ಸಹಕಾರ ರತ್ನ ಶ್ರೀ', ಬಿ.ಎಲ್.ಲಕ್ಕೇಗೌಡ ಪ್ರಶಸ್ತಿ (2025), ಮಂಡ್ಯದ ಕರ್ನಾಟಕ ಸಂಘದ ಜಿ.ಎಸ್.ಬೊಮ್ಮೇಗೌಡ ಪ್ರಶಸ್ತಿ(2026) ಸೇರಿದಂತೆ ಹಲವು ಪ್ರಶಸ್ತಿ–ಪುರಸ್ಕಾರಗಳು ಲಲಿತಾ ಅವರಿಗೆ ಸಂದಿವೆ. ರಾಜ್ಯದೆಲ್ಲೆಡೆ ಜನರಿಂದ ಅಪಾರ ಗೌರವ–ಸನ್ಮಾನಗಳಿಗೆ ಭಾಜನರಾಗಿದ್ದಾರೆ. ಈ ಸಾಧನೆಗಳಿಗೆ ಛಲ, ಬದ್ಧತೆ ಜೊತೆಗೆ ತಮ್ಮ ಪತಿ ಜಿ.ಟಿ.ದೇವೇಗೌಡರ ಬೆಂಬಲವೇ ಕಾರಣ ಎಂದು ಹೇಳಿಕೊಂಡಿದ್ದಾರೆ.**

ಸ್ವಂತ ಕಟ್ಟಡ ಕಲ್ಪಿಸುವಲ್ಲಿ ಸಫಲ: 2018ರಲ್ಲಿ ಬಿಡಿಎ ಹರಾಜಿನಲ್ಲಿ ಮೂರೂವರೆ ಕೋಟಿಗೆ ನಂದಿನಿ ಲೇಔಟ್‌ನಲ್ಲಿ ನಿವೇಶನ ಖರೀದಿಸಲಾಗಿತ್ತಾದರೂ ಆರ್ಥಿಕ ಸಮಸ್ಯೆಯಿಂದ ಕಟ್ಟಡ ನಿರ್ಮಾಣ ವಿಳಂಬವಾಗಿತ್ತು. ಲಲಿತಾ ಅವರು ಅಧ್ಯಕ್ಷರಾಗುತ್ತಿದ್ದಂತೆ ಮಹಾಮಂಡಳಕ್ಕೆ ಸುಸಜ್ಜಿತ ಸ್ವಂತ ಕಟ್ಟಡವನ್ನು ನಿರ್ಮಿಸುವ ಸಂಕಲ್ಪ ಮಾಡಿದರು. ಆ ನಿಟ್ಟಿನಲ್ಲಿ ಮಂಡಲದ ಎಲ್ಲಾ ಪದಾಧಿಕಾರಿಗಳು ಹಾಗೂ ನಿರ್ದೇಶಕರ ಸಹಕಾರದೊಂದಿಗೆ ಸಂಪನ್ಮೂಲ ಕ್ರೋಢೀಕರಿಸಲು ಮುಂದಾದರು. ಇದೇ ವೇಳೆಗೆ ಕರ್ನಾಟಕ ಸಹಕಾರ ಮಹಾಮಂಡಳದ ಅಧ್ಯಕ್ಷರಾಗಿದ್ದ ಜಿ.ಟಿ.ದೇವೇಗೌಡರ ಮೇಲೆ ಒತ್ತಡ ತಂದು ಕಟ್ಟಡ ನಿರ್ಮಾಣಕ್ಕೆ 1.25 ಕೋಟಿ ರೂ. ನೆರವು ಪಡೆಯುವಲ್ಲಿ ಯಶಸ್ವಿಯಾದರು.

ರಾಜ್ಯದ ಸಹಕಾರ ಸಂಘಗಳು, ಹಾಲಿನ ಡೈರಿಗಳು ಸೇರಿದಂತೆ ವಿವಿಧ ಸಂಸ್ಥೆಗಳಿಂದ ಹರಸಾಹಸಪಟ್ಟು 1 ಕೋಟಿ ರೂ. ದೇಣಿಗೆ ಸಂಗ್ರಹಿಸಿದರು. ಸ್ವಂತ ಮನೆ ನಿರ್ಮಿಸುವಂತೆ ಶ್ರದ್ಧೆ, ಆಸಕ್ತಿಯಿಂದ ಸ್ಥಳದಲ್ಲಿದ್ದು ಯಾವುದೇ ಲೋಪವಾಗದಂತೆ ನೂತನ ಕಟ್ಟಡ ನಿರ್ಮಾಣ ಮಾಡಲಾಯಿತು. 2023ರಲ್ಲಿ ನೂತನ ಕಟ್ಟಡವನ್ನು ಅಂದಿನ ಸಹಕಾರ ಸಚಿವ ಎಸ್.ಟಿ.ಸೋಮಶೇಖರ್ ಉದ್ಘಾಟಿಸಿದರು. ವಾಣಿಜ್ಯ ಮಳಿಗೆಗಳನ್ನೂ ಹೊಂದಿರುವ ಈ ಕಟ್ಟಡದಿಂದ ರಾಜ್ಯ ಪತ್ತಿನ ಸಹಕಾರ ಸಂಘಗಳ ಮಹಾಮಂಡಳಕ್ಕೆ ಮಾಸಿಕ ಲಕ್ಷ ರೂ.ಗಿಂತ ಹೆಚ್ಚು ಬಾಡಿಗೆ ಬರುತ್ತಿದೆ. ಜಿಪಂ ಸದಸ್ಯರಾಗಿ ಆಯ್ಕೆಯಾದಾಗ ತಮ್ಮನ್ನು ಅಭಿನಂದಿಸಲು ಕರೆ ಮಾಡಿದ್ದ ಅಂದಿನ ವಸತಿ ಸಚಿವ ವಿ.ಸೋಮಣ್ಣ ಅವರಿಗೆ ಮನವಿ ಮಾಡಿ 1250 ಮನೆಗಳನ್ನು ಮಂಜೂರು ಮಾಡಿಸಿದರು. ಹೀಗೆ ಮೊದಲ ಅವಕಾಶದಲ್ಲೇ ಸಾಕಷ್ಟು ಕೆಲಸ ಮಾಡಿ, ಅಪಾರ ಜನಪ್ರೀತಿ ಗಳಿಸಿದರು.

ಆರ್ಥಿಕ ಶಿಸ್ತು ತಂದ ಹೆಗ್ಗಳಿಕೆ: ಸಂಸ್ಥೆಯಲ್ಲಿ ಹಣ ದುರುಪಯೋಗಕ್ಕೆ ಮುಂದಾಗಿದ್ದ ಮಹಿಳಾ ಅಧಿಕಾರಿಯೊಬ್ಬರು ಸಂದಿಗ್ಧ ಸನ್ನಿವೇಶವನ್ನೇ ಸೃಷ್ಟಿಸಿದ್ದರು. ಆ ವೇಳೆ ಹಣಕಾಸು ಅವ್ಯವಹಾರ ಪತ್ತೆಹಚ್ಚುವಲ್ಲಿ ಯಶಸ್ವಿಯಾದರು. ಮುಂದೆ ಹಣಕಾಸು ದುರಪಯೋಗವಾಗದಂತೆ ಕಟ್ಟುನಿಟ್ಟಿನ ಕ್ರಮ ವಹಿಸಿ, ಆರ್ಥಿಕ ಶಿಸ್ತಿನ ಮೂಲಕ ಸಂಸ್ಥೆಯನ್ನು ಪ್ರಗತಿ ಪಥದಲ್ಲಿ ಕೊಂಡೊಯ್ಯುವ ಮೂಲಕ ಸುಧಾರಣೆ ತಂದರು.

ಇಡೀ ಕುಟುಂಬ ಸಹಕಾರಕ್ಕೆ ಸಮರ್ಪಣೆ

ಜಿ.ಟಿ.ದೇವೇಗೌಡರು 70ರ ದಶಕದಲ್ಲೇ ಸಹಕಾರಿ ಕ್ಷೇತ್ರದ ಪಯಣ ಆರಂಭಿಸಿ, ಗುಂಗ್ರಾಲ್‌ಛತ್ರ ಗ್ರಾಮದ ಸೇವಾ ಸಹಕಾರ ಸಂಘ, ಮೈಸೂರು ಜಿಲ್ಲಾ ಸಹಕಾರಿ ಯೂನಿಯನ್, ಕರ್ನಾಟಕ ರಾಜ್ಯ ಸಹಕಾರ ಮಹಾಮಂಡಳ ಸೇರಿದಂತೆ ಎಲ್ಲಾ ಹಂತದ ಜವಾಬ್ದಾರಿಗಳನ್ನೂ ಸಮರ್ಥವಾಗಿ ನಿರ್ವಹಿಸುವ ಮೂಲಕ ರಾಜಕೀಯದ ಜೊತೆಗೆ ಸಹಕಾರ ಕ್ಷೇತ್ರದಲ್ಲಿ ತಮ್ಮದೇ ಆದ ಮೈಲಿಗಲ್ಲು ಸ್ಥಾಪಿಸಿದ್ದಾರೆ. ಇನ್ನು ಇವರ ಪುತ್ರ ಜಿ.ಡಿ.ಹರೀಶ್‌ಗೌಡರೂ ಪ್ರಾಥಮಿಕ ಸಹಕಾರ ಕ್ಷೇತ್ರದಿಂದ ಬೆಳೆದು ಮೈಸೂರು–ಚಾಮರಾಜನಗರ ಜಿಲ್ಲಾ ಸಹಕಾರ ಬ್ಯಾಂಕ್‌ನ ಅಧ್ಯಕ್ಷರಾಗಿ, ಕರ್ನಾಟಕ ರಾಜ್ಯ ಅಪೆಕ್ಸ್ ಬ್ಯಾಂಕ್‌ನ ಉಪಾಧ್ಯಕ್ಷರಾಗಿ ಸೇವೆ ಸಲ್ಲಿಸಿದ್ದಾರೆ. ಸಹಕಾರ ಕ್ಷೇತ್ರದ ಮೂಲಕ ಇದೀಗ ಹುಣಸೂರು ಕ್ಷೇತ್ರದ ಶಾಸಕರಾಗಿ ಸೇವೆ ಸಲ್ಲಿಸುತ್ತಿದ್ದಾರೆ. ಹೀಗೆ ಲಲಿತಾ ಜಿ.ಟಿ.ದೇವೇಗೌಡರ ಇಡೀ ಕುಟುಂಬವೇ ಸಹಕಾರ ಕ್ಷೇತ್ರಕ್ಕೆ ಸಮರ್ಪಿಸಿಕೊಂಡಿರುವುದು ವಿಶೇಷವೇ ಸರಿ.

ಗ್ರಾಮೀಣ ಮಹಿಳೆಯರಿಗೆ ಪ್ರೇರಣೆ

ಲಲಿತಾ ಅವರು ಕೌಟುಂಬಿಕ ನಿರ್ವಹಣೆ, ಮಕ್ಕಳ ಶಿಕ್ಷಣದ ಜವಾಬ್ದಾರಿ ಜೊತೆಗೆ ಪತಿ ಜಿ.ಟಿ. ದೇವೇಗೌಡರ ರಾಜಕೀಯ, ಸಹಕಾರ, ಸಾಮಾಜಿಕ ಸೇವಾಕಾರ್ಯಗಳಲ್ಲಿ ಪ್ರತ್ಯಕ್ಷ ಹಾಗೂ ಪರೋಕ್ಷವಾಗಿ ಹೆಗಲು ನೀಡುವುದರ ಜೊತೆಗೆ ತಾವೂ ಸಹಕಾರ ಹಾಗೂ ರಾಜಕೀಯ ಕ್ಷೇತ್ರದಲ್ಲಿ ಗಣನೀಯ ಸೇವೆ ಮಾಡಿದ್ದಾರೆ. ಪ್ರಮುಖವಾಗಿ ಮಹಿಳಾ ಸಹಕಾರಿಯಾಗಿ ರಾಜ್ಯಮಟ್ಟದಲ್ಲಿ ಗುರುತಿಸಿಕೊಳ್ಳುವ ಮೂಲಕ ಗ್ರಾಮೀಣ ಮಹಿಳೆಯರಿಗೆ ಪ್ರೇರಣೆಯಾಗಿದ್ದಾರೆ.

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com

ನಾಡಪ್ರಭು ಕೆಂಪೇಗೌಡರು, ಡಾ.ಫ.ಗು.ಹಳಕಟ್ಟಿಯವರ ಜನ್ಮದಿನ ಅರ್ಥಪೂರ್ಣ ಆಚರಣೆಗೆ ಎಡಿಸಿ ಸೂಚನೆ

ಮೈಸೂರು, ಜೂ.11(ಎಂಕೆ)– ಮೈಸೂರಿನ ಕರ್ನಾಟಕ ಕಲಾಮಂದಿರದಲ್ಲಿ ಜಿಲ್ಲಾಡಳಿತ, ನಗರಪಾಲಿಕೆ ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ವತಿಯಿಂದ ಜೂ.27ರಂದು ನಾಡಪ್ರಭು ಕೆಂಪೇಗೌಡರ ಜಯಂತಿ ಹಾಗೂ ಜು.2ರಂದು ಡಾ.ಫ.ಗು.ಹಳಕಟ್ಟಿಯವರ ಜನ್ಮದಿನ ಮತ್ತು ವಚನ ಸಾಹಿತ್ಯ ದಿನಾಚರಣೆಯನ್ನು ಅರ್ಥಪೂರ್ಣವಾಗಿ ಆಚರಿಸಲಾಗುವುದು ಎಂದು ಅಪರ ಜಿಲ್ಲಾಧಿಕಾರಿ ಆರ್.ಐಶ್ವರ್ಯ ತಿಳಿಸಿದರು.

ಮೈಸೂರಿನ ಸಿದ್ದಾರ್ಥನಗರದಲ್ಲಿರುವ ಜಿಲ್ಲಾಧಿಕಾರಿ ಕಚೇರಿ ಸಭಾಂಗಣದಲ್ಲಿ ವಿವಿಧ ಜಯಂತಿಗಳ ಪೂರ್ವಭಾವಿ ಸಭೆ ನಡೆಸಿದ ಅವರು, ನಾಡಿಗೆ ಅಪಾರ ಕೊಡುಗೆ ನೀಡಿರುವ ಮಹನೀಯರ ಸಂದೇಶಗಳನ್ನು ಸಮಾಜಕ್ಕೆ ಸಾರಲು, ಅವರ ಜೀವನ ಮೌಲ್ಯಗಳನ್ನು ತಿಳಿಸುವ ಸಲುವಾಗಿ ಜಯಂತಿಗಳ ಆಚರಣೆ ಮಾಡಲಾಗುತ್ತಿದೆ ಎಂದರು.



ಆರ್.ಐಶ್ವರ್ಯ

ಜೂ.27ರಂದು ನಾಡಪ್ರಭು ಕೆಂಪೇಗೌಡರ ಜಯಂತಿ, ಜು.2ರಂದು ಡಾ.ಫ.ಗು.ಹಳಕಟ್ಟಿಯವರ ಜಯಂತಿಯನ್ನು ಬೆಳಗ್ಗೆ 11.30ಕ್ಕೆ ಕಲಾಮಂದಿರದಲ್ಲಿ ಆಚರಿಸಲಿದ್ದು, ವೇದಿಕೆ ಕಾರ್ಯಕ್ರಮಕ್ಕೂ ಮೊದಲು ಕಲಾವಿದರಿಂದ ಗೀತಾ ಗಾಯನ ಏರ್ಪಡಿಸಲಾಗುವುದು ಎಂದರು. ಜಯಂತಿ ಆಚರಣೆಯ ಸ್ಥಳದ ಸ್ವಚ್ಛತೆ ಹಾಗೂ ಕುಡಿಯುವ ನೀರಿನ ವ್ಯವಸ್ಥೆ, ತಳಿರು ತೋರಣ ಹಾಗೂ ಶಾಮಿಯಾನ ವ್ಯವಸ್ಥೆಯನ್ನು ಮೈಸೂರು ಮಹಾನಗರ ಪಾಲಿಕೆ ವತಿಯಿಂದ ಮಾಡಬೇಕು. ವಿವಿಧ ಜಯಂತಿಗಳ ಆಚರಣೆ ಮಾಡುವಾಗ ಮೈಸೂರು ನಗರದಲ್ಲಿರುವ ಎಲ್ಲಾ ಮಹನೀಯರ ಪ್ರತಿಮೆಗಳನ್ನು ಮಹಾನಗರ ಪಾಲಿಕೆಯಿಂದ ಸ್ವಚ್ಛ ಮಾಡಬೇಕು ಎಂದು ಸೂಚನೆ ನೀಡಿದರು. ಸಹಾಯಕ ನಿರ್ದೇಶಕ ಡಾ.ಡಿ.ಎಂ. ಸುದರ್ಶನ್ ಸೇರಿದಂತೆ ವಿವಿಧ ಸಂಘ–ಸಂಸ್ಥೆಗಳು ಹಾಗೂ ಸಮುದಾಯಗಳ ಮುಖಂಡರು ಉಪಸ್ಥಿತರಿದ್ದರು.

ಆರ್ಥಿಕ ಅಪರಾಧಗಳಲ್ಲಿ ವಂಚಕರು ತಪ್ಪಿಸಿಕೊಳ್ಳದಂತೆ ತನಿಖಾಧಿಕಾರಿಗಳು ಎಚ್ಚರ ವಹಿಸಬೇಕು

ಕರ್ನಾಟಕ ಪೊಲೀಸ್ ಅಕಾಡೆಮಿ ನಿರ್ದೇಶಕ ಡಾ.ಎನ್.ವಿಷ್ಣುವರ್ಧನ್ ಸಲಹೆ



ಮೈಸೂರಿನ ಪೊಲೀಸ್ ಅಕಾಡೆಮಿಯಲ್ಲಿ ಆಯೋಜಿಸಿದ್ದ 'ಆರ್ಥಿಕ ಮತ್ತು ಹಣಕಾಸು ವಂಚನೆ ಅಪರಾಧ' ಪತ್ತೆ ಕುರಿತ ಕಾರ್ಯಾಗಾರದಲ್ಲಿ ಪಾಲ್ಗೊಂಡಿರುವ ರಾಜ್ಯದ ವಿವಿಧ ಠಾಣೆಗಳ ತನಿಖಾಧಿಕಾರಿಗಳ ತಂಡ.

ಮೈಸೂರು, ಜೂ.11(ಎಂಟಿವೈ)– ಆರ್ಥಿಕ ಅಪರಾಧ ಕೃತ್ಯಗಳ ಬಗ್ಗೆ ತನಿಖಾಧಿಕಾರಿಗಳು ನಿಖರವಾಗಿ ತನಿಖೆ ಮಾಡಿ, ವಂಚಕರು ತಪ್ಪಿಸಿಕೊಳ್ಳದಂತೆ ಕಟ್ಟೆಚ್ಚರ ವಹಿಸಬೇಕು ಎಂದು ಕರ್ನಾಟಕ ಪೊಲೀಸ್ ಅಕಾಡೆಮಿ ನಿರ್ದೇಶಕ ಡಾ.ಎನ್.ವಿಷ್ಣುವರ್ಧನ್ ಸಲಹೆ ನೀಡಿದ್ದಾರೆ.

ಮೈಸೂರಿನ ಕರ್ನಾಟಕ ಪೊಲೀಸ್ ಅಕಾಡೆಮಿಯಲ್ಲಿ 'ಆರ್ಥಿಕ ಮತ್ತು ಹಣಕಾಸು ವಂಚನೆ ಅಪರಾಧ' ಪತ್ತೆ ಮಾಡುವ ಸಂಬಂಧ ರಾಜ್ಯದ ವಿವಿಧ ಠಾಣೆಗಳ ತನಿಖಾಧಿಕಾರಿಗಳಿಗೆ ಆಯೋಜಿಸಿದ್ದ ತರಬೇತಿ ಕಾರ್ಯಾಗಾರದಲ್ಲಿ ಮಾತನಾಡಿದ ಅವರು, ಆರ್ಥಿಕ ಅಪರಾಧ, ಹಣಕಾಸು ವಂಚನೆಯ ಅಪರಾಧ ಕೃತ್ಯಗಳಿಗೆ ಸಂಬಂಧಿಸಿದಂತೆ ತನಿಖೆ ಮಾಡುವ ತನಿಖಾಧಿಕಾರಿಗಳು ತನಿಖೆಯನ್ನು ಹೇಗೆ ಮಾಡಬೇಕು ಎಂದು ಮೊದಲು ತಿಳಿದುಕೊಂಡಿರಬೇಕು. ತಪ್ಪು ಮಾಡಿದ್ದವರು ಯಾವುದೇ ಕಾರಣಕ್ಕೂ ತಪ್ಪಿಸಿಕೊಳ್ಳದಂತೆ ನೋಡಿಕೊಳ್ಳಬೇಕಾದ ಜವಾಬ್ದಾರಿ ತನಿಖಾಧಿಕಾರಿಗಳದ್ದಾಗಿರುತ್ತದೆ. ಈ ನಿಟ್ಟಿನಲ್ಲಿ ಪ್ರಕರಣ ದಾಖಲಿಸುವ ಹಾಗೂ ತನಿಖೆ ಮಾಡುವ ಪ್ರೊಸಿಜರ್ ಬಗ್ಗೆ ತನಿಖಾಧಿಕಾರಿಗಳಿಗೆ ಗೊತ್ತಿರಬೇಕು ಎಂದರು.

ಆರ್ಥಿಕ ಮತ್ತು ಹಣಕಾಸು ವಂಚನೆ ಅಪರಾಧಗಳ ಬಗ್ಗೆ ತನಿಖಾಧಿಕಾರಿಗಳಿಗೆ ತರಬೇತಿ ನೀಡುವ ನಿಟ್ಟಿನಲ್ಲಿ ಮೂರು ದಿನಗಳ ಕಾರ್ಯಾಗಾರ ಹಮ್ಮಿಕೊಳ್ಳಲಾಗಿದೆ. ಈ ಕಾರ್ಯಾಗಾರದಲ್ಲಿ ವಿಷಯ ತಜ್ಞರು ತನಿಖಾ ವಿಧಾನ ಸೇರಿದಂತೆ ಇನ್ನಿತರ ಮಾಹಿತಿ ನೀಡಲಿದ್ದಾರೆ. ಈಗಾಗಲೇ ನಿಮ್ಮ ಠಾಣೆಗಳಲ್ಲಿ ಸೇವೆ ಸಲ್ಲಿಸುವ ವೇಳೆ ಆರ್ಥಿಕ ಮತ್ತು ಹಣಕಾಸು ವಂಚನೆಯ ಪ್ರಕರಣ ದಾಖಲಾಗಿರುತ್ತದೆ. ಆ ಪ್ರಕರಣಗಳಲ್ಲಿ ಎದುರಾದ ಸವಾಲು, ನಿಮಗೆ ಆದ ಸಮಸ್ಯೆಗಳನ್ನು ಕಾರ್ಯಾಗಾರದಲ್ಲಿ ಸಂಪನ್ಮೂಲ ವ್ಯಕ್ತಿಗಳ ಬಳಿ ಹೇಳಿಕೊಂಡು ಪರಿಹಾರ ಕಂಡುಕೊಳ್ಳಬೇಕು. ತನಿಖೆ ವಿಚಾರದಲ್ಲಿ ನಿಮಗೆ ಏನಾದರು ಅನುಮಾನ, ಪ್ರಶ್ನೆಗಳಿದ್ದರೆ ಕಾರ್ಯಾಗಾರದಲ್ಲಿ ಬಗೆಹರಿಸಿಕೊಳ್ಳಬೇಕು. ಕಾರ್ಯಾಗಾರದಲ್ಲಿ ಕಲಿತ ವಿಚಾರವನ್ನು ತಮ್ಮ ಕಾರ್ಯವ್ಯಾಪ್ತಿಯ ಠಾಣೆಗಳಲ್ಲಿ ಸಹೋದ್ಯೋಗಿಗಳಿಗೂ ತಿಳಿಸಿ ಎಂದು ಸಲಹೆ ನೀಡಿದರು.

ಇಂತಹ ಅಪರಾಧಗಳಲ್ಲಿ ಎಫ್ಐಆರ್ ಮಾಡುವಾಗ, ವಿಚಾರಣೆ, ತನಿಖೆ ಮಾಡುವಾಗ ಹಾಗೂ ಚಾರ್ಜ್‌ಶೀಟ್ ಸಲ್ಲಿಸುವಾಗ ಏನೆಲ್ಲಾ ಅಂಶಗಳನ್ನು ಗಮನಿಸಬೇಕು. ಕೈಗೊಳ್ಳಬೇಕಾದ ಕ್ರಮ, ಮುಂಜಾಗ್ರತಾ ಕ್ರಮವನ್ನು ಕಾರ್ಯಾಗಾರದಲ್ಲಿ ತಿಳಿಸಲಾಗುತ್ತದೆ ಎಂದು ವಿವರಿಸಿದರು.

ಕಾರ್ಯಾಗಾರದಲ್ಲಿ ಮೂವರು ಡಿವೈಎಸ್ಪಿ, ನಾಲ್ವರು ಇನ್ಸ್‌ಪೆಕ್ಟರ್ ಹಾಗೂ 24 ಮಂದಿ ಸಬ್ ಇನ್ಸ್‌ಪೆಕ್ಟರ್ ಸೇರಿದಂತೆ ರಾಜ್ಯದ ವಿವಿಧ ಠಾಣೆಗಳಲ್ಲಿ ಸೇವೆ ಸಲ್ಲಿಸುತ್ತಿರುವ 31 ಮಂದಿ ತಂಡಕ್ಕೆ ತರಬೇತಿ ನೀಡಲಾಗುತ್ತಿದೆ. ಈ ಸಂದರ್ಭದಲ್ಲಿ ಪೊಲೀಸ್ ಉಪ ನಿರ್ದೇಶಕ ಎಸ್.ಎಲ್.ಚೆನ್ನಬಸವಣ್ಣ ಸೇರಿದಂತೆ ಹಿರಿಯ ಅಧಿಕಾರಿಗಳು ಉಪಸ್ಥಿತರಿದ್ದರು.

ಎಸ್ಐಆರ್ ವಿರೋಧಿ ಕರ್ನಾಟಕ ಜಾಗೃತಿ ಜಾಥಾ ಬೆಂಬಲಿಸಲು ನಿರ್ಧಾರ



ಮೈಸೂರಿನ ಜಲದರ್ಶಿನಿಯಲ್ಲಿ 'ಎಸ್ಐಆರ್ ವಿರೋಧಿ ಕರ್ನಾಟಕ' ಜಾಗೃತಿ ಜಾಥಾ ಹಿನ್ನಲೆ ಪ್ರಗತಿಪರ ಚಿಂತಕರಿಂದ ಪೂರ್ವಭಾವಿ ಸಭೆ ನಡೆಸಲಾಯಿತು.

ಮೈಸೂರು, ಜೂ.11(ಎಂಕೆ)– ರಾಜ್ಯಾದ್ಯಂತ ಜೂ.13ರಿಂದ ನಡೆಯುವ 'ಎಸ್ಐಆರ್(ವಿಶೇಷ ತೀವ್ರ ಪರಿಷ್ಕರಣೆ) ವಿರೋಧಿ ಕರ್ನಾಟಕ' ಜಾಗೃತಿ ಜಾಥಾಗೆ ಮೈಸೂರಿನಲ್ಲಿ ಜಾತ್ಯಾತೀತವಾಗಿ ಬೆಂಬಲ ನೀಡಲು ನಿರ್ಧರಿಸಲಾಯಿತು.

ಮೈಸೂರಿನ ಜಲದರ್ಶಿನಿ ಅತಿಥಿಗೃಹದಲ್ಲಿ ಗುರುವಾರ ಕಾಂಗ್ರೆಸ್ ಹಾಗೂ ಪ್ರಗತಿಪರ ಮುಖಂಡರು ನಡೆಸಿದ ಪೂರ್ವಭಾವಿ ಸಭೆಯಲ್ಲಿ ಉಡುಪಿಯಿಂದ ಹೊರಟು ಜೂ.16ಕ್ಕೆ ಮೈಸೂರಿಗೆ ಆಗಮಿಸುವ 'ಎಸ್ಐಆರ್ ವಿರೋಧಿ ಕರ್ನಾಟಕ' ಜಾಥಾವನ್ನು ಯಶಸ್ವಿಗೊಳಿಸಲು ತೀರ್ಮಾನಿಸಲಾಯಿತು.

ನಿವೃತ್ತ ವಿಜ್ಞಾನಿ ಡಾ.ಇ.ರತಿರಾವ್ ಮಾತನಾಡಿ, ಉಡುಪಿಯಿಂದ ಜೂ.13ಕ್ಕೆ ಹೊರಡುವ 'ಎಸ್ಐಆರ್ ವಿರೋಧಿ ಕರ್ನಾಟಕ' ಜಾಥಾವು ಜೂ.14ಕ್ಕೆ ಮಂಗಳೂರು, ಜೂ.15ಕ್ಕೆ ಕೊಡಗು, ಜೂ.16ಕ್ಕೆ ಮೈಸೂರು, ಜೂ.17ಕ್ಕೆ ಚಾಮರಾಜನಗರ ಹಾಗೂ ಜೂ.18ಕ್ಕೆ ಮಂಡ್ಯ ಮೂಲಕ ಬೆಂಗಳೂರಿನತ್ತ ಸಾಗಲಿದ್ದು, ಜೂ.20ರಂದು ಬೆಂಗಳೂರಿನಲ್ಲಿ ಬೃಹತ್ ಪ್ರತಿಭಟನೆ ನಡೆಸಲಾಗುವುದು ಎಂದರು.

ಮೈಸೂರಿಗೆ ಆಗಮಿಸುವ ಜಾಥಾವನ್ನು ಟೌನ್‌ಹಾಲ್ ಎದುರಿನ ಡಾ.ಬಿ.ಆರ್. ಅಂಬೇಡ್ಕರ್ ಪ್ರತಿಮೆ ಬಳಿ ಸ್ವಾಗತಿಸಿ, ಅಶೋಕ ರಸ್ತೆಯಲ್ಲಿರುವ ಮಿಲಾದ್ ಪಾರ್ಕ್ ಹಾಗೂ ಬಲ್ಲಾಳ ವೃತ್ತದ ಬಳಿಯಿರುವ ಬುದ್ಧವಿಹಾರ ಆವರಣದಲ್ಲಿ ಜಾಗೃತಿ ಸಭೆಗಳನ್ನು ನಡೆಸಲಾಗುವುದು. ಈ ಎಲ್ಲಾ ಕಾರ್ಯಕ್ರಮಗಳಿಗೂ ಪಕ್ಷಾತೀತ ಮತ್ತು ಜಾತ್ಯಾತೀತವಾಗಿ ಬೆಂಬಲ ನೀಡಬೇಕು ಎಂದು ಕೋರಿದರು. ಸಭೆಯಲ್ಲಿ ಮೈಸೂರು ಗ್ರಾಮಾಂತರ ಕಾಂಗ್ರೆಸ್ ಸಮಿತಿ ಅಧ್ಯಕ್ಷ ಡಾ.ಬಿ.ಜೆ.ವಿಜಯ್‌ಕುಮಾರ್, ಪ್ರಗತಿಪರ ಚಿಂತಕರಾದ ಪ್ರೊ.ಭೂಮಿಗೌಡ, ಪ್ರೊ.ವಿ.ಎನ್.ಲಕ್ಷ್ಮಿನಾರಾಯಣರಾವ್, ಪ್ರೊ.ಕಾಳಚೆನ್ನೇಗೌಡ, ಡಾ.ಪೂರ್ಣಾನಂದ ಮತ್ತಿತರರು ಉಪಸ್ಥಿತರಿದ್ದರು.

ಮೈಸೂರು ಪಾಲಿಕೆಯಲ್ಲಿ ಸರ್ವ ಪಕ್ಷ ಸಭೆ...



ಮೈಸೂರು ಮಹಾನಗರ ಪಾಲಿಕೆ ಕಚೇರಿಯಲ್ಲಿ ಎಸ್ಐಆರ್, ಬಿಎಲ್ಎ–1, ಬಿಎಲ್ಎ–2 ಸಂಬಂಧ ಸರ್ವ ಪಕ್ಷದ ಅಧ್ಯಕ್ಷರು, ಮುಖ್ಯ ಪದಾಧಿಕಾರಿಗಳ ಸಭೆ ನಡೆಯಿತು. ಸಭೆಯಲ್ಲಿ ಅಧಿಕಾರಿಗಳಾದ ದಾಸೇಗೌಡ, ಸೋಮಶೇಖರ್, ವೆಂಕಟೇಶ್, ಮೈಸೂರು ನಗರ ಜೆಡಿಎಸ್ ಅಧ್ಯಕ್ಷ ಎಸ್‌ಬಿಎಮ್ ಮಂಜು, ಮುಖಂಡರಾದ ಫಾಲ್ಕನ್ ಬೋರೇಗೌಡ, ಚಂದ್ರಹಾಸ್, ರಿಜ್ವಾನ್, ರಘುರಾಮ್, ರಾಮು, ಕಾಂಗ್ರೆಸ್‌ನ ಶೌಕತ್ ಪಾಷಾ, ಕುಮಾರ್, ಬಿಜೆಪಿಯ ರಾಜೇಶ್, ದಿನೇಶ್‌ಗೌಡ, ದೇವರಾಜ್, ವಲಯ ಆಯುಕ್ತರು, ಅಧಿಕಾರಿಗಳು ಉಪಸ್ಥಿತರಿದ್ದರು.

ಪಿ.ಮಹೇಶ್‌ಗೆ ಪಿಹೆಚ್.ಡಿ ಪದವಿ



ಮೈಸೂರು: ಡಾ.ಎಂ.ಮಹೇಶ್ ಅವರ ಮಾರ್ಗದರ್ಶನದಲ್ಲಿ ಮಹೇಶ್.ಪಿ ಅವರು ಅರ್ಥಶಾಸ್ತ್ರ ವಿಷಯದಲ್ಲಿ ಸಂಶೋಧನೆ ನಡೆಸಿ ಸಾದರಪಡಿಸಿದ ಮಹಾಪ್ರಬಂಧವನ್ನು ಮೈಸೂರು ವಿವಿ ಪಿಹೆಚ್.ಡಿ ಪದವಿಗೆ ಅಂಗೀಕರಿಸಿದೆ.

ಗೃಹಲಕ್ಷ್ಮಿಗೆ ಕಂಡಿಷನ್: ಸಿ.ಟಿ.ರವಿ ಆಕ್ಷೇಪ

ಬೆಂಗಳೂರು: ಗೃಹಲಕ್ಷ್ಮಿ ಯೋಜನೆಗೆ ಆಗ ಇಲ್ಲದ ಕಂಡಿಷನ್ ಈಗ ಯಾಕೆ ಎಂದು ಬಿಜೆಪಿ ರಾಷ್ಟ್ರೀಯ ಮಾಜಿ ಪ್ರಧಾನ ಕಾರ್ಯದರ್ಶಿ ಹಾಗೂ ವಿಧಾನಪರಿಷತ್ ಸದಸ್ಯ ಸಿ.ಟಿ. ರವಿ ಪ್ರಶ್ನಿಸಿದ್ದಾರೆ.



ಮಾಧ್ಯಮಗಳೊಂದಿಗೆ ಮಾತನಾಡಿದ ಅವರು, ಕಾಕಾ ಪಾಟೀಲ್ ಗೂ ಫ್ರೀ, ಜಮೀರ್ ಅಹ್ಮದ್, ಮಹದೇವಪ್ಪ ನಿಗೂ ಫ್ರೀ ಎಂದು ಚುನಾವಣೆ ಪ್ರಚಾರದ ವೇಳೆ ಸಿದ್ದರಾಮಯ್ಯನವರು ತಿಳಿಸಿದ್ದರು ಎಂದು ಗಮನ ಸೆಳೆದರು. 10 ಕೆಜಿ ಅಕ್ಕಿ ಕೊಟ್ಟಿದ್ದೀರಾ. ಪ್ರಧಾನಿ ನರೇಂದ್ರ ಮೋದಿಯವರು 5 ಕೆಜಿ ಅಕ್ಕಿ ಕೊಡದೇ ಇದ್ದಿದ್ದರೆ, ನಿಮ್ಮನ್ನೇ ನಂಬಿದ್ದ ಜನರು ಖಾಲಿ ಹೊಟ್ಟೆಯಲ್ಲಿ ನೀರು ಕುಡಿದು ಮಲಗಬೇಕಿತ್ತು. ನಿಮ್ಮ ಕಂಡಿಷನ್ ಯಾಕೆ, ಖಜಾನೆ ಖಾಲಿ ಎಂಬುದು ಜನರಿಗೆ ಗೊತ್ತಿದೆ ಎಂದು ತಿಳಿಸಿದರು. ಫಲಾನುಭವಿ ಜನರನ್ನು ಕಡಿಮೆ ಮಾಡಲು ಕಂಡಿಷನ್ ಹಾಕುತ್ತೀರಿ. ನಿಮ್ಮ ಹಳೆ ಭಾಷಣವನ್ನು ಜನರು ಕೇಳಿಸಿಕೊಳ್ಳುತ್ತಾರೆ ಎಂದರು. ಇದಕ್ಕೆ ಸೂಕ್ತ ಸಮಯದಲ್ಲಿ ಜನರು ಉತ್ತರ ಕೊಡುತ್ತಾರೆ ಎಂದು ಹೇಳಿದರು. ನಮಗೂ ಗ್ಯಾರಂಟಿ ಯೋಜನೆಗಳಿಗೂ ಸಂಬಂಧ ಇಲ್ಲ ಎಂದು ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರು ಹೇಳಿದರೆ, ನಾವು ಪ್ರಶ್ನೆ ಮಾಡುವುದಿಲ್ಲ ಎಂದು ಸವಾಲು ಹಾಕಿದರು.

ಗೃಹಲಕ್ಷ್ಮಿ ಕೊಡಬೇಕಾಗುತ್ತದೆ ಎಂದು ಹೊಸ ಬಿಪಿಎಲ್ ಕಾರ್ಡ್ ಕೊಡುವುದನ್ನೂ ನಿಲ್ಲಿಸಿದ್ದಾರೆ. ಇದರಿಂದಾಗಿ ಅರ್ಹ ಫಲಾನುಭವಿಗಳು ಬಿಪಿಎಲ್ ಕಾರ್ಡ್‌ನಿಂದಲೂ ವಂಚಿತರಾಗಿದ್ದಾರೆ. ಇದು ಸರಿಯಲ್ಲ ಎಂದರು.

ಗೃಹಲಕ್ಷ್ಮಿ ಯೋಜನೆ ಪರಿಷ್ಕರಣೆಯೇ ಹೊರತು ಸ್ಥಗಿತಗೊಳಿಸುವ ಉದ್ದೇಶವಿಲ್ಲ

ಗ್ಯಾರಂಟಿ ಯೋಜನೆಗಳ ಅನುಷ್ಠಾನ ಪ್ರಾಧಿಕಾರದ ಉಪಾಧ್ಯಕ್ಷ ದಿನೇಶ್ ಗೂಳಿಗೌಡ ಸ್ಪಷ್ಟನೆ

- ಮೃತಪಟ್ಟವರ ಬ್ಯಾಂಕ್ ಖಾತೆಗೂ ಯೋಜನೆ ಹಣ ಜಮೆ; ಸರ್ಕಾರದ ಹಣ ದುರುಪಯೋಗ ತಪ್ಪಿಸಲು ಈ ಕ್ರಮ
- ಇದರಿಂದ ಅರ್ಹರಿಗೆ ಯಾವುದೇ ತೊಂದರೆಯಾಗದು; ಜೀವಿತ ಪ್ರಮಾಣ ಪತ್ರ ಕಡ್ಡಾಯಕ್ಕೆ ಮನವಿ

ಬೆಂಗಳೂರು: ರಾಜ್ಯ ಸರ್ಕಾರದ ಮಹತ್ವಾಕಾಂಕ್ಷೆಯ ಗೃಹಲಕ್ಷ್ಮೀ ಯೋಜನೆಯ ದುರುಪಯೋಗ ತಡೆದು, ಅರ್ಹರಿಗೆ ಮಾತ್ರ ಸೌಲಭ್ಯ ತಲುಪಿಸುವ ನಿಟ್ಟಿನಲ್ಲಿ ಪರಿಷ್ಕರಣೆಗೆ ಆಗ್ರಹಿಸಲಾಗಿದೆಯೇ ಹೊರತು, ಯೋಜನೆಯನ್ನು ನಿಲ್ಲಿಸುವ ಯಾವುದೇ ಉದ್ದೇಶ ಸರ್ಕಾರಕ್ಕಿಲ್ಲ ಎಂದು ಕರ್ನಾಟಕ ರಾಜ್ಯ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಪ್ರಾಧಿಕಾರದ ಉಪಾಧ್ಯಕ್ಷರೂ ಆದ ವಿಧಾನಪರಿಷತ್ ಸದಸ್ಯ ದಿನೇಶ್ ಗೂಳಿಗೌಡ ಸ್ಪಷ್ಟಪಡಿಸಿದ್ದಾರೆ.



ದಿನೇಶ್ ಗೂಳಿಗೌಡ

ವಿರೋಧ ಪಕ್ಷದವರು ಗೃಹಲಕ್ಷ್ಮೀ ಯೋಜನೆ ಕುರಿತು ಇಲಸಲ್ಲದ ಅಪಪ್ರಚಾರ ಮಾಡುವ ಮೂಲಕ ಸಾರ್ವಜನಿಕರಲ್ಲಿ ಗೊಂದಲ ಮೂಡಿಸುತ್ತಿದ್ದಾರೆ. ವಿರೋಧ ಪಕ್ಷದ ನಾಯಕರ ಆರೋಪಗಳಲ್ಲಿ ಯಾವುದೇ ಸತ್ಯಾಂಶವಿಲ್ಲ. ರಾಜ್ಯದಲ್ಲಿ ಈವರೆಗೆ ಸುಮಾರು 1.24 ಕೋಟಿಗೂ ಅಧಿಕ ಮಹಿಳೆಯರಿಗೆ ಪ್ರತಿ ತಿಂಗಳು ತಲಾ 2,000 ರೂ. ಗೃಹಲಕ್ಷ್ಮೀ ಯೋಜನೆಯ ಹಣ ತಲುಪುತ್ತಿದೆ. ಇತ್ತೀಚಿನ ಅಂಕಿ–ಅಂಶಗಳ ಪ್ರಕಾರ, ಯೋಜನೆ ಫಲಾನುಭವಿಗಳಾಗಿದ್ದ ಸುಮಾರು 1.95 ಲಕ್ಷಕ್ಕೂ ಹೆಚ್ಚು ಕುಟುಂಬದ ಯಜಮಾನಿಯರು ಮರಣ ಹೊಂದಿದ್ದಾರೆ. ಆದಾಗ್ಯೂ, ತಾಂತ್ರಿಕ ಕಾರಣಗಳಿಂದಾಗಿ ಮೃತಪಟ್ಟವರ ಬ್ಯಾಂಕ್ ಖಾತೆಗಳಿಗೂ ಇನ್ನೂ ಹಣ ಸಂದಾಯವಾಗುತ್ತಿರುವುದು ಗಮನಕ್ಕೆ ಬಂದಿದೆ. ಈ ರೀತಿಯ ದುರುಪಯೋಗ ತಡೆಯುವ ಕೆಲಸ ಮಾಡಲಾಗುತ್ತಿದೆ ಎಂದು ದಿನೇಶ್ ಗೂಳಿಗೌಡ ತಿಳಿಸಿದ್ದಾರೆ.



ಮುಖ್ಯಮಂತ್ರಿಗಳಿಗೆ ಮನವಿ: ಮೃತಪಟ್ಟವರ ಖಾತೆಗಳಿಗೆ ಸರ್ಕಾರದ ಹಣ ಪಾವತಿಯಾಗುತ್ತಿರುವುದನ್ನು ತಡೆಗಟ್ಟುವುದರ ಜೊತೆಗೆ ಅರ್ಹರು ಗೃಹಲಕ್ಷ್ಮಿ ಯೋಜನೆಯ ಸದುಪಯೋಗಪಡಿಸಿಕೊಳ್ಳುವ ನಿಟ್ಟಿನಲ್ಲಿ ಸೂಕ್ತ ಕ್ರಮಕ್ಕೆ ಹಿಂದಿನ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ಲಿಖಿತ ಮನವಿ ಸಲ್ಲಿಸಿ, ಫಲಾನುಭವಿಗಳಿಗೆ 'ಜೀವಿತ ಪ್ರಮಾಣ ಪತ್ರ' ಕಡ್ಡಾಯಗೊಳಿಸುವಂತೆ ಕೋರಿದ್ದೆ. ಹಾಗೆಯೇ ಹಾಲಿ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರಿಗೂ ಮನವಿ ಮಾಡಿದ್ದು, ಯೋಜನೆಯಲ್ಲಿನ ಲೋಪದೋಷಗಳನ್ನು ಸರಿಪಡಿಸಿ, ಮೃತಪಟ್ಟವರು ಹಾಗೂ ಅನರ್ಹರನ್ನು ಯೋಜನೆಯಿಂದ ಹೊರಗಿಡುವ ನಿಟ್ಟಿನಲ್ಲಿ ಗೃಹಲಕ್ಷ್ಮೀ ಯೋಜನೆಯನ್ನು ಸಂಪೂರ್ಣವಾಗಿ ಪರಿಷ್ಕರಣೆ ಮಾಡಬೇಕೆಂದು ಒತ್ತಾಯಿಸಿರುವುದಾಗಿ ದಿನೇಶ್ ಗೂಳಿಗೌಡ ಹೇಳಿದ್ದಾರೆ.

ಸರ್ಕಾರದ ಉದ್ದೇಶ ಸ್ಪಷ್ಟ

"ಮುಖ್ಯಮಂತ್ರಿಗಳು ಮನವಿಯನ್ನು ಪುರಸ್ಕರಿಸಿ ಯೋಜನೆಯ ಪರಿಷ್ಕರಣೆಗೆ ಮುಂದಾಗಿದ್ದಾರೆ. ಈ ಪ್ರಕ್ರಿಯೆಯ ಮೂಲ ಉದ್ದೇಶ ಮೃತಪಟ್ಟ ಹಾಗೂ ಅನರ್ಹ ಫಲಾನುಭವಿಗಳನ್ನು ಪತ್ತೆಹಚ್ಚಿ, ಸರ್ಕಾರದ ಹಣ ದುರುಪಯೋಗವಾಗುವುದನ್ನು ತಪ್ಪಿಸುವುದಷ್ಟೇ ಆಗಿದೆ. ಇದರಿಂದ ಯಾವುದೇ ಕಾರಣಕ್ಕೂ ಪ್ರಸ್ತುತ ಸೌಲಭ್ಯ ಪಡೆಯುತ್ತಿರುವ ಅರ್ಹ ಫಲಾನುಭವಿಗೆ ಯಾವುದೇ ರೀತಿಯ ತೊಂದರೆಯಾಗಲಿ ಅಥವಾ ನಷ್ಟವಾಗಲಿ ಸಂಭವಿಸುವುದಿಲ್ಲ. ಹಾಗಾಗಿ, ವಿರೋಧ ಪಕ್ಷದವರ ರಾಜಕೀಯ ಪ್ರೇರಿತ ಅಪಪ್ರಚಾರಗಳನ್ನು ಯಾರೂ ನಂಬಬಾರದು.

–ದಿನೇಶ್ ಗೂಳಿಗೌಡ

ಚಿನ್ನತಂಬಿ ಬಹುಕೋಟಿ ವಂಚನೆ ಪ್ರಕರಣ

ಇಡಿ, ಸಿಬಿಐ ಇಲ್ಲವೆ ನ್ಯಾಯಾಂಗ ತನಿಖೆಗೆ ಕೆಆರ್‌ಎಸ್ ಪಕ್ಷ ಆಗ್ರಹ

ಮೈಸೂರು, ಜೂ.11(ಜಿಎ)–ಸೌಂದರ್‌ರಾಜ್ ಅಲಿಯಾಸ್ ಚಿನ್ನತಂಬಿ ಸುಮಾರು 500 ಕೋಟಿ ರೂ. ಚಿನ್ನ ಅಡಮಾನ ಹಗರಣದ ತನಿಖೆಯನ್ನು ಜಾರಿ ನಿರ್ದೇಶನಾಲಯ (ಇಡಿ), ಕೇಂದ್ರ ತನಿಖಾ ದಳ (ಸಿಬಿಐ) ಅಥವಾ ನ್ಯಾಯಾಂಗ ಆಯೋಗಕ್ಕೆ ವಹಿಸುವಂತೆ ಕರ್ನಾಟಕ ರಾಷ್ಟ್ರ ಸಮಿತಿ ಪಕ್ಷ (ಕೆಆರ್‌ಎಸ್) ಆಗ್ರಹಿಸಿದೆ.

ಈ ಸಂಬಂಧ ಕೆಆರ್‌ಎಸ್ ಪಕ್ಷದ ರಾಜ್ಯ ಕಾರ್ಯಕಾರಿ ಸಮಿತಿ ಸದಸ್ಯ ಎಸ್.ನಾಗೇಂದ್ರ ಜೂ.8ರಂದು ಬೆಂಗಳೂರಿನ ಇಡಿ ವಲಯ ಕಚೇರಿಯ ಜಂಟಿ ನಿರ್ದೇಶಕರಿಗೆ ದೂರು ಸಲ್ಲಿಸಿದ್ದು, ಹಣ ಅಕ್ರಮ ವರ್ಗಾವಣೆ ತಡೆ ಕಾಯ್ದೆ 2002ರ ಅಡಿಯಲ್ಲಿ ಇಸಿಐಆರ್ ದಾಖಲಿಸಿ ತನಿಖೆ ನಡೆಸುವಂತೆ ಮನವಿ ಮಾಡಿದ್ದಾರೆ.

ದೂರಿನಲ್ಲಿ ಚಿನ್ನತಂಬಿ ಒಡೆತನದ ಸಂಸ್ಥೆಗಳಾದ ಎಟಿಜೆ ಗೋಲ್ಡ್, ಧನಗಣಪತಿ ಫೈನಾನ್ಸ್, ಎಸ್‌ಡಿಜೆ ಗೋಲ್ಡ್ ಹಾಗೂ ಎಸ್‌ಟಿಜಿ ಗೋಲ್ಡ್ ವಿರುದ್ಧ ಕ್ರಮ ಕೈಗೊಳ್ಳುವುದು ಜೊತೆಗೆ ಹಗರಣದಲ್ಲಿ ಭಾಗಿಯಾಗಿರುವ ಯಾವುದೇ ಸರ್ಕಾರಿ ಅಧಿಕಾರಿಗಳು ಪಾತ್ರವಿದ್ದರೆ ಅವರ ವಿರುದ್ಧವೂ ತನಿಖೆ ನಡೆಸುವಂತೆ ಕೋರಲಾಗಿದೆ.



ಸುದ್ದಿಗೋಷ್ಠಿಯಲ್ಲಿ ವಕೀಲ ರವಿಕುಮಾರ್ ಮಾತನಾಡಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಕೆಆರ್‌ಎಸ್ ಸಂಘಟನಾ ಕಾರ್ಯದರ್ಶಿ ಹಾಗೂ ವಕೀಲ ರವಿಕುಮಾರ್ ಮಾತನಾಡಿ, ನಗರ ಅಪರಾಧ ವಿಭಾಗವು (ಸಿಸಿಬಿ) ನಡೆಸುತ್ತಿರುವ ತನಿಖೆ ಸಮರ್ಪಕವಾಗಿಲ್ಲ. ಕೆಲವು ಪೊಲೀಸ್ ಸಿಬ್ಬಂದಿ, ಪ್ರಮುಖ ಆರೋಪಿಯೊಂದಿಗೆ ಕೈಜೋಡಿಸಿರುವ ಸಾಧ್ಯತೆ ಇದೆ ಎಂದು ಅನುಮಾನ ವ್ಯಕ್ತಪಡಿಸಿದರು.

ಪ್ರಕರಣವು ಮೊದಲು ಕುವೆಂಪುನಗರ ಪೊಲೀಸ್ ಠಾಣೆಯಲ್ಲಿ ದಾಖಲಾಗಿದ್ದು, ಬಳಿಕ ಸಿಸಿಬಿಗೆ ವರ್ಗಾಯಿಸಲಾಯಿತು. ಆದರೆ ಚಿನ್ನತಂಬಿ ವಿರುದ್ಧ ದಾಖಲಿಸಿರುವ ಕೇಸ್‌ಗಳನ್ನು ದುರ್ಬಲಗೊಳಿಸುವ ಪ್ರಯತ್ನ ನಡೆದಿದೆ. ಪ್ರಕರಣದ ತನಿಖೆಯ ಪ್ರಗತಿ ಕುರಿತು ನಗರ ಪೊಲೀಸ್ ಆಯುಕ್ತರಿಂದ ಮಾಹಿತಿ ಪಡೆಯಲು ಪ್ರಯತ್ನಿಸಿದರೂ ತೃಪ್ತಿಕರ ಉತ್ತರ ದೊರೆತಿಲ್ಲ ಎಂದು ಬೇಸರ ವ್ಯಕ್ತಪಡಿಸಿದ ಅವರು, ತನಿಖೆಯಲ್ಲಿ ಪಾರದರ್ಶಕತೆ ಕಾಪಾಡಲು ಹೊರಗಿನ ಹಿರಿಯ ಪೊಲೀಸ್ ಅಧಿಕಾರಿಗಳು ಮೇಲ್ವಿಚಾರಣೆ ನಡೆಸಬೇಕು ಎಂದು ಒತ್ತಾಯಿಸಿದರು.

ಇಡಿಗೆ ಸಲ್ಲಿಸಿದ ದೂರಿನಲ್ಲಿ ಏನಿದೆ: ಇಡಿಗೆ ಸಲ್ಲಿಸಿರುವ ದೂರಿನಲ್ಲಿ, ಆರೋಪಿಗಳು ಮತ್ತು ಸಂಬಂಧಿತ ಸಂಸ್ಥೆಗಳು ಕಳೆದ 10 ವರ್ಷಗಳ ಕಾಲ ನಡೆಸಿರುವ ವ್ಯವಹಾರದ ಬ್ಯಾಂಕ್ ಖಾತೆಗಳ ಬಗ್ಗೆ ಫೊರೆನ್ಸಿಕ್ ಪರಿಶೀಲನೆ ನಡೆಸಬೇಕು. ಜೊತೆಗೆ ಕಾಲ್ ಡೀಟೇಲ್ ದಾಖಲೆಗಳು ಮತ್ತು ಮೊಬೈಲ್ ಟವರ್ ಲೊಕೇಶನ್‌ಗಳ ವಿಶ್ಲೇಷಣೆ ಮೂಲಕ ಅಧಿಕಾರಿಗಳೊಂದಿಗೆ ಇರುವ ಸಂಪರ್ಕಗಳನ್ನು ಪತ್ತೆಹಚ್ಚಬೇಕು ಎಂದು ದೂರಿನಲ್ಲಿ ಉಲ್ಲೇಖಿಸಲಾಗಿದೆ. ಪಿಎಂಎಲ್ಎ ಕಾಯ್ದೆಯಡಿ ಆರೋಪಿಗಳ ಚರ, ಸ್ಥಿರ ಹಾಗೂ ಬೇನಾಮಿ ಆಸ್ತಿಗಳನ್ನು ಜಪ್ತಿ ಮಾಡುವಂತೆಯೂ ಮನವಿ ಮಾಡಲಾಗಿದೆ.

600ಕ್ಕೂ ಹೆಚ್ಚು ದೂರುಗಳು, ಕೇವಲ ನಾಲ್ಕು ಎಫ್ಐಆರ್: ಹೂಡಿಕೆದಾರರಿಂದ 600ಕ್ಕೂ ಹೆಚ್ಚು ದೂರುಗಳು ಸಲ್ಲಿಕೆಯಾಗಿದ್ದರೂ, ಪೊಲೀಸರು ಕೇವಲ 4 ಎಫ್ಐಆರ್‌ಗಳನ್ನು ಮಾತ್ರ ದಾಖಲಿಸಿದ್ದಾರೆ. ಇದರಿಂದ ದೊಡ್ಡ ಮಟ್ಟದ ಹಣಕಾಸು ವಂಚನೆಯನ್ನು ನಾಗರಿಕ ವಿವಾದದಂತೆ ಬಿಂಬಿಸುವ ಪ್ರಯತ್ನ ನಡೆದಿದೆ ಎಂದು ಆರೋಪಿಸಿದರು. ಸಿಸಿಬಿಗೆ ದೂರು ನೀಡಿದ ತಕ್ಷಣವೇ ಕೆಲ ದೂರುದಾರರಿಗೆ ಚಿನ್ನತಂಬಿ ಸಂಸ್ಥೆಗಳ ಪ್ರತಿನಿಧಿಗಳಿಂದ ರಾಜೀ ಮಾತುಕತೆಗೆ ಕರೆಗಳು ಬಂದಿವೆ. ದೂರುದಾರರು ಪೊಲೀಸರನ್ನು ಸಂಪರ್ಕಿಸಿದ ಕೂಡಲೇ ಕಂಪನಿಗಳಿಗೆ ಮಾಹಿತಿ ಹೇಗೆ ತಲುಪುತ್ತಿದೆ? ಪೊಲೀಸ್ ಇಲಾಖೆ ಒಳಗಿನ ಮಾಹಿತಿ ಹಂಚಿಕೆ ಇಲ್ಲದೆ ಇದು ಸಾಧ್ಯವೇ? ಎಂದು ಪ್ರಶ್ನಿಸಿದರು. ಸುದ್ದಿಗೋಷ್ಠಿಯಲ್ಲಿ ಕೆಆರ್‌ಎಸ್ ಮೈಸೂರು ಜಿಲ್ಲಾಧ್ಯಕ್ಷ ಆರ್.ನಾಗರಾಜ್, ಮಹಿಳಾ ಘಟಕದ ಪ್ರಧಾನ ಕಾರ್ಯದರ್ಶಿ ಆರ್.ಚಂದ್ರಕಲಾ, ನಗರ ಘಟಕದ ಅಧ್ಯಕ್ಷ ರವೀಂದ್ರ ಹಾಗೂ ತುಮಕೂರಿನ ಸಂತ್ರಸ್ತೆ ಜಯಮ್ಮ ಉಪಸ್ಥಿತರಿದ್ದರು.

ಬೀದಿ ವ್ಯಾಪಾರಿಯೂ ನೋಂದಾಯಿಸಿಕೊಳ್ಳಬೇಕಿದ್ದು, ಆರ್‌ಎಸ್‌ಎಸ್‌ಗೆ ವಿನಾಯಿತಿ ಏಕೆ?

ಗೃಹ ಸಚಿವ ಪ್ರಿಯಾಂಕ್ ಖರ್ಗೆ ಪ್ರಶ್ನೆ

ಬೆಂಗಳೂರು, ಜೂ.11– ರಾಷ್ಟ್ರೀಯ ಸ್ವಯಂಸೇವಕ ಸಂಘದ ವಿರುದ್ಧದ ವಾಗ್ದಾಳಿಯನ್ನು ಮತ್ತಷ್ಟು ತೀವ್ರಗೊಳಿಸಿದ ಗೃಹ ಸಚಿವ ಪ್ರಿಯಾಂಕ್ ಖರ್ಗೆ ಅವರು, ಆರ್‌ಎಸ್‌ಎಸ್ ಯಾವ ಕಾನೂನುಗಳ ಅಡಿಯಲ್ಲಿ ವಿನಾಯಿತಿ ಪಡೆದಿದೆ ಎಂಬುದನ್ನು ಬಹಿರಂಗಪಡಿಸಬೇಕು ಎಂದು ಸವಾಲು ಹಾಕಿದ್ದಾರೆ.



ಪ್ರತಿಯೊಬ್ಬ ಬೀದಿ ವ್ಯಾಪಾರಿಯೂ ನೋಂದಾಯಿಸಿಕೊಳ್ಳಲೇಬೇಕಾದ ಈ ದೇಶದಲ್ಲಿ, ಆರ್‌ಎಸ್‌ಎಸ್‌ನಂತಹ ಒಂದು ದೊಡ್ಡ ಸಂಸ್ಥೆಯು ಕಾನೂನನ್ನು ಮೀರಿ ಹೇಗೆ ವಿನಾಯಿತಿ ಪಡೆಯಲು ಸಾಧ್ಯ ಎಂದು ಖರ್ಗೆ ಪ್ರಶ್ನಿಸಿದ್ದಾರೆ.

ಆರ್‌ಎಸ್‌ಎಸ್ ನನ್ನನ್ನು ತನ್ನ ಕೇಶವ ಕೃಪ ಪ್ರಧಾನ ಕಚೇರಿಗೆ ಕರೆಯಲಿ. ಅವರಿಗೆ ವಿನಾಯಿತಿ ನೀಡುವ ಕಾನೂನು ಯಾವುದು ಎಂದು ನನಗೆ ತೋರಿಸಲಿ. ಅಥವಾ, ಅವರು ದಾಖಲೆಗಳೊಂದಿಗೆ ನನ್ನ ಕಚೇರಿಗೆ ಬರಲಿ. ಅವರು ಸಾಂವಿಧಾನಿಕ ನಿಬಂಧನೆಗಳಿಂದ ಹೇಗೆ ವಿನಾಯಿತಿ ಪಡೆದಿದ್ದಾರೆ ಎಂಬುದನ್ನು ಅವರು ತೋರಿಸಲಿ. ನಾನು ಅದನ್ನು ಪರಿಶೀಲಿಸುತ್ತೇನೆ. ನಾನು ತಪ್ಪಾಗಿ ಹೇಳುತ್ತಿದ್ದರೆ ಕ್ಷಮೆಯಾಚಿಸುತ್ತೇನೆ. ಇಲ್ಲದಿದ್ದರೆ, ಅವರು ತಿದ್ದುಪಡಿ ಮಾಡಿಕೊಳ್ಳಲಿ ಎಂದು ಖರ್ಗೆ ಹೇಳಿದ್ದಾರೆ.

ನಮ್ಮ ಸಂವಿಧಾನವು ದೇಶದ ಪ್ರತಿಯೊಂದು ಸಂಸ್ಥೆಯು ನೋಂದಾಯಿತ ಮತ್ತು ಜವಾಬ್ದಾರಿಯುತವಾಗಿರಬೇಕು ಎಂದು ಹೇಳುತ್ತದೆ. ಸಂವಿಧಾನ ವ್ಯಕ್ತಿಗಳ ಸಂಸ್ಥೆಗೆ ಯಾವುದೇ ವಿನಾಯಿತಿ ನೀಡುವುದಿಲ್ಲ. ನೀವು ಒಂದು ಸಂಘವಾಗಿ ಕೆಲಸ ಮಾಡಿದರೆ, ನೀವು ಒಂದು ಸಂಘವಾಗಿ ಉತ್ತರಿಸುತ್ತೀರಿ ಎಂದು ಪ್ರಿಯಾಂಕ್ ಖರ್ಗೆ ಎಕ್ಸ್‌ನಲ್ಲಿ ಪೋಸ್ಟ್ ಮಾಡಿದ್ದಾರೆ.

ಅಧಿಕ ಮಾಸ ಉಡಿ ತುಂಬುವ ಕಾರ್ಯಕ್ರಮ

ಮೈಸೂರು, ಜೂ.11– ಮೈಸೂರು ಲಕ್ಷ್ಮಿಪುರಂನಲ್ಲಿರುವ ಶ್ರೀ ದುರ್ಗಾ ಫೌಂಡೇಶನ್ ಕಚೇರಿಯಲ್ಲಿ ಅಧಿಕ ಮಾಸದ ನಿಮಿತ್ತ ಮಹಿಳೆಯರಿಗೆ ಉಡಿ ತುಂಬುವ ಕಾರ್ಯಕ್ರಮವನ್ನು ಏರ್ಪಡಿಸಲಾಗಿತ್ತು.

ಈ ವೇಳೆ ಫೌಂಡೇಷನ್ ಅಧ್ಯಕ್ಷರಾದ ರೇಖಾ ಶ್ರೀನಿವಾಸ್, ಮಹಿಳಾ ಮುಖಂಡರಾದ ಲತಾ ಮೋಹನ್, ಗ್ರಾಜ್ಯುಯೇಟ್ ಕೋ ಆಪರೇಟಿವ್ ಬ್ಯಾಂಕ್‌ನ ನಿರ್ದೇಶಕರಾದ ವರಲಕ್ಷ್ಮಿ, ಅಜಯ್, ಗೀತಾ, ರೂಪ, ಹೇಮಾವತಿ, ಶ್ವೇತಾ, ವರಲಕ್ಷ್ಮೀ, ಜ್ಯೋತಿ ಪ್ರಭಾ, ಸ್ನೇಹ, ವೀಣಾ, ಸುಲೋಚನ, ಇಂದ್ರ, ಸಂಪೂರ್ಣ, ವಿಜಯಾ, ಮೋಹನ ಹಾಗೂ ಇನ್ನಿತರರು ಭಾಗವಹಿಸಿದ್ದರು.

ಜೆಡಿಎಸ್ ಸಂಘಟನೆಗೆ ಪಕ್ಷ ನಿಯೋಜಿಸುವ ಬಿಎಲ್‌ಎ 2ಗಳ ಪಾತ್ರವೂ ಮಹತ್ವದ್ದು

ಪಕ್ಷದ ನಗರಾಧ್ಯಕ್ಷ ಎಸ್‌ಬಿಎಂ ಮಂಜು

ಮೈಸೂರು,ಜೂ.11(ಪಿಎಂ)– ಮೂರನೇ ಬಾರಿಗೆ ಹೆಚ್.ಡಿ.ಕುಮಾರಸ್ವಾಮಿ ಅವರು ಮುಖ್ಯಮಂತ್ರಿ ಆಗಬೇಕೆಂಬ ನಮ್ಮ ಗುರಿ ಸೇರಿದಂತೆ ಜೆಡಿಎಸ್ ಪಕ್ಷ ರಾಜಕೀಯವಾಗಿ ಶಕ್ತಿಯುತವಾಗಿ ಬೆಳೆಯಲು ಪಕ್ಷ ಸಂಘಟನೆ ಬಹುಮುಖ್ಯವಾಗಿದ್ದು, ಈ ನಿಟ್ಟಿನಲ್ಲಿ ಪಕ್ಷ ನಿಯೋಜಿಸುವ ಬಿಎಲ್‌ಎ 2ಗಳ ಪಾತ್ರವೂ ಮಹತ್ವದ್ದಾಗಲಿದೆ ಎಂದು ಜೆಡಿಎಸ್ ನಗರಾಧ್ಯಕ್ಷ ಎಸ್‌ಬಿಎಂ ಮಂಜು ಹೇಳಿದರು.



ಮೈಸೂರಿನ ಜೆಡಿಎಸ್ ಕಚೇರಿಯಲ್ಲಿ ಗುರುವಾರ ನಡೆದ ಸಭೆಯಲ್ಲಿ ನಗರಾಧ್ಯಕ್ಷ ಎಸ್‌ಬಿಎಂ ಮಂಜು ಮಾತನಾಡಿದರು.

ಮೈಸೂರಿನ ಜೆಡಿಎಸ್ ಕಚೇರಿಯಲ್ಲಿ ಚುನಾವಣಾ ಆಯೋಗ ನಡೆಸುತ್ತಿರುವ ಎಸ್‌ಐಆರ್(ಮತದಾರರ ಪಟ್ಟಿಗಳ ವಿಶೇಷ ಸಮಗ್ರ ಪರಿಷ್ಕರಣೆ) ಪ್ರಕ್ರಿಯೆ ಸಂಬಂಧ ಪಕ್ಷದ ಬೂತ್ ಲೆವೆಲ್ ಏಜೆಂಟ್ 2 (ಬಿಎಲ್‌ಎ 2) ನಿಯೋಜಿಸುವ ಕುರಿತು ಹಾಗೂ ಪಕ್ಷ ಸಂಘಟನೆ ವಿಚಾರವಾಗಿ ಗುರುವಾರ ಹಮ್ಮಿಕೊಂಡಿದ್ದ ಸಭೆಯಲ್ಲಿ ಅವರು ಮಾತನಾಡಿದರು.

ಚುನಾವಣಾ ಆಯೋಗ ಎಸ್‌ಐಆರ್ ಪ್ರಕ್ರಿಯೆಗೆ ಮುಂದಾಗಿದ್ದು, ಇದರಲ್ಲಿ ಅಧಿಕಾರಿಗಳು ಬಿಎಲ್‌ಓಗಳಾಗಿ ನಿಯೋಜನೆಯಾಗಲಿದ್ದು, ಅವರೊಂದಿಗೆ ಪಕ್ಷದ ಪರ ನಿಯೋಜನೆಯಾಗುವ ಬಿಎಲ್‌ಎ 2ಗಳು ಕೆಲಸ ಮಾಡಬೇಕಾಗುತ್ತದೆ. ಬಹುಮುಖ್ಯವಾಗಿ ಜೆಡಿಎಸ್ ಪರವಾಗಿರುವ ಅರ್ಹ ಮತದಾರರು ಪಟ್ಟಿಯಿಂದ ಕೈಬಿಟ್ಟು ಹೋಗದಂತೆ ಎಚ್ಚರಿಕೆಯಿಂದ ನೋಡಿಕೊಳ್ಳಬೇಕು ಎಂದು ಸಲಹೆ ನೀಡಿದರು.

ಬೂತ್‌ಗೆ ಒಬ್ಬರು ಬಿಎಲ್‌ಓಗಳು ನಿಯೋಜನೆಗೊಳ್ಳುತ್ತಾರೆ. ಪ್ರತಿ ಬಿಎಲ್‌ಓಗಳು ದಿನಕ್ಕೆ ಕೇವಲ 50 ಮತದಾರರ ಬಗ್ಗೆ ಪರಿಶೀಲನೆ ಮಾಡುತ್ತಾರೆ. ಅವರೊಂದಿಗೆ ಪಕ್ಷದ ಪರ ಒಬ್ಬರು ಬಿಎಲ್‌ಎ 2 ಕೆಲಸ ಮಾಡಬೇಕಿದೆ. ಬಿಎಲ್‌ಎ 1 ಇಡೀ ಕ್ಷೇತ್ರಕ್ಕೆ ಒಬ್ಬರನ್ನು ನಿಯೋಜಿಸಿಕೊಳ್ಳಬೇಕು. ಈಗಾಗಲೇ ಆ ಪ್ರಕ್ರಿಯೆ ಮಾಡಿದ್ದೇವೆ. ಬಿಎಲ್‌ಎ 2ಗಳು ತಮ್ಮ ಬೂತ್‌ನಲ್ಲಿ ಮತದಾರರ ಪರಿಷ್ಕರಣೆಯನ್ನು ನೋಡಿಕೊಳ್ಳಬೇಕು ಎಂದು ಹೇಳಿದರು.

ರಾಜಕೀಯ ಪಕ್ಷಗಳಿಂದ ಈ ಹಿಂದೆ ಬೂತ್ ಏಜೆಂಟ್ ಎಂದು ಮಾಡಲಾಗುತ್ತಿತ್ತು. ಅದನ್ನೇ ಈಗ ಬಿಎಲ್‌ಎ 2 ಎಂದು ಕರೆಯಲಾಗುತ್ತಿದೆ. ಬಿಎಲ್‌ಎ 2 ನಿಯೋಜನೆ ಸಮರ್ಪಕವಾಗಿರಬೇಕು. ಅವರು ಮತದಾರರ ಪಟ್ಟಿ ಬಗ್ಗೆ ತಿಳಿದುಕೊಂಡಿರಬೇಕು. ಪಾಲಿಕೆಯ ವಲಯ ಕಚೇರಿಗಳ ವ್ಯಾಪ್ತಿಯಲ್ಲಿ ಸಭೆಗಳನ್ನು ಮಾಡುತ್ತಿದ್ದು, ಅದರಲ್ಲಿ ನಮ್ಮ ಪಕ್ಷದ ಕಾರ್ಯಕರ್ತರು ಭಾಗವಹಿಸಿ ಎಸ್‌ಐಆರ್ ಬಗ್ಗೆ ತಿಳಿದುಕೊಳ್ಳಬೇಕು ಎಂದು ಸಲಹೆ ನೀಡಿದರು.

ಬಿಎಲ್‌ಎ 2 ಫಾರಂ ಇಂಗ್ಲಿಷ್‌ನಲ್ಲಿ ಇದ್ದು, ಕನ್ನಡದಲ್ಲಿ ಮುದ್ರಿಸಿ ನೀಡುವಂತೆ ಪಾಲಿಕೆಯಲ್ಲಿ ನಡೆದ ಸಭೆಯಲ್ಲಿ ಆಯುಕ್ತರಲ್ಲಿ ಆಗ್ರಹಿಸಿದ್ದೇನೆ. ಇದಕ್ಕೆ ಅವರು ಸಮ್ಮತಿಸಿದ್ದಾರೆ. ವಿವಿಧ ಘಟಕಗಳ ಅಧ್ಯಕ್ಷರು ಮೊದಲು ನಗರ ಪಾಲಿಕೆ ಮಾಜಿ ಸದಸ್ಯರನ್ನು ಭೇಟಿ ಮಾಡಿ ಅವರ ಸಹಕಾರದೊಂದಿಗೆ ಬೂತ್ ಕಮಿಟಿಗಳನ್ನು ರಚನೆ ಮಾಡಬೇಕು ಎಂದರು.

ಜೂ.20ರಿಂದ 29ರವರೆಗೆ ಚುನಾವಣಾ ಅಧಿಕಾರಿಗಳು ತರಬೇತಿ ನಡೆಸಲಿದ್ದು, ಇದರಲ್ಲಿ ಬಿಎಲ್‌ಎ 2ಗಳು ಭಾಗವಹಿಸಬೇಕು. ಜೂ.30ರಿಂದ ಜು.29ರವರೆಗೆ ಬಿಎಲ್‌ಓಗಳು ಮನೆ ಮನೆಗೆ ಭೇಟಿ ನೀಡಲಿದ್ದು, ಬಿಎಲ್‌ಎ 2ಗಳು ಅವರೊಂದಿಗೆ ಇರಬೇಕು. ಆ.5ರಂದು ಕರಡು ಮತದಾರರ ಪಟ್ಟಿ ಪ್ರಕಟಣೆಯಾಗಲಿದ್ದು, ಆಗ ಪಟ್ಟಿಯನ್ನು ಬಿಎಲ್‌ಎ 2ಗಳು ಅವಲೋಕಿಸಬೇಕು. ಜೊತೆಗೆ ಪಕ್ಷದ ಸದಸ್ಯತ್ವ ಅಭಿಯಾನ ಚುರುಕುಗೊಳಿಸಬೇಕು ಎಂದು ತಿಳಿಸಿದರು.

ಜೆಡಿಎಸ್ ಮಾಜಿ ನಗರಾಧ್ಯಕ್ಷ ಚೆಲುವೇಗೌಡ ಮಾತನಾಡಿ, ವಾರ್ಡ್‌ಗಳಲ್ಲಿ ಅಧ್ಯಕ್ಷರನ್ನು ನೇಮಕ ಮಾಡಬೇಕಿದೆ. ಇದು ಪಕ್ಷದ ಸಂಘಟನೆಗೆ ಮುಖ್ಯವಾಗಿದೆ. ಪಕ್ಷದ ವರಿಷ್ಠರು ನೀಡುವ ನಿರ್ದೇಶನಗಳನ್ನು ಜಾರಿಗೊಳಿಸುವಲ್ಲಿ ಈ ಪದಾಧಿಕಾರಿಗಳ ಪಾತ್ರ ಮಹತ್ವದ್ದಾಗಿದೆ ಎಂದರು.

ಪಕ್ಷದ ಯುವ ಘಟಕದ ನಗರಾಧ್ಯಕ್ಷ ಮದನ್ ಮಾದೇಶ್ ಮಾತನಾಡಿ, ವಾರದಲ್ಲಿ ಬಾಕಿ ಉಳಿದಿರುವ ಪದಾಧಿಕಾರಿಗಳನ್ನು ನೇಮಕ ಮಾಡುವುದಾಗಿ ತಿಳಿಸಿದರು. ನಗರ ಘಟಕದ ಮಹಿಳಾ ಅಧ್ಯಕ್ಷೆ ಹೇಮಾವತಿ ಮಾತನಾಡಿ, ಪಕ್ಷದ ಬಗ್ಗೆ ವಿಶೇಷ ಕಾಳಜಿ ಹೊಂದಿರುವವರನ್ನು ಬಿಎಲ್‌ಎ 2ಗಳಾಗಿ ನಿಯೋಜಿಸಬೇಕು. ರಾಜ್ಯದಲ್ಲಿ ಮುಂದಿನ ಸರ್ಕಾರ ನಮ್ಮದಾಗಬೇಕಾದರೆ ಇಂದು ಶ್ರಮ ವಹಿಸಬೇಕು ಎಂದು ಹೇಳಿದರು.

ನಗರ ಪಾಲಿಕೆ ಮಾಜಿ ಸದಸ್ಯ ಶಿವಣ್ಣ, ಪಕ್ಷದ ಹಿಂದುಳಿದ ವರ್ಗ ಘಟಕದ ಅಧ್ಯಕ್ಷ ರಾಕೇಶ್ ಮಿತ್ತಲ್, ನಗರ ಜೆಡಿಎಸ್ ಎಸ್‌ಸಿ ಘಟಕದ ಅಧ್ಯಕ್ಷ ಪ್ರಕಾಶ್, ಕೆಆರ್ ಕ್ಷೇತ್ರ ಅಧ್ಯಕ್ಷ ರಘುರಾಮ್, ಎನ್‌ಆರ್ ಕ್ಷೇತ್ರದ ಅಧ್ಯಕ್ಷ ರಿಜ್ವಾನ್, ಚಾಮರಾಜ ಕ್ಷೇತ್ರದ ಅಧ್ಯಕ್ಷ ಚಂದ್ರಹಾಸ್, ಮುಖಂಡರಾದ ಭೋಜರಾಜ, ಎನ್.ಎಂ.ರಾಮು ಮತ್ತಿತರರು ಸಭೆಯಲ್ಲಿ ಪಾಲ್ಗೊಂಡಿದ್ದರು.

ಮೈಸೂರಲ್ಲಿ ಧಾರಾಕಾರ ಮಳೆ



ಮೈಸೂರು ನಗರದಲ್ಲಿ ಗುರುವಾರ ಸಂಜೆ ಮಳೆ ವೇಳೆ ನಾಗರಿಕರು ಕೊಡೆ ಹಿಡಿದು ಸಾಗಿದರು.



ಮೇಟಗಳ್ಳಿಯಲ್ಲಿ ಭಾರೀ ಗಾತ್ರದ ಕೊಂಬೆಯೊಂದು ಮುರಿದು ಬಿದ್ದಿತ್ತು.

ಮೈಸೂರು,ಜೂ.11(ಪಿಎಂ)– ಸಾಂಸ್ಕೃತಿಕ ನಗರಿ ಮೈಸೂರಿನಲ್ಲಿ ಗುರುವಾರ ಸಂಜೆ ಗುಡುಗು ಮಿಂಚಿನೊಂದಿಗೆ ಧಾರಾಕಾರ ಮಳೆಯಾಯಿತು. ಮೈಸೂರು ನಗರದಾದ್ಯಂತ ಸಂಜೆ 5ರ ಸುಮಾರಿಗೆ ಆರಂಭವಾದ ಮಳೆ, ತಾಸಿಗೂ ಹೆಚ್ಚು ಕಾಲ ಧಾರಾಕಾರವಾಗಿ ಸುರಿಯಿತು.

ಮೈಸೂರಿನ ಹೃದಯಭಾಗ ಮಾತ್ರವಲ್ಲದೆ, ಬೋಗಾದಿ, ರಾಮಕೃಷ್ಣನಗರ, ಹೆಬ್ಬಾಳು ಸೇರಿದಂತೆ ನಗರದ ಬಹುತೇಕ ಕಡೆ ಧಾರಾಕಾರ ಮಳೆಯಾಯಿತು. ನಗರದ ಕೆಆರ್ ವೃತ್ತ ಚಾಮರಾಜ ವೃತ್ತ, ಸಯ್ಯಾಜಿ ರಾವ್ ರಸ್ತೆ ಸೇರಿದಂತೆ ನಗರದ ಹೃದಯ ಭಾಗದ ರಸ್ತೆಗಳು ಹಾಗೂ ವಿವಿಧ ಬಡಾವಣೆಗಳ ರಸ್ತೆಗಳ ತಗ್ಗು ಪ್ರದೇಶ ಮಳೆ ನೀರಿನಿಂದ ಜಲಾವೃತಗೊಂಡಿದ್ದವು. ಗಾಳಿ ಪರಿಣಾಮ ಕೆಲವೆಡೆ ಮರದ ಕೊಂಬೆಗಳು ಮುರಿದು ಬಿದ್ದಿದ್ದವು. ಮೇಟಗಳ್ಳಿಯಲ್ಲಿ ಭಾರೀ ಗಾತ್ರದ ಕೊಂಬೆಗಳು ಮುರಿದು ಬಿದ್ದಿದ್ದವು. ಪಾಲಿಕೆ ಅಭಯ ತಂಡ, ಅವುಗಳನ್ನು ತೆರವುಗೊಳಿಸಿತು.

ಮಧ್ಯಪ್ರದೇಶ, ಗುಜರಾತ್‌ನಲ್ಲಿ ಅವಿರೋಧವಾಗಿ ಗೆದ್ದ ಬಿಜೆಪಿ; ರಾಜಸ್ಥಾನದಲ್ಲಿ 1 ಸ್ಥಾನ ಕಾಂಗ್ರೆಸ್ ಪಾಲು

ಭೋಪಾಲ್, ಜೂ.11– ಮಧ್ಯಪ್ರದೇಶದಲ್ಲಿ ಮೂರು ಹಾಗೂ ಗುಜರಾತ್‌ನಲ್ಲಿ 4 ರಾಜ್ಯಸಭಾ ಸ್ಥಾನಗಳನ್ನ ಅವಿರೋಧವಾಗಿ ಬಿಜೆಪಿ ಗೆದ್ದುಕೊಂಡಿದೆ. ಮಧ್ಯಪ್ರದೇಶದಲ್ಲಿ ಕಾಂಗ್ರೆಸ್ ಅಭ್ಯರ್ಥಿ ಮೀನಾಕ್ಷಿ ನಟರಾಜನ್ ಅವರ ನಾಮಪತ್ರ ತಿರಸ್ಕೃತವಾದ ಹಿನ್ನೆಲೆ ಬಿಜೆಪಿ ಅಭ್ಯರ್ಥಿಗಳಾದ ರಜ್ನೀಶ್ ಅಗ್ರವಾಲ್, ತರುಣ್ ಚುಘ್ ಮತ್ತು ಮಹೇಶ್ ಕೇವತ್ ಅವಿರೋಧವಾಗಿ ಆಯ್ಕೆಯಾಗಿದ್ದಾರೆ.

ಮೂವರೂ ಮಧ್ಯಪ್ರದೇಶ ವಿಧಾನಸಭಾ ಸಮುಚ್ಚಯದಲ್ಲಿ ಚುನಾವಣಾ ಅಧಿಕಾರಿಯಿಂದ ಆಯ್ಕೆ ಪ್ರಮಾಣಪತ್ರ ಪಡೆದಿದ್ದಾರೆ. ಜೂನ್ 18 ರಂದು ಮತದಾನ ನಡೆಯಬೇಕಿತ್ತು. ಆದರೆ ಪ್ರತಿಸ್ಪರ್ಧಿಗಳಿಲ್ಲದ ಹಿನ್ನಲೆ ಅವಿರೋಧ ಆಯ್ಕೆ ಮಾಡಲಾಯಿತು.

ರಿಟರ್ನಿಂಗ್ ಅಧಿಕಾರಿ ಅರವಿಂದ್ ಶರ್ಮಾ ಅವರು ಮೀನಾಕ್ಷಿ ನಟರಾಜನ್ ಅವರ ನಾಮಪತ್ರ ತಿರಸ್ಕರಿಸಿದ್ದಾರೆ. ತೆಲಂಗಾಣದಲ್ಲಿ ಲಭ್ಯವಿರುವ ಒಂದು ಪ್ರಕರಣದ ವಿವರಗಳನ್ನು ನಾಮಪತ್ರದಲ್ಲಿ ಬಹಿರಂಗಪಡಿಸದ ಕಾರಣ, ಅವರ ನಾಮಪತ್ರವನ್ನು ಅಮಾನ್ಯಗೊಳಿಸಲಾಗಿದೆ ಎಂದು ತಿಳಿಸಿದ್ದಾರೆ.

ಈ ನಡೆಯನ್ನ ಖಂಡಿಸಿ ಕಾಂಗ್ರೆಸ್ ಚುನಾವಣಾ ಆಯೋಗಕ್ಕೆ ದೂರು ನೀಡಿದ ಬಳಿಕ ಖುದ್ದು ಅಭ್ಯರ್ಥಿ ಮೀನಾಕ್ಷಿ ನಟರಾಜನ್ ಸುಪ್ರೀಂಕೋರ್ಟ್‌ಗೆ ಅರ್ಜಿ ಸಲ್ಲಿಸಿದ್ದಾರೆ. ಇಂದು ಮೀನಾಕ್ಷಿ ಪರ ನಟರಾಜನ್ ವಾದಮಂಡಿಸಿದ ಅಭಿಷೇಕ್ ಮನು ಸಿಂಘ್ವಿ ರಿಟರ್ನಿಂಗ್ ಅಧಿಕಾರಿ ತಪ್ಪಾಗಿ ನಾಮಪತ್ರ ತಿರಸ್ಕರಿಸಿದ್ದಾರೆ ಎಂದು ವಾದಿಸಿದರು. ಪ್ರಕರಣದ ವಿಚಾರಣೆಯನ್ನ ನಾಳೆಗೆ ಮುಂದೂಡಲಾಗಿದೆ.

ಗುಜರಾತ್‌ನ ನಾಲ್ವರು ಅಭ್ಯರ್ಥಿಗಳಿಗೂ ಜಯ: ಗುಜರಾತ್‌ನಲ್ಲಿ ನಾಲ್ಕು ರಾಜ್ಯಸಭಾ ಸ್ಥಾನಗಳಿಗೆ ನಡೆದ ಚುನಾವಣೆಯಲ್ಲಿ, ಎಲ್ಲಾ ನಾಲ್ವರು ಬಿಜೆಪಿ ಅಭ್ಯರ್ಥಿಗಳು ಅವಿರೋಧವಾಗಿ ಆಯ್ಕೆಯಾಗಿದ್ದಾರೆ. ರಾಜು ಶುಕ್ಲಾ, ಮಾನ್ಸಿಂಗ್ ಪರ್ಮಾರ್, ಮುಖೇಶ್ ರಥ್ವಾ ಮತ್ತು ಜಿತೇಂದ್ರ ಕಂಜರಿಯಾ ಗೆದ್ದ ಅಭ್ಯರ್ಥಿಗಳು.

ಇದರೊಂದಿಗೆ, ಗುಜರಾತ್ ಈಗ ರಾಜ್ಯಸಭೆಯಲ್ಲಿ 11 ಸಂಸದರನ್ನ ಹೊಂದಿದೆ, ಎಲ್ಲರೂ ಬಿಜೆಪಿಯವರು. 2029 ರಲ್ಲಿ ಮುಂದಿನ ರಾಜ್ಯಸಭಾ ಚುನಾವಣೆಯವರೆಗೆ, ಗುಜರಾತ್‌ನಿಂದ ಯಾವುದೇ ಕಾಂಗ್ರೆಸ್ ಸಂಸದರು ಇರುವುದಿಲ್ಲ ಅನ್ನೋದು ಗಮನಾರ್ಹ.

ಇನ್ನೂ ರಾಜಸ್ಥಾನದಲ್ಲಿ, ಮೂವರು ರಾಜ್ಯಸಭಾ ಅಭ್ಯರ್ಥಿಗಳು ಅವಿರೋಧವಾಗಿ ಆಯ್ಕೆಯಾಗಿದ್ದಾರೆ. ಈ ಪೈಕಿ ಬಿಜೆಪಿಯ ಸತೀಶ್ ಪುನಿಯಾ ಮತ್ತು ಅಲ್ಕಾ ಗುರ್ಜರ್ ಎರಡು ಸ್ಥಾನಗಳನ್ನ ಗೆದ್ದರೆ, ಒಂದು ಸ್ಥಾನ ಕಾಂಗ್ರೆಸ್ ಪಾಲಾಗಿದೆ, ನೀರಜ್ ಡಾಂಗಿ ಕಾಂಗ್ರೆಸ್‌ನಿಂದ ಅವಿರೋಧವಾಗಿ ಆಯ್ಕೆಯಾದ ಅಭ್ಯರ್ಥಿಯಾಗಿದ್ದಾರೆ.

ವಿಧಾನ ಮಂಡಲ ಅಧೀನ ಶಾಸನ ರಚನಾ ಸಮಿತಿ ಕೆ.ಆರ್.ಆಸ್ಪತ್ರೆಗೆ ಭೇಟಿ; ಮೂಲ ಸೌಕರ್ಯ ಕಲ್ಪಿಸಲು ಸಲಹೆ



ಕರ್ನಾಟಕ ವಿಧಾನ ಮಂಡಲ ಅಧೀನ ಶಾಸನ ರಚನಾ ಸಮಿತಿಯು ಗುರುವಾರ ನಗರದ ಕೆ.ಆರ್.ಆಸ್ಪತ್ರೆಗೆ ಭೇಟಿ ನೀಡಿ ಪರಿಶೀಲನೆ ನಡೆಸಿತು.

ಮೈಸೂರು, ಜೂ.11– ಕರ್ನಾಟಕ ವಿಧಾನ ಮಂಡಲ ಅಧೀನ ಶಾಸನ ರಚನಾ ಸಮಿತಿಯು ಗುರುವಾರ ನಗರದ ಕೆ.ಆರ್. ಆಸ್ಪತ್ರೆಗೆ ಭೇಟಿ ನೀಡಿ ಪರಿಶೀಲನೆ ನಡೆಸಿತು.

ಆಸ್ಪತ್ರೆಯ ತುರ್ತುಚಿಕಿತ್ಸಾ ವಿಭಾಗ, ಹೊರರೋಗಿಗಳ ದಾಖಲಾತಿ ಕೊಠಡಿ, ಔಷಧಿಗಳ ದಾಸ್ತಾನು ಕೊಠಡಿ, ಅಡುಗೆ ಮನೆ, ಶಸ್ತ್ರಚಿಕಿತ್ಸಾ ವಿಭಾಗ, ಮಾನಸಿಕ ವಿಭಾಗಕ್ಕೆ ಭೇಟಿ ನೀಡಿ ಪರಿಶೀಲನೆ ನಡೆಸಿ, ಆಸ್ಪತ್ರೆಯಲ್ಲಿ ಸ್ವಚ್ಛತೆ ಕಾಪಾಡಬೇಕು ಹಾಗೂ ಕೆಲವು ವಿಭಾಗದಲ್ಲಿರುವ ಅವ್ಯವಸ್ಥೆ ಸರಿಪಡಿಸಬೇಕು ಎಂದು ಸೂಚನೆ ನೀಡಿತು.

ಈ ವೇಳೆ ಸಮಿತಿಯ ಅಧ್ಯಕ್ಷ ಶ್ರೀನಿವಾಸ್ ಮಾತನಾಡಿ, ಆಸ್ಪತ್ರೆಗೆ ಅಗತ್ಯವಿರುವ ಮೂಲ ಸೌಕರ್ಯ ಪಟ್ಟಿ ನೀಡಿದರೆ, ಅನುದಾನ ನೀಡುವಂತೆ ಸರ್ಕಾರಕ್ಕೆ ಶಿಫಾರಸ್ಸು ಮಾಡಲಾಗುವುದು. ಆಸ್ಪತ್ರೆಯ ನೋಂದಣಿ ಶುಲ್ಕ ಹೆಚ್ಚಿಸಿದರೆ ಅವಶ್ಯಕವಿರುವ ಸೌಲಭ್ಯಕ್ಕೆ ಬಳಸಿಕೊಳ್ಳಬಹುದು. ಆಸ್ಪತ್ರೆ ಆವರಣದಲ್ಲಿನ ರಸ್ತೆಗಳನ್ನು ದುರಸ್ತಿಪಡಿಸಬೇಕು ಎಂದರು.

ಸಮಿತಿಯ ಸದಸ್ಯರು ಹಾಗೂ ವಿಧಾನ ಪರಿಷತ್ ಸದಸ್ಯ ಕೆ.ಶಿವಕುಮಾರ್ ಮಾತನಾಡಿ, ಗ್ರಾಮೀಣ ಭಾಗದಿಂದ ಹೆಚ್ಚಿನ ಜನ ಚಿಕಿತ್ಸೆಗೆ ಬರುತ್ತಾರೆ. ಇಂತಹ ಬಡವರಿಗೆ ಸ್ಕ್ಯಾನಿಂಗ್ ಹಾಗೂ ಔಷಧಿಗೆ ಹೊರಗಡೆಗೆ ಬರೆಯಲಾಗುತ್ತಿದ್ದು, ಇದರಿಂದ ಅವರು ಆರ್ಥಿಕ ಸಂಕಷ್ಟಕ್ಕೆ ಸಿಲುಕುತ್ತಿದ್ದಾರೆ. ಆಸ್ಪತ್ರೆಯಲ್ಲಿ ಎಲ್ಲಾ ಸೌಲಭ್ಯಗಳನ್ನು ರೋಗಿಗಳಿಗೆ ಕಲ್ಪಿಸಬೇಕು ಎಂದು ತಾಕೀತು ಮಾಡಿದರು.

ರೋಗಿಗಳು ತಪಾಸಣೆಗಾಗಿ ಪರದಾಡಬಾರದು. ಅವರಿಗೆ ಸಮರ್ಪಕವಾಗಿ ಮಾಹಿತಿ ಒದಗಿಸಬೇಕು. ವೈದ್ಯರು ರೋಗಿಗಳನ್ನು ಮಾನವೀಯ ದೃಷ್ಟಿಯಿಂದ ಕಾಣಬೇಕು. ಆಸ್ಪತ್ರೆಗೆ ಅಗತ್ಯವಿರುವ ಒಂದು ಅತ್ಯಾಧುನಿಕ ಆಂಬುಲೆನ್ಸ್ ಅನ್ನು ನನ್ನ ಅನುದಾನದಲ್ಲಿ ಒದಗಿಸಿಕೊಡಲಾಗುವುದು ಎಂದು ಘೋಷಿಸಿದರು. ಈ ವೇಳೆ ವಿಧಾನ ಪರಿಷತ್ ಸದಸ್ಯರಾದ ಶರವಣ, ಎಂಎಂಸಿ & ಆರ್‌ಐ ಡೀನ್ ಡಾ.ದಾಕ್ಷಾಯಿಣಿ, ಕೆ.ಅರ್.ಆಸ್ಪತ್ರೆಯ ವೈದ್ಯಕೀಯ ಅಧೀಕ್ಷಕಿ ಡಾ. ಎಚ್.ಪಿ.ಶೋಭಾ ಸೇರಿದಂತೆ ಹಲವರು ಉಪಸ್ಥಿತರಿದ್ದರು.

ರಂಗ ತರಬೇತಿ ಶಿಬಿರದ ಸಮಾರೋಪ ಸಮಾರಂಭ



ಮೈಸೂರಿನ ಕಲಾಮಂದಿರ ಆವರಣದ ಕಿರು ರಂಗಮಂದಿರದಲ್ಲಿ ರಂಗ ತರಬೇತಿ ಶಿಬಿರದ ಸಮಾರೋಪ ಸಮಾರಂಭ ನೆರವೇರಿತು.

ಮೈಸೂರು, ಜೂ.11– ಸಾತ್ವಿಕಿ ಫೌಂಡೇಶನ್, ಮೈಸೂರು ವತಿಯಿಂದ ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ, ಬೆಂಗಳೂರು ಸಹಯೋಗದಲ್ಲಿ ಆಯೋಜಿಸಲಾಗಿದ್ದ ಉಚಿತ 40 ದಿನಗಳ ರಂಗ ತರಬೇತಿ ಶಿಬಿರದ ಸಮಾರೋಪ ಸಮಾರಂಭ ಮೈಸೂರಿನ ಕಲಾಮಂದಿರ ಆವರಣದ ಕಿರು ರಂಗಮಂದಿರದಲ್ಲಿ ನೆರವೇರಿತು.

ಕಾರ್ಯಕ್ರಮದಲ್ಲಿ ಸಮಾಜ ಸೇವಕರು ಹಾಗೂ ಕಲಾಪೋಷಕರಾದ ಅಹಿಂದ ಜವರಪ್ಪ, ಜಾನವಿ ಸೈಕಲ್ ಪ್ಯೂರ್ ಅಗರಬತ್ತಿ ಸಂಸ್ಥೆಯ ಸುಗಂಧ ದ್ರವ್ಯದ ಮುಖ್ಯಸ್ಥೆ ಜಾನವಿ, ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಾಯಕ ನಿರ್ದೇಶಕ ಡಾ. ಸುದರ್ಶನ್ ಎಂ.ವಿ., ಮಹಾರಾಜ ಸಂಜೆ ಕಾಲೇಜಿನ ಪ್ರಾಧ್ಯಾಪಕರಾದ ಸೌಭಾಗ್ಯವತಿ ಕೆ., ಮಾನಸ ಗಂಗೋತ್ರಿಯ ಸಮಾಜಕಾರ್ಯ ಅಧ್ಯಯನ ವಿಭಾಗದ ಪ್ರಾಧ್ಯಾಪಕರಾದ ಡಾ.ಚಂದ್ರಮೌಳಿ, ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಜಂಟಿ ನಿರ್ದೇಶಕರಾದ ಮಲ್ಲಿಕಾರ್ಜುನ ಸ್ವಾಮಿ, ನಾಟಕದ ರಚನೆಕಾರ ವೆಂಕಣ್ಣಗೌಡ, ಸಾತ್ವಿಕಿ ಫೌಂಡೇಶನ್ ಅಧ್ಯಕ್ಷೆ ಸರಸ್ವತಿ, ನಾಟಕದ ನಿರ್ದೇಶಕರಾದ ಹಾಗೂ ರಂಗಭೂಮಿ ಮತ್ತು ಚಲನಚಿತ್ರ ನಟ ಅಂಕಿತ್ ರಾಜ್ ಸೇರಿದಂತೆ ಹಲವರು ಉಪಸ್ಥಿತರಿದ್ದರು.

ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದ ಅಹಿಂದ ಜವರಪ್ಪ, ಕುವೆಂಪು ಅವರ 'ಶ್ರೀ ರಾಮಾಯಣ ದರ್ಶನಂ' ಹಾಗೂ ವಾಲ್ಮೀಕಿ ರಾಮಾಯಣದ ಅಂಶಗಳನ್ನು ಸಂಯೋಜಿಸಿ ಹೊಸ ರೀತಿಯ ನಾಟಕ ರೂಪಿಸಿರುವುದು ಶ್ಲಾಘನೀಯ. ಇಂತಹ ರಂಗಪ್ರಯೋಗಗಳು ಕನ್ನಡ ರಂಗಭೂಮಿಗೆ ಹೊಸ ಆಯಾಮ ನೀಡುತ್ತವೆ. ಮೈಸೂರಿನ ಕಲಾವಿದರು ಮತ್ತು ಕಲಾಪೋಷಕರು ಹೆಚ್ಚಿನ ಸಂಖ್ಯೆಯಲ್ಲಿ ಬಂದು ನಾಟಕ ವೀಕ್ಷಿಸಬೇಕು ಎಂದು ಕರೆ ನೀಡಿದರು.

ಜಾನವಿ ಮಾತನಾಡಿ, ಯುವಜನತೆ ರಂಗಭೂಮಿ ಹಾಗೂ ಇತರ ಕಲಾ ಚಟುವಟಿಕೆಗಳತ್ತ ಹೆಚ್ಚಿನ ಆಸಕ್ತಿ ಬೆಳೆಸಿಕೊಳ್ಳಬೇಕು. ಮೊಬೈಲ್ ವ್ಯಸನದ ಬದಲಿಗೆ ಕಲೆ ಮತ್ತು ಸಂಸ್ಕೃತಿಯಲ್ಲಿ ತೊಡಗಿಸಿಕೊಳ್ಳುವುದು ವ್ಯಕ್ತಿತ್ವ ವಿಕಸನಕ್ಕೆ ಸಹಕಾರಿ ಎಂದು ಅಭಿಪ್ರಾಯಪಟ್ಟರು.

ಸೌಭಾಗ್ಯವತಿ ಕೆ., ರಂಗಭೂಮಿಯ ಸಾಮಾಜಿಕ ಮತ್ತು ಸಾಂಸ್ಕೃತಿಕ ಮಹತ್ವವನ್ನು ವಿವರಿಸಿ, ರಂಗಭೂಮಿ ವ್ಯಕ್ತಿತ್ವ ನಿರ್ಮಾಣದ ಶಕ್ತಿಯುತ ಮಾಧ್ಯಮವಾಗಿದೆ ಎಂದರು.

ಸಮಾರೋಪ ಅಂಗವಾಗಿ ಪ್ರದರ್ಶಿಸಲಾದ 'ಕಿಷ್ಕಿಂಧ ಕಲಹ' ನಾಟಕವು ಪ್ರೇಕ್ಷಕರಿಂದ ಭರ್ಜರಿ ಮೆಚ್ಚುಗೆ ಗಳಿಸಿತು. ಕುವೆಂಪು ಅವರ ಶ್ರೀ ರಾಮಾಯಣ ದರ್ಶನಂ ಹಾಗೂ ವಾಲ್ಮೀಕಿ ರಾಮಾಯಣದ ಕಥಾ ಅಂಶಗಳನ್ನು ಆಧರಿಸಿ ರೂಪುಗೊಂಡ ಈ ನಾಟಕವು ವಿಶಿಷ್ಟ ರಂಗಪ್ರಯೋಗವಾಗಿ ಗಮನ ಸೆಳೆಯಿತು.

ತೈಲ ಹಡಗಿನ ಮೇಲೆ ಅಮೆರಿಕ ದಾಳಿ; ಮೂವರು ಭಾರತೀಯ ನಾವಿಕರ ಸಾವು.!

ಹೊಸದಿಲ್ಲಿ, ಜೂ. 11–ಒಮಾನ್ ಕರಾವಳಿಯಲ್ಲಿ ಈ ವಾರದ ಆರಂಭದಲ್ಲಿ ಅಮೆರಿಕ ಪಡೆಗಳು ಹಡಗೊಂದರ ಮೇಲೆ ನಡೆಸಿರುವ ದಾಳಿಯಲ್ಲಿ ಮೂವರು ಭಾರತೀಯ ನಾವಿಕರು ಮೃತಪಟ್ಟಿದ್ದಾರೆ ಎಂದು ನೌಕಾಯಾನ ಸಚಿವ ಸರ್ಬಾನಂದ ಸೋನೋವಾಲ್ ಗುರುವಾರ ತಿಳಿಸಿದ್ದಾರೆ.



ಈ ನಾವಿಕರು ನಾಪತ್ತೆಯಾಗಿದ್ದಾರೆ ಎಂಬುದಾಗಿ ಆರಂಭದಲ್ಲಿ ಹೇಳಲಾಗಿತ್ತು. ಭಾರತೀಯ ನಾವಿಕರ ಮರಣವನ್ನು ದುರಂತಕಾರಿ ನಷ್ಟ ಎಂಬುದಾಗಿ ಬಣ್ಣಿಸಿರುವ ಸಚಿವರು, ನಾಪತ್ತೆಯಾಗಿದ್ದ ಎಲ್ಲಾ ಮೂವರು ನಾವಿಕರ ಮೃತದೇಹಗಳನ್ನು ಪತ್ತೆಹಚ್ಚಲಾಗಿದೆ ಎಂದು ಹೇಳಿದರು.

ಪಲೌ ದೇಶದ ಧ್ವಜ ಹೊಂದಿದ್ದ ತೈಲ ಟ್ಯಾಂಕರ್ ಸೆಟಬಲೋ ಮೇಲೆ ಅಮೆರಿಕ ಸೇನೆಯು ಒಮಾನ್ ಕೊಲ್ಲಿಯಲ್ಲಿ ದಾಳಿ ನಡೆಸಿತ್ತು. ಆ ನೌಕೆಯಲ್ಲಿ 24 ಭಾರತೀಯರು ಹಾಗೂ ನಾಲ್ವರು ವಿದೇಶಿ ಪ್ರಜೆಗಳು (ಇಬ್ಬರು ಪಾಕಿಸ್ತಾನಿಗಳು, ಒಬ್ಬ ಉಕ್ರೇನಿಯನ್ ಮತ್ತು ಒಬ್ಬ ರಷ್ಯನ್) ಸೇರಿದಂತೆ ಒಟ್ಟು 28 ಸಿಬ್ಬಂದಿ ಇದ್ದರು. ಹಡಗು ಇರಾನ್‌ನಿಂದ ತೈಲ ಸಾಗಿಸುತ್ತಿದ್ದು ತನ್ನ ಸೂಚನೆಗಳನ್ನು ಪಾಲಿಸದ ಕಾರಣಕ್ಕೆ ಅದರ ಮೇಲೆ ದಾಳಿ ಮಾಡಿರುವುದಾಗಿ ಅಮೆರಿಕ ಸೇನೆ ಹೇಳಿದೆ.

ಆರಂಭದಲ್ಲಿ ಹಡಗಿನಿಂದ 21 ಭಾರತೀಯ ನಾವಿಕರನ್ನು ರಕ್ಷಿಸಲಾಗಿತ್ತು. ಆದರೆ ಡೆಕ್ ಕೆಡೆಟ್ ಆದಿತ್ಯ ಶರ್ಮಾ, ಇಂಜಿನ್ ಫಿಟ್ಟರ್ ಶಿವಾನಂದ್ ಚೌರಾಸಿಯಾ ಮತ್ತು ಮುಖ್ಯ ಇಂಜಿನಿಯರ್ ಪಟ್ನಾಲ ಸುರೇಶ್ ಎಂದು ಗುರುತಿಸಲಾದ ಮೂವರು ನಾವಿಕರು ನಾಪತ್ತೆಯಾಗಿದ್ದರು.

ಹಡಗು ಹಾರ್ಮುಝ್ ಜಲಸಂಧಿಯನ್ನು ದಾಟಲು ಪ್ರಯತ್ನಿಸುತ್ತಿದ್ದಾಗ 24 ಭಾರತೀಯರಿದ್ದ ನೌಕೆಯ ಮೇಲೆ ಅಮೆರಿಕ ನೌಕಾಪಡೆ ದಾಳಿ ನಡೆಸಿದೆ ಎಂದು ನೌಕಾಯಾನ ಸಚಿವರು ಹೇಳಿದರು.

ದಾಳಿಯನ್ನು ಖಂಡಿಸಿದ ಭಾರತ: ಕಳೆದ ಕೆಲವು ದಿನಗಳಲ್ಲಿ ಕೊಲ್ಲಿ ಪ್ರದೇಶದಲ್ಲಿ ಭಾರತೀಯ ನಾವಿಕರಿದ್ದ ತೈಲ ಟ್ಯಾಂಕರ್‌ಗಳ ಮೇಲೆ ನಡೆದಿರುವ ದಾಳಿಯನ್ನು ಭಾರತ ಗುರುವಾರ ತೀವ್ರವಾಗಿ ಖಂಡಿಸಿದೆ. ಈ ದಾಳಿಗಳು ತೀವ್ರ ಚಿಂತೆಯ ವಿಷಯ ಎಂಬುದಾಗಿ ಬಣ್ಣಿಸಿರುವ ವಿದೇಶಾಂಗ ವ್ಯವಹಾರಗಳ ಸಚಿವಾಲಯವು, ಇಂತಹ ದಾಳಿಗಳು ತಕ್ಷಣ ನಿಲ್ಲಬೇಕೆಂದು ಕರೆ ನೀಡಿದೆ.

ಕಳೆದ ಕೆಲವು ದಿನಗಳಲ್ಲಿ ಪಶ್ಚಿಮ ಏಷ್ಯಾದಲ್ಲಿ ಭಾರತೀಯ ನಾವಿಕರನ್ನೊಳಗೊಂಡ ಹಲವು ಹಡಗುಗಳ ಮೇಲೆ ದಾಳಿಗಳು ನಡೆದಿವೆ. ನಮ್ಮ ನಾವಿಕ ಸಮುದಾಯದ ಕಲ್ಯಾಣ ಮತ್ತು ಯೋಗಕ್ಷೇಮಕ್ಕೆ ನಾವು ಹೆಚ್ಚಿನ ಪ್ರಾಮುಖ್ಯತೆಯನ್ನು ನೀಡುತ್ತೇವೆ. ಈ ವಿಷಯವನ್ನು ನಾವು ಮತ್ತೊಮ್ಮೆ ಹೇಳುವ ಅಗತ್ಯವಿಲ್ಲ ಎಂದು ವಿದೇಶಾಂಗ ವ್ಯವಹಾರಗಳ ಸಚಿವಾಲಯದ ವಕ್ತಾರ ರಣಧೀರ್ ಜೈಸ್ವಾಲ್ ಗುರುವಾರ ಹೇಳಿದರು.

ಒಮಾನ್ ಕರಾವಳಿಯಲ್ಲಿ ತೈಲ ಟ್ಯಾಂಕರೊಂದರ ಮೇಲೆ ನಡೆದ ದಾಳಿಯನ್ನು ನಾವು ನಿನ್ನೆ ಖಂಡಿಸಿದ್ದೇವೆ. ಈ ದಾಳಿಯಲ್ಲಿ ದುರದೃಷ್ಟವಶಾತ್ ನಾವು ಮೂವರು ಭಾರತೀಯ ಪ್ರಜೆಗಳನ್ನು ಕಳೆದುಕೊಂಡಿದ್ದೇವೆ. ನಮ್ಮ ತೀವ್ರ ಪ್ರತಿಭಟನೆಯನ್ನು ದಾಖಲಿಸಲು ನಾವು ಇಲ್ಲಿನ ಅಮೆರಿಕ ರಾಯಭಾರ ಕಚೇರಿಯ ಪ್ರಭಾರಿಯನ್ನು ಕರೆಸಿದ್ದೇವು. ಅಮೆರಿಕ ನಮ್ಮ ಪ್ರತಿಭಟನೆಯನ್ನು ಗಂಭೀರವಾಗಿ ಪರಿಗಣಿಸುತ್ತದೆ ಎಂದು ನಾವು ನಿರೀಕ್ಷಿಸುತ್ತೇವೆ ಎಂದು ಜೈಸ್ವಾಲ್ ಹೇಳಿದರು.

ಪ್ರಸ್ತುತ ಹಾರ್ಮುಝ್ ಜಲಸಂಧಿಯಲ್ಲಿ ಭಾರತೀಯ ಧ್ವಜಗಳನ್ನು ಹೊಂದಿರುವ 13 ಹಡಗುಗಳಿದ್ದು, ಅವುಗಳಲ್ಲಿ 562 ಭಾರತೀಯ ನಾವಿಕರಿದ್ದಾರೆ ಎನ್ನಲಾಗಿದೆ.

ಭಾರತೀಯ ನಾವಿಕರಿದ್ದ 3ನೇ ಹಡಗಿನ ಮೇಲೆ ಅಮೆರಿಕ ದಾಳಿ: ಒಮಾನ್‌ನ ಶಿನಾಸ್ ಬಂದರಿನ ಸಮೀಪ ಭಾರತೀಯ ನಾವಿಕರಿದ್ದ ಇನ್ನೊಂದು ವಾಣಿಜ್ಯ ಹಡಗಿನ ಮೇಲೆ ಅಮೆರಿಕ ಸೇನೆಯು ಗುರುವಾರ ಮುಂಜಾನೆ ದಾಳಿ ನಡೆಸಿದೆ. ಗಿನಿ–ಬಿಸೌ ದೇಶದ ಧ್ವಜವನ್ನು ಹೊಂದಿರುವ ಜಲವೀರ್ ಎಂಬ ಟ್ಯಾಂಕರ್‌ನ ಮೇಲೆ ಅಮೆರಿಕ ಸೇನೆ ದಾಳಿ ನಡೆಸಿದೆ ಎನ್ನಲಾಗಿದೆ.

ಪರಿಸ್ಥಿತಿಯನ್ನು ಸೂಕ್ಷ್ಮವಾಗಿ ಗಮನಿಸುತ್ತಿರುವುದಾಗಿ ಹಾಗೂ ಹೆಚ್ಚಿನ ವಿವರಗಳನ್ನು ಪಡೆದುಕೊಳ್ಳಲು ಸ್ಥಳೀಯ ಅಧಿಕಾರಿಗಳೊಂದಿಗೆ ಸಮನ್ವಯ ಸಾಧಿಸುತ್ತಿರುವುದಾಗಿ ಒಮಾನ್‌ನಲ್ಲಿರುವ ಭಾರತೀಯ ರಾಯಭಾರ ಕಚೇರಿಯು ಸಾಮಾಜಿಕ ಮಾಧ್ಯಮ ಎಕ್ಸ್‌ನಲ್ಲಿ ಹಾಕಿದ ಸಂದೇಶದಲ್ಲಿ ತಿಳಿಸಿದೆ.

ಭಾರತೀಯ ಸಿಬ್ಬಂದಿಯನ್ನು ಹೊಂದಿರುವ ವಾಣಿಜ್ಯ ಹಡಗಿನ ಮೇಲೆ ಅಮೆರಿಕ ನಡೆಸಿರುವ ಮೂರನೇ ದಾಳಿ ಇದಾಗಿದೆ.

ಎಮ್‌ಟಿ ಜಲವೀರ್ ಹಡಗಿನಿಂದ ಸಿಬ್ಬಂದಿಯನ್ನು ತೆರವುಗೊಳಿಸಿ ಶಿನಾಸ್ ಬಂದರಿಗೆ ಸಾಗಿಸುವ ಕಾರ್ಯ ಚಾಲ್ತಿಯಲ್ಲಿದೆ. ಒಮಾನ್‌ನ ರಾಯಲ್ ನೌಕಾಪಡೆ ನೆರವಿನೊಂದಿಗೆ ಈ ಕಾರ್ಯ ನಡೆಯುತ್ತಿದೆ ಎಂದು ಇನ್ನೊಂದು ಸಂದೇಶದಲ್ಲಿ ಭಾರತೀಯ ರಾಯಭಾರ ಕಚೇರಿ ತಿಳಿಸಿದೆ.

ಇರಾನ್ ಮೇಲೆ ಅಮೆರಿಕ ರಣ ಕಹಳೆ

ವಾಷಿಂಗ್ಟನ್: ಇರಾನ್ ವಿರುದ್ಧ ಕಠಿಣ ಮಿಲಿಟರಿ ಕ್ರಮ ಮತ್ತು ಆರ್ಥಿಕ ದಿಗ್ಬಂಧನದ ಭಾರಿ ಎಚ್ಚರಿಕೆಯನ್ನು ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ನೀಡಿದ್ದಾರೆ.

ಇಂದು (ಜೂನ್ 11) ಟ್ರೂತ್ ಸೋಷಿಯಲ್ ಖಾತೆಯಲ್ಲಿ ಸರಣಿ ಸಂದೇಶಗಳನ್ನು ಪ್ರಕಟಿಸಿರುವ ಅವರು, ಇರಾನ್ ವಿರುದ್ಧ ಅಮೆರಿಕ ಸೇನೆ ಯುದ್ಧ ಸಾರುವ ಮುನ್ಸೂಚನೆಗಳನ್ನು ಹೊರಹಾಕಿದ್ದಾರೆ. ಇಂದು ರಾತ್ರಿಯೇ ಅಮೆರಿಕ ಸೇನೆಯು ಇರಾನ್ ಮೇಲೆ ಅತ್ಯಂತ ಬಲವಾದ ದಾಳಿ ನಡೆಸಲಿದೆ ಎಂದು ಟ್ರಂಪ್ ನೇರವಾಗಿಯೇ ಘೋಷಿಸಿದ್ದಾರೆ. ಇರಾನ್ ದೇಶದ ನೌಕಾಪಡೆ, ವಾಯುಪಡೆ ಮತ್ತು ಪ್ರಮುಖ ರಕ್ಷಣಾ ವ್ಯವಸ್ಥೆಗಳು ಈಗಾಗಲೇ ಧ್ವಂಸಗೊಂಡಿವೆ ಎಂದು ಪ್ರತಿಪಾದಿಸಿರುವ ಅವರು, ಮುಂದಿನ ಹಂತವಾಗಿ ಇರಾನ್ ಬೆನ್ನೆಲುಬನ್ನು ಮುರಿಯಲು ಸಜ್ಜಾಗಿದ್ದಾರೆ.

ಖಾರ್ಗ್ ದ್ವೀಪದ ಮೇಲೆ ಕಣ್ಣು : ಹಿಂದೆ ವೆನೆಜುವೆಲಾದಲ್ಲಿ ತಳೆದಿದ್ದ ಕಠಿಣ ನಿಲುವನ್ನೇ ಈಗ ಇರಾನ್ ಮೇಲೂ ಪ್ರಯೋಗಿಸಲು ಟ್ರಂಪ್ ಮುಂದಾಗಿದ್ದಾರೆ. ಇರಾನ್ ದೇಶದ ಅತ್ಯಂತ ಪ್ರಮುಖ ತೈಲ ರಫ್ತು ಕೇಂದ್ರವಾಗಿರುವ ಖಾರ್ಗ್ ದ್ವೀಪವನ್ನು ಅಮೆರಿಕವು ಮುಂದಿನ ದಿನಗಳಲ್ಲಿ ತನ್ನ ಸಂಪೂರ್ಣ ಮಿಲಿಟರಿ ನಿಯಂತ್ರಣಕ್ಕೆ ತೆಗೆದುಕೊಳ್ಳಲಿದೆ ಎಂದು ಟ್ರಂಪ್ ಬೆದರಿಕೆ ಹಾಕಿದ್ದಾರೆ. ಇರಾನ್‌ನ ಒಟ್ಟು ತೈಲ ಮತ್ತು ಗ್ಯಾಸ್ ಮಾರುಕಟ್ಟೆಯನ್ನು ಅಮೆರಿಕ ತನ್ನ ವಶಕ್ಕೆ ಪಡೆಯಲಿದೆ ಎಂದು ಅವರು ಬರೆದುಕೊಂಡಿದ್ದಾರೆ.

ಇರಾನ್ ಅನ್ನು ಯಾವುದೇ ಷರತ್ತಿಲ್ಲದೆ ಶಾಂತಿ ಒಪ್ಪಂದಕ್ಕೆ ಒಪ್ಪುವಂತೆ ಮಣಿಸಲು ಟ್ರಂಪ್ ಈ ಅತ್ಯಂತ ಕಠಿಣ ಹಾಗೂ ಆಕ್ರಮಣಕಾರಿ ನಿಲುವು ತಳೆದಿದ್ದಾರೆ ಎನ್ನಲಾಗಿದೆ. ಖಾರ್ಗ್ ದ್ವೀಪವು ಇರಾನ್ ದೇಶದ ಒಟ್ಟು 90% ರಷ್ಟು ಕಚ್ಚಾ ತೈಲ ರಫ್ತನ್ನು ನಿರ್ವಹಿಸುವ ಪ್ರಮುಖ ಕೇಂದ್ರವಾಗಿದೆ. ಒಂದು ವೇಳೆ ಅಮೆರಿಕ ಈ ದ್ವೀಪವನ್ನು ತನ್ನ ವಶಕ್ಕೆ ಪಡೆದರೆ ಇರಾನ್ ಆರ್ಥಿಕವಾಗಿ ಸಂಪೂರ್ಣವಾಗಿ ಪತನಗೊಳ್ಳಲಿದೆ.

ಟ್ರಂಪ್ ಅವರ ಈ ದಿಢೀರ್ ಹೆಜ್ಜೆಯು ಮಧ್ಯಪ್ರಾಚ್ಯದಲ್ಲಿ ಯುದ್ಧದ ಭೀತಿಯನ್ನು ಹೆಚ್ಚಿಸಿದ್ದು, ಜಾಗತಿಕವಾಗಿ ಕಚ್ಚಾ ತೈಲ ಬೆಲೆಯಲ್ಲಿ ಭಾರೀ ಏರಿಕೆಯಾಗುವ ಮತ್ತು ಷೇರು ಮಾರುಕಟ್ಟೆಗಳಲ್ಲಿ ತಲ್ಲಣ ಸೃಷ್ಟಿಯಾಗುವ ಆತಂಕವನ್ನು ಮೂಡಿಸಿದೆ.

ಅಭಿನಂದನೆ



ರಾಜ್ಯದ ನೂತನ ಉಪಮುಖ್ಯಮಂತ್ರಿ ಹಾಗೂ ಕಂದಾಯ ಸಚಿವರಾದ ಡಾ.ಜಿ.ಪರಮೇಶ್ವರ್ ಅವರನ್ನು ಕೃಷ್ಣರಾಜ ವಿಧಾನಸಭಾ ಕ್ಷೇತ್ರದ ಮಾಜಿ ಶಾಸಕ ಎಂ.ಕೆ. ಸೋಮಶೇಖರ್ ಭೇಟಿ ಮಾಡಿ ಅಭಿನಂದಿಸಿದರು.

ನೂರಾರು ಮಕ್ಕಳಿಂದ ಬಾಲ ಕಾರ್ಮಿಕ, ಭಿಕ್ಷಾಟನಾ ವಿರೋಧಿ ಅರಿವು ಜಾಥಾ



'ಬಾಲ ಕಾರ್ಮಿಕ ಹಾಗೂ ಭಿಕ್ಷಾಟನಾ ವಿರೋಧಿ ಅರಿವು ಜಾಥಾ'ಗೆ ಸಿಸಿಬಿ ಎಸಿಪಿ ಮೊಹಮ್ಮದ್ ಶರೀಫ್ ರಾವುತರ್ ಗುರುವಾರ ಚಾಲನೆ ನೀಡಿದರು.

ಮೈಸೂರು,ಜೂ.11(ಎಂಕೆ)– 'ಬಡತನಕ್ಕೆ ಮದ್ದು ಶಿಕ್ಷಣ', 'ನಮಗೆ ಶಿಕ್ಷಣ ಬೇಕೇ ಬೇಕು' ಘೋಷಣೆ ಮೊಳಗಿಸಿದ ವಿವಿಧ ಶಾಲಾ ಮಕ್ಕಳು, 'ಬಾಲ ಕಾರ್ಮಿಕರಿಗೆ ಕೆಲಸ ಬೇಡ... ಶಿಕ್ಷಣ ಬೇಕು' ಎಂಬುದರ ಕುರಿತು ಸಾರ್ವಜನಿಕರಲ್ಲಿ ಅರಿವು ಮೂಡಿಸುವ ಪ್ರಯತ್ನ ಮಾಡಿದರು.

ಮೈಸೂರಿನ ಗಾಂಧಿನಗರದ ಉರ್ದು ಶಾಲೆ(ಗಾಂಧಿನಗರ ಪಾರ್ಕ್ ಸಮೀಪ) ಎದುರು ನಾಲ್ಕೈದು ಉರ್ದು ಶಾಲೆ ಹಾಗೂ ಆದಿಜಾಂಬವ ಸರ್ಕಾರಿ ಶಾಲೆ ಸಹಯೋಗದೊಂದಿಗೆ ಡಾನ್ ಬಾಸ್ಕೋ ಮಕ್ಕಳಾಲಯದ ವತಿಯಿಂದ ಹಮ್ಮಿಕೊಂಡಿದ್ದ 'ಬಾಲ ಕಾರ್ಮಿಕ ಹಾಗೂ ಭಿಕ್ಷಾಟನಾ ವಿರೋಧಿ ಅರಿವು ಜಾಥಾ'ದಲ್ಲಿ ಮಕ್ಕಳನ್ನು ಶಾಲೆಗೆ ಕಳುಹಿಸಿ, ಕಡ್ಡಾಯ ಶಿಕ್ಷಣ ಕೊಡಿಸುವಂತೆ ಕೋರಿದರು.

ಉರ್ದು ಶಾಲೆ ಆವರಣದಿಂದ ಆರಂಭವಾದ ಅರಿವು ಜಾಥಾ, ಗಾಂಧಿನಗರ ಮತ್ತು ಉದಯಗಿರಿಯ ಪ್ರಮುಖ ರಸ್ತೆಗಳಲ್ಲಿ ಸಾಗಿ ಬಾಲ ಕಾರ್ಮಿಕ ಮತ್ತು ಭಿಕ್ಷಾಟನೆ ಮಾಡದಂತೆ ಅರಿವು ಮೂಡಿಸಲಾಯಿತು. ಜಾಥಾದಲ್ಲಿ ನೂರಾರು ಮಕ್ಕಳು ಭಾಗವಹಿಸಿದ್ದು, ಜಾಥಾದುದಕ್ಕೂ ಕಡ್ಡಾಯ ಶಿಕ್ಷಣ ಕುರಿತ ಘೋಷಣೆಗಳನ್ನು ಕೂಗಿ ಸಾರ್ವಜನಿಕರ ಗಮನ ಸೆಳೆದರು.

ಇದಕ್ಕೂ ಮುನ್ನ ಅರಿವು ಜಾಥಾಗೆ ಚಾಲನೆ ನೀಡಿದ ಸಿಸಿಬಿ ಎಸಿಪಿ ಮೊಹಮ್ಮದ್ ಶರೀಫ್ ರಾವುತರ್ ಮಾತನಾಡಿ, ವಿದ್ಯಾರ್ಥಿಗಳು ತಮಗೆ ಸರ್ಕಾರ ಹಾಗೂ ಇನ್ನಿತರೆ ಸಮಾಜಮುಖಿ ಸಂಘ–ಸಂಸ್ಥೆಗಳಿಂದ ದೊರೆತಿರುವ ಅವಕಾಶಗಳನ್ನು ಸದುಪಯೋಗಪಡಿಸಿಕೊಳ್ಳಬೇಕು. ಪೋಷಕರು ತಮ್ಮ ಮಕ್ಕಳನ್ನು ಕೆಲಸಕ್ಕೆ ಕಳುಹಿಸುವ ಬದಲು ಶಾಲೆಗೆ ಕಳುಹಿಸಿದರೆ ಉನ್ನತ ವ್ಯಕ್ತಿಗಳಾಗಿ ಬೆಳೆಯುತ್ತಾರೆ ಎಂದು ತಿಳಿಸಿದರು.

ಮಕ್ಕಳ ಕಲ್ಯಾಣ ಸಮಿತಿ ಅಧ್ಯಕ್ಷ ಎಂ.ರವಿಚಂದ್ರ ಮಾತನಾಡಿ, ಮಕ್ಕಳು ಕೆಲಸದ ಸ್ಥಳಗಳಲ್ಲಿ ಅಲ್ಲ, ತರಗತಿ ಕೊಠಡಿಗಳಲ್ಲಿರಬೇಕು. ಮಕ್ಕಳ ಹಕ್ಕುಗಳ ಕುರಿತು ಮಾಹಿತಿ ನೀಡಿ, ಬಾಲಕಾರ್ಮಿಕ ಪ್ರಕರಣಗಳು ಕಂಡುಬಂದಲ್ಲಿ ಮಕ್ಕಳ ಸಹಾಯವಾಣಿ 1098 ಗೆ ಮಾಹಿತಿ ನೀಡುವಂತೆ ಮನವಿ ಮಾಡಿದರು.

ದೇಶದಲ್ಲಿರುವ 140 ಕೋಟಿಗೂ ಹೆಚ್ಚಿನ ಜನಸಂಖ್ಯೆ ಇದ್ದು, ಅದರಲ್ಲಿ 27 ಕೋಟಿಗೂ ಹೆಚ್ಚು ಮಕ್ಕಳು ವಿವಿಧ ವಲಯಗಳಲ್ಲಿ ಬಾಲ ಕಾರ್ಮಿಕರಾಗಿ ದುಡಿಯುತ್ತಿದ್ದಾರೆ. ಆದರೆ, ಮಕ್ಕಳ ಕೆಲಸ ಶಾಲೆಗೆ ಹೋಗಿ ಶಿಕ್ಷಣ ಪಡೆಯುವುದೇ ಹೊರತು ಕೆಲಸ ಮಾಡುವುದಲ್ಲ. 18 ವರ್ಷದೊಳಗಿನ ಮಕ್ಕಳು ನಿಮ್ಮ ಕಣ್ಣ ಮುಂದೆ ಕೆಲಸ ಮಾಡುತ್ತಿದ್ದರೆ ಕೂಡಲೇ ಸಹಾಯವಾಣಿಗೆ ಕರೆ ಮಾಡಿ. ದೇಶದ ಅಭಿವೃದ್ಧಿಗೆ ಮಕ್ಕಳ ಶಿಕ್ಷಣ ಪಡೆಯುವುದು ಅತ್ಯವಶ್ಯವಾಗಿದೆ ಎಂದು ತಿಳಿಸಿದರು.

ಸನ್ಮಾನ: ಕೆಲಸ ಬಿಟ್ಟು ಶಾಲೆಗೆ ಮರಳಿ ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ಅತ್ಯುನ್ನತ ಶ್ರೇಣಿಯಲ್ಲಿ ತೇರ್ಗಡೆಯಾದ ಐವರು ಮಕ್ಕಳನ್ನು ಸನ್ಮಾನಿಸಲಾಯಿತು. ಶಿಕ್ಷಣ ಸಮನ್ವಯಾಧಿಕಾರಿ ಜರೀನ್ ಖುರ್ಷಿದ್, ಮಕ್ಕಳ ಸಹಾಯವಾಣಿ ಸಂಯೋಜಕ ರಘು, ಡಾನ್ ಬಾಸ್ಕೋ ಮಕ್ಕಳಾಲಯದ ಕಲಾಪರಂಬಿಲ್ ದೇವಸ್ಸಿ, ಮೈಸೂರು ಪಾಲಿಕೆ ನವೀದ್ ಪಾಷ, ಮಡಿಲು ಶಿಕ್ಷಣ ಸಂಸ್ಥೆಯ ಶ್ರೀನಿವಾಸ್, ಮೊಹಮ್ಮದ್ ಸಲ್ಮಾನ್, ಮೊಹಮ್ಮದ್ ಆಲಿ, ಮನ್‌ಸೂರ್ ಜಾನ್, ಶಹೀನ್ ತಾಜ್, ಇಲಿಯಾಜ್, ಇಮ್ಯಾನುಯಲ್ ಮತ್ತಿತರರಿದ್ದರು.

ನಾನಾ ಅಭಿವೃದ್ಧಿ ಕಾಮಗಾರಿಗಳಿಗೆ ಶಾಸಕ ಟಿ.ಎಸ್.ಶ್ರೀವತ್ಸ ಗುದ್ದಲಿಪೂಜೆ...



ಕೆ.ಆರ್.ಕ್ಷೇತ್ರದ ವ್ಯಾಪ್ತಿಯಲ್ಲಿ 90 ಲಕ್ಷ ರೂ. ವೆಚ್ಚದಲ್ಲಿ ಬಾಕ್ಸ್ ಡ್ರೈನ್, ರಸ್ತೆ ಅಭಿವೃದ್ಧಿ ಕಾಮಗಾರಿಗೆ ಶಾಸಕ ಟಿ.ಎಸ್.ಶ್ರೀವತ್ಸ ಗುದ್ದಲಿಪೂಜೆ ನೆರವೇರಿಸಿದರು. ಈ ವೇಳೆ ಕ್ಷೇತ್ರದ ಬಿಜೆಪಿ ಅಧ್ಯಕ್ಷ ಗೋಪಾಲ್‌ರಾಜೇ ಅರಸ್, ನಗರಪಾಲಿಕೆ ಮಾಜಿ ಸದಸ್ಯರಾದ ಚಂಪಕ, ಜಗದೀಶ್, ಗೀತಾ ಯೋಗಾನಂದ್, ಮುಖಂಡರಾದ ಪ್ರಸನ್ನ, ನವೀನ್, ಹೊಯ್ಸಳ, ಹರ್ಷ, ಪ್ರದೀಪ್‌ಕುಮಾರ್, ರಾಜೇಶ್, ಹರೀಶ್, ಅಂಕಿತ್, ಮಂಜುನಾಥ್, ರವಿ, ಸತೀಶ, ಗಿರೀಶ್, ಮನೋಜ್, ಗಿರೀಶ್‌ಗೌಡ, ಇಇ ಶ್ರೀನಿವಾಸಮೂರ್ತಿ, ಎಇಇ ಧನುಷ್, ಇಂಜಿನಿಯರ್‌ಗಳಾದ ಪ್ರಶಾಂತ್, ಪ್ರಸನ್ನ, ಸೌಮ್ಯ ದೀಪಕ್ ಉಪಸ್ಥಿತರಿದ್ದರು.

ಮೈಸೂರು–ಬೆಂಗಳೂರು ನಡುವೆ ಆರ್‌ಆರ್‌ಟಿಎಸ್ ಜಾರಿಗೆ ಕೇಂದ್ರ ನಗರಾಭಿವೃದ್ಧಿ ಸಚಿವ ಖಟ್ಟರ್‌ಗೆ ಸಿಎಂ ಡಿಕೆಶಿ ಮನವಿ ಸಲ್ಲಿಕೆ

ನವದೆಹಲಿ, ಜೂ.11(ಬಿಎಲ್‌ಯು)– ಸಾಂಸ್ಕೃತಿಕ ನಗರಿ ಮೈಸೂರು ಹಾಗೂ ರಾಜಧಾನಿ ಬೆಂಗಳೂರು ನಡುವೆ ಆರ್ ಆರ್ ಟಿಎಸ್ (ಪ್ರಾದೇಶಿಕ ಕ್ಷಿಪ್ರ ರೈಲು ಸಾರಿಗೆ ವ್ಯವಸ್ಥೆ) ಜಾರಿಗೆ ಅನುಮತಿ ನೀಡಬೇಕು ಎಂದು ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರು ಕೇಂದ್ರ ಸರ್ಕಾರಕ್ಕೆ ಖುದ್ದು ಮನವಿ ಸಲ್ಲಿಸಿದ್ದಾರೆ.

ಹೈಕಮಾಂಡ್ ಭೇಟಿ ಹಾಗೂ ನೀತಿ ಆಯೋಗದ ಸಭೆಯಲ್ಲಿ ಪಾಲ್ಗೊಳ್ಳಲು ಕಳೆದ ಎರಡು ದಿನಗಳ ಹಿಂದೆ ದೆಹಲಿಗೆ ತೆರಳಿದ್ದ ಡಿ.ಕೆ.ಶಿವಕುಮಾರ್ ಅವರು ನಿನ್ನೆ ಕೇಂದ್ರ ವಸತಿ ಮತ್ತು ನಗರಾಭಿವೃದ್ಧಿ ಸಚಿವ ಮನೋಹರ್ ಲಾಲ್ ಖಟ್ಟರ್ ಅವರನ್ನು ಭೇಟಿ ಮಾಡಿ ಮೈಸೂರು ಹಾಗೂ ಬೆಂಗಳೂರು ನಡುವೆ ಆರ್ ಆರ್ ಟಿಎಸ್ ಜಾರಿಗೆ ಅನುಮತಿಗೆ ಆಗ್ರಹಿಸಿದ್ದಾರೆ.

ಮೈಸೂರು ಮಾತ್ರವಲ್ಲದೆ ಬೆಂಗಳೂರು –ತುಮಕೂರು, ಬೆಂಗಳೂರು– ಚಿಕ್ಕಬಳ್ಳಾಪುರ ಹಾಗೂ ಬೆಂಗಳೂರು–ಕೋಲಾರ ನಡುವೆ ಆರ್‌ಆರ್‌ಟಿಎಸ್ ಜಾರಿಗೆ ಡಿ.ಕೆ. ಶಿವಕುಮಾರ್ ಒತ್ತಾಯಿಸಿದ್ದಾರೆ.




ನವದೆಹಲಿಯಲ್ಲಿ ಬುಧವಾರ ಕೇಂದ್ರ ನಗರಾಭಿವೃದ್ಧಿ ಸಚಿವ ಮನೋಹರ್ ಲಾಲ್ ಖಟ್ಟರ್ ಅವರನ್ನು ಭೇಟಿ ಮಾಡಿದ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರು ಮೈಸೂರು ಹಾಗೂ ಬೆಂಗಳೂರು ನಡುವೆ ಆರ್‌ಆರ್‌ಟಿಎಸ್ ಜಾರಿಗೆ ಮನವಿ ಸಲ್ಲಿಸಿದರು. ಕರ್ನಾಟಕದ ದೆಹಲಿಯ ವಿಶೇಷ ಪ್ರತಿನಿಧಿ ಟಿ.ಬಿ.ಜಯಚಂದ್ರ ಚಿತ್ರದಲ್ಲಿದ್ದಾರೆ.

ಮೈಸೂರಿನ ಬೆಳವಣಿಗೆಯನ್ನು ಗಂಭೀರವಾಗಿ ಪರಿಗಣಿಸಿ ಒಂದು ವೇಳೆ ಕೇಂದ್ರ ಸರ್ಕಾರ ಮೈಸೂರು–ಬೆಂಗಳೂರು ನಡುವೆ ಆರ್‌ಆರ್‌ಟಿಎಸ್‌ಗೆ ಅನುಮತಿ ನೀಡಿದರೆ ಎರಡು ನಗರಗಳ ನಡುವಿನ ರೈಲು ಮಾರ್ಗವನ್ನು ಮೇಲ್ದರ್ಜೆಗೇರಿಸಬೇಕಾಗುತ್ತದೆ.

ಪ್ರಸ್ತುತ ರಾಷ್ಟ್ರ ರಾಜಧಾನಿ ದೆಹಲಿ ಹಾಗೂ ಮೀರತ್ ನಡುವೆ ಆರ್ ಆರ್ ಟಿಎಸ್ ಮಾರ್ಗವಿದೆ. ಗಂಟೆಗೆ 180 ಕಿಲೋ ಮೀಟರ್ ವೇಗದಲ್ಲಿ ರೈಲು ಸಂಚರಿಸುವಂತೆ ಹಳಿಯನ್ನು ಅಲ್ಲಿ ವಿನ್ಯಾಸಗೊಳಿಸಲಾಗಿದೆ. ಅದರಂತೆ ಮೈಸೂರು ಹಾಗೂ ಬೆಂಗಳೂರು ನಡುವೆ ಆರ್‌ಆರ್‌ಟಿಎಸ್ ವ್ಯವಸ್ಥೆ ಜಾರಿಗೆ ಕೇಂದ್ರ ಸರ್ಕಾರ ಅನುಮತಿ ನೀಡಿದರೆ ಎರಡು ನಗರಗಳ ನಡುವಿನ ರೈಲ್ವೆ ಹಳಿಯ ಮಾರ್ಗದ ಸಾಮರ್ಥ್ಯವನ್ನು ಮತ್ತಷ್ಟು ಹೆಚ್ಚಿಸಿ ಮೇಲ್ದರ್ಜೆ ಗೇರಿಸಬೇಕಾಗುತ್ತದೆ. ಅಷ್ಟೇ ಅಲ್ಲದೆ ಕೆಲವು ಸ್ಥಳಗಳಲ್ಲಿ ದೊಡ್ಡ ತಿರುವುಗಳಿದ್ದು, ಇದನ್ನು ನೇರ ಮಾಡಬೇಕಾಗುತ್ತದೆ. ಈ ಮೂಲಕ ರೈಲ್ವೆ ಹಳಿಯನ್ನು ಮೇಲ್ದರ್ಜೆಗೇರಿಸಿದರೆ ಮಾತ್ರ ಆರ್‌ಆರ್‌ಟಿಎಸ್ ವ್ಯವಸ್ಥೆ ಜಾರಿ ಮಾಡಲು ಸಾಧ್ಯವಾಗುತ್ತದೆ.

> ಪ್ರಸುತ್ತ ಮೈಸೂರು ಹಾಗೂ ಬೆಂಗಳೂರು ನಡುವೆ ರೈಲುಗಳು ಗಂಟೆಗೆ ಗರಿಷ್ಠ 110 ಕಿಲೋ ಮೀಟರ್ ವೇಗದಲ್ಲಿ ಸಂಚರಿಸುವಂತೆ ವಿನ್ಯಾಸಗೊಳಿಸಲಾಗಿದೆ. ಒಂದು ವೇಳೆ ಆರ್ ಆರ್ ಟಿಎಸ್ ವ್ಯವಸ್ಥೆ ಜಾರಿಗೊಳಿಸಿದರೆ ಈಗಿರುವ ರೈಲ್ವೆ ಮಾರ್ಗದ ಹಳಿಯ ಸಾಮರ್ಥ್ಯ ಹೆಚ್ಚಿಸಿ 180 ಕಿಲೋ ಮೀಟರ್ ವೇಗದಲ್ಲಿ ಸಂಚರಿಸು ವಂತೆ ವಿನ್ಯಾಸಗೊಳಿಸಬೇಕಾಗುತ್ತದೆ. ಈ ಮೂಲಕ ಎರಡು ನಗರಗಳ ನಡುವಿನ ರೈಲ್ವೆ ಮಾರ್ಗದ ಹಳಿಯನ್ನು ಮೇಲ್ದರ್ಜೆಗೇರಿಸುವುದು ಅತ್ಯವಶ್ಯವಾಗುತ್ತದೆ.
> –ಗಿರೀಶ್ ಧರ್ಮರಾಜ ಕಲಗೊಂಡ, ವಿಭಾಗೀಯ ರೈಲ್ವೆ ವಾಣಿಜ್ಯ ವ್ಯವಸ್ಥಾಪಕ, ಮೈಸೂರು.

ಲಕ್ಷ ತುಳಸಿ ಅರ್ಚನೆ...



ಅಧಿಕ ಮಾಸದ ಏಕಾದಶಿ ನಿಮಿತ್ತ ಗುರುವಾರ ಅಗ್ರಹಾರದ ಉತ್ತರಾದಿ ಮಠದ ಶ್ರೀ ಧನ್ವಂತರಿ ಸನ್ನಿಧಾನದಲ್ಲಿ ನಡೆದ ಸಂಸ್ಥಾನ ಪೂಜೆಯಲ್ಲಿ ಉತ್ತರಾದಿ ಮಠಾಧೀಶರಾದ ಶ್ರೀ ಸತ್ಯಾತ್ಮತೀರ್ಥರು ಲಕ್ಷ ತುಳಸಿ ಅರ್ಚನೆ ಮಾಡಿ, ಧನ್ಯತೆ ಸಮರ್ಪಿಸಿದರು.

ಇಂದು ಮೈಸೂರಲ್ಲಿ ಜೀವ ವೈವಿಧ್ಯ ಸಂರಕ್ಷಣೆ, ನಿರ್ವಹಣಾ ಸಮಿತಿ ಸಭೆ

ಮೈಸೂರು: ಕರ್ನಾಟಕ ಜೀವವೈವಿಧ್ಯ ಮಂಡಳಿ ಅಧ್ಯಕ್ಷ ವಡ್ನಾಳ್ ಜಗದೀಶ್ ಅವರ ಅಧ್ಯಕ್ಷತೆಯಲ್ಲಿ ಜೂ.12ರಂದು ಬೆಳಗ್ಗೆ 10:30 ಗಂಟೆಗೆ ಮೈಸೂರು ಜಿಲ್ಲಾಧಿಕಾರಿಗಳ ಕಾರ್ಯಾಲಯದ ಸಭಾಂಗಣದಲ್ಲಿ ಜೀವವೈವಿಧ್ಯ ಸಂರಕ್ಷಣೆ ಹಾಗೂ ಜೀವವೈವಿಧ್ಯ ನಿರ್ವಹಣಾ ಸಮಿತಿ ಸಭೆಯನ್ನು ಹಮ್ಮಿಕೊಳ್ಳಲಾಗಿದೆ.

ದಕ್ಷಿಣಾ ಕೊರಿಯಾದ ದುರ್ಗಮ ಹಾದಿಯಲ್ಲಿ ಮೈಸೂರು ಆರ್‌ಬಿಐ ಅಧಿಕಾರಿ ಯಶಸ್ವಿ ಸೈಕಲ್ ಯಾನ

ಮೈಸೂರು,ಜೂ.11(ಎಂಟಿವೈ)– ಮೈಸೂರಿನ ಆರ್‌ಬಿಐನಲ್ಲಿ ಪ್ರೊಸೆಸಿಂಗ್ ಅಸಿಸ್ಟೆಂಟ್ ಆಗಿ ಸೇವೆ ಸಲ್ಲಿಸುತ್ತಿರುವ ಕೆ.ಎಸ್.ಶಿವೀಜ್ ಅವರು ದಕ್ಷಿಣಾ ಕೊರಿಯಾದ ಅತ್ಯಂತ ದುರ್ಗಮ ಮಾರ್ಗದಲ್ಲಿ 1200 ಕಿ.ಮೀ ಸೈಕ್ಲಿಂಗ್ ಮಾಡುವ ಮೂಲಕ ಪ್ರತಿಷ್ಠಿತ ಏಷ್ಯನ್ ಪ್ರಶಸ್ತಿಯನ್ನು ಮುಡಿಗೇರಿಸಿಕೊಂಡಿದ್ದಾರೆ.

ಸೈಕ್ಲಿಂಗ್ ಪಟುವಾಗಿರುವ ಕೆ.ಎಸ್. ಶಿವೀಜ್ ಅವರು ಈಗಾಗಲೇ ಹತ್ತಾರು ಸೈಕ್ಲಿಂಗ್ ಸ್ಪರ್ಧೆಯಲ್ಲಿ ಪಾಲ್ಗೊಂಡು ಹಲವು ಪ್ರಶಸ್ತಿಯನ್ನು ತನ್ನದಾಗಿಸಿಕೊಂಡಿದ್ದು, ಇದೀಗ ಜೂ.5ರಿಂದ 10ರವರೆಗೆ ನಡೆದ 90 ಗಂಟೆಗಳ ಸುದೀರ್ಘ ಅವಧಿಯಲ್ಲಿ ದುರ್ಗಮ ಹಾದಿಯಲ್ಲಿ 1200 ಕಿ.ಮಿ ದೂರ ಯಶಸ್ವಿಯಾಗಿ ಸೈಕಲ್ ಸವಾರಿ ಮಾಡಿ ಪ್ರತಿಷ್ಠಿತ ಎರಡು ಪ್ರಶಸ್ತಿಯನ್ನು ತನ್ನದಾಗಿಸಿಕೊಂಡಿದ್ದಾರೆ.

ದಕ್ಷಿಣ ಕೊರಿಯಾದ ಸಿಯೋಲ್‌ನಿಂದ ಆರಂಭವಾಗಿ ಹೇನಮ್ ನಗರ ಮತ್ತು ಸಿಯೋಲ್ ತಲುಪುವ 1200 ಕಿ.ಮೀ ಸೈಕಲ್ ಸ್ಪರ್ಧೆಯಲ್ಲಿ ಪಾಲ್ಗೊಳ್ಳಲು ವಿಶ್ವದ ವಿವಿಧೆಡೆಯಿಂದ 300 ಮಂದಿ ಸೈಕ್ಲಿಸ್ಟ್‌ಗಳು ಹೆಸರು ನೋಂದಾಯಿಸಿ, ಸ್ಪರ್ಧೆಯಲ್ಲಿ ಪಾಲ್ಗೊಂಡಿದ್ದರು. ಆದರೆ, ಕೆ.ಎಸ್. ಶಿವೀಜ್ ಸೇರಿದಂತೆ 25 ಮಂದಿ ಮಾತ್ರ ನಿಗದಿತ 90 ಗಂಟೆ ಅವಧಿಯಲ್ಲಿ 1200 ಕಿ.ಮಿ ಸೈಕಲ್ ಸವಾರಿ ಯಶಸ್ವಿಯಾಗಿ ಪೂರ್ಣಗೊಳಿಸಿದ್ದಾರೆ. ಈ 25 ಮಂದಿಗೆ ಏಷ್ಯನ್ ಅವಾರ್ಡ್ ಅಚೀವರ್ ಹಾಗೂ ಎಸ್‌ಹೆಚ್‌ಎಸ್ 1200 ಕಿ.ಮಿ ಫಿನಿಷರ್ ದಕ್ಷಿಣ ಕೊರಿಯಾ ಪ್ರಶಸ್ತಿ ನೀಡಿ ಗೌರವಿಸಲಾಗಿದೆ. ಏಷ್ಯಾದಲ್ಲಿಯೇ ಕೊರಿಯಾದ ಸಿಯೋಲ್–ಹೇನಮ್–ಸಿಯೋಲ್ ಸೈಕ್ಲಿಂಗ್ ಮಾರ್ಗ ಅತ್ಯಂತ ಸವಾಲಿನ ಮಾರ್ಗ. ಬೆಟ್ಟ–ಗುಡ್ಡ ಕಡಿದಾದ ಮಾರ್ಗ, ಸವಾಲಿನ ಭೂಪ್ರದೇಶ, ನಿದ್ರಾಹೀನತೆ, ಆಯಾಸ ಮತ್ತು ತೀವ್ರ ದೈಹಿಕ ಮತ್ತು ಮಾನಸಿಕ ಒತ್ತಡದ ನಡುವೆಯೂ ಸೈಕಲ್ ಸವಾರರು ಈ ಕಠಿಣ ಹಾದಿಯಲ್ಲಿ ಸೈಕಲ್‌ಯಾನ ಪೂರ್ಣಗೊಳಿಸಿ ಪ್ರಶಂಸೆಗೆ ಪಾತ್ರರಾಗಿದ್ದಾರೆ.

ಮೈಸೂರಿನ ಶಿವೀಜ್ ಅವರು ಈ ಹಿಂದೆ ಪ್ಯಾರಿಸ್–ಬ್ರೆಸ್ಟ್–ಪ್ಯಾರಿಸ್ 2023 ಫಿನಿಷರ್, 2024ರಲ್ಲಿ ಥೈಲ್ಯಾಂಡ್ 2000 ಕಿಮೀ ಸವಾರಿ, 2025ರಲ್ಲಿ ಲಂಬಾಸಿಂಗಿ 1200 ಕಿಮೀ ಸೈಕಲ್ ಸವಾರಿಯನ್ನು ಪೂರ್ಣಗೊಳಿಸಿ ಪ್ರಶಸ್ತಿಯನ್ನು ತನ್ನದಾಗಿಸಿಕೊಂಡಿದ್ದಾರೆ. ಶಿವೀಜ್ ಮೌಂಟ್ ಎವರೆಸ್ಟಿಂಗ್ ಫಿನಿಶರ್ ಆಗಿದ್ದು, 33 ಗಂಟೆಗಳಲ್ಲಿ 8,848 ಮೀಟರ್ ಎತ್ತರದ ಏರಿದ್ದರು. 50 ಕಿ.ಮೀ ಅಲ್ಟ್ರಾ–ರನ್ನರ್ ಆಗಿದ್ದಾರೆ. ಇಂಡಿಯಾ ಬುಕ್ ಆಫ್ ರೆಕಾರ್ಡ್ಸ್‌ನಲ್ಲಿ ಗುರುತಿಸಲ್ಪಟ್ಟಿದ್ದಾರೆ. ಅವರ ಮಗ ಅರ್ಜುನ್ ಕೆ.ಶಿವೀಜ್, ಕಿರಿಯ ಅಲ್ಟ್ರಾ–ರನ್ನರ್ ಎಂದು ಮನ್ನಣೆ ಪಡೆದಿದ್ದಾರೆ. ಅವರ ಮಗಳು ಅರ್ಚಾ ವಿವಿಧ ಸೈಕ್ಲಿಂಗ್ ಮತ್ತು ಓಟದ ಸ್ಪರ್ಧೆಗಳಲ್ಲಿ ಪದಕಗಳನ್ನು ಗಳಿಸಿದ್ದಾರೆ, ಅವರ ಪತ್ನಿ ಶನಿ ಶಿವೀಜ್ ನಿಪುಣ ಅಲ್ಟ್ರಾ–ರನ್ನರ್ ಆಗಿದ್ದಾರೆ.



ದಕ್ಷಿಣಾ ಕೊರಿಯಾದ ಅತ್ಯಂತ ಕಠಿಣ ಮಾರ್ಗದಲ್ಲಿ 1200 ಕಿ.ಮೀ ಸೈಕ್ಲಿಂಗ್ ಮಾಡುವ ಮೂಲಕ ಪ್ರತಿಷ್ಠಿತ ಏಷ್ಯನ್ ಪ್ರಶಸ್ತಿಯನ್ನು ಮುಡಿಗೇರಿಸಿಕೊಂಡಿರುವ ಮೈಸೂರಿನ ಆರ್‌ಬಿಐನಲ್ಲಿ ಪ್ರೊಸೆಸಿಂಗ್ ಅಸಿಸ್ಟೆಂಟ್ ಆಗಿ ಸೇವೆ ಸಲ್ಲಿಸುತ್ತಿರುವ ಕೆ.ಎಸ್.ಶಿವೀಜ್.

ಪ್ರಿಯಾಂಕ್ ಖರ್ಗೆಗೆ ತಾಕತ್ತಿದ್ದರೆ ಆರ್‌ಎಸ್‌ಎಸ್ ವಿರುದ್ಧ ಯುಎಪಿಎ ಅಡಿ ಪ್ರಕರಣ ದಾಖಲಿಸಲಿ

ಬಿಜೆಪಿ ರಾಜ್ಯ ವಕ್ತಾರ ಎಂ.ಜಿ.ಮಹೇಶ್ ಬಹಿರಂಗ ಸವಾಲು

ಮೈಸೂರು, ಜೂ.11(ಬಿಎಲ್‌ಯು)– ಗೃಹ ಸಚಿವ ಪ್ರಿಯಾಂಕ್ ಖರ್ಗೆ ಅವರಿಗೆ ತಾಕತ್ತಿದ್ದರೆ ಆರ್‌ಎಸ್‌ಎಸ್ ವಿರುದ್ಧ ಯುಎಪಿಎ (ಕಾನೂನು ಬಾಹಿರ ಚಟುವಟಿಕೆಗಳ ತಡೆಗಟ್ಟುವಿಕೆ ಕಾಯ್ದೆ) ಅಡಿ ಪ್ರಕರಣ ದಾಖಲಿಸಿ ರಾಷ್ಟ್ರ ವಿರೋಧಿ ಎಂದು ಸಾಬೀತುಪಡಿಸಲಿ ಎಂದು ಬಿಜೆಪಿ ರಾಜ್ಯ ವಕ್ತಾರ ಎಂ.ಜಿ.ಮಹೇಶ್ ಅವರು ಬಹಿರಂಗ ಸವಾಲು ಹಾಕಿದ್ದಾರೆ.



ಎಂ.ಜಿ.ಮಹೇಶ್

ಮೈಸೂರಿನ ಬಿಜೆಪಿ ಕಚೇರಿಯಲ್ಲಿ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಮೂರು ಬಾರಿ ಆರ್ ಎಸ್‌ಎಸ್ ಬ್ಯಾನ್ ಮಾಡಿ ತರುವಾಯ ರದ್ದು ಮಾಡಿದರು. ಸ್ವತಃ ಜವಾಹರಲಾಲ್ ನೆಹರು, ಇಂದಿರಾ ಗಾಂಧಿ ಸೇರಿ ಹಲವರು ಆರ್ ಎಸ್‌ಎಸ್ ಶಕ್ತಿ ಕುಂದಿಸಲು ಯತ್ನಿಸಿ ವಿಫಲರಾದರು. ಹೀಗಿರುವಾಗ ನಿಮ್ಮಂತಹವರು ಇನ್ನು ಹತ್ತು ಜನ್ಮವೆತ್ತಿ ಬಂದರೂ ಆರ್‌ಎಸ್‌ಎಸ್ ಮುಗಿಸಲು ಸಾಧ್ಯವಿಲ್ಲ ಎಂದು ತಿರುಗೇಟು ನೀಡಿದರು.

ಪ್ರಿಯಾಂಕ್ ಖರ್ಗೆ ಅವರ ಗೊಡ್ಡು ಬೆದರಿಕೆಗೆ ನಾವು ಬಗ್ಗುವುದಿಲ್ಲ. ಹಿಂದೂಗಳು ಸಿಡಿದೆದ್ದರೆ ಏನಾಗುತ್ತದೆ ಎಂಬುದು ಪಶ್ಚಿಮ ಬಂಗಾಳದ ಚುನಾವಣೆಯಲ್ಲಿ ಸಾಬೀತಾಗಿದೆ. ಇನ್ನು ಕರ್ನಾಟಕದ 2028ರ ಚುನಾವಣೆಯಲ್ಲಿ ನಾವು ಬುಲೆಟ್ ಹೊಡೆಯುವುದಿಲ್ಲ, ಬ್ಯಾಲೆಟ್‌ನಿಂದ ಹೊಡೆಯುತ್ತೇವೆ ಎಂದು ಮಹೇಶ್ ಎಚ್ಚರಿಸಿದರು.

ಆರ್‌ಎಸ್‌ಎಸ್ ಈ ದೇಶದ ಶ್ರೇಷ್ಠ ಮೌಲ್ಯ ಉಳಿಸಿಕೊಂಡು ಬಂದಿರುವ ಅದ್ವಿತೀಯ ಸಂಘಟನೆ. ಪ್ರತಿಯೊಬ್ಬ ವ್ಯಕ್ತಿಯನ್ನು ಗೌರವದಿಂದ ಕಾಣುತ್ತದೆ. ವಿಚಾರ ಆಧರಿತವಾಗಿ ದೇಶದ ಸಂಸ್ಕೃತಿ ಉಳಿಸಲು ಮುಂದಾಗಿರುವ ಆರ್‌ಎಸ್‌ಎಸ್‌ಗೆ ನೋಂದಣಿ ಅಗತ್ಯವಿಲ್ಲ ಎಂದು ಸ್ಪಷ್ಟಪಡಿಸಿದರು.

ಮೈಸೂರಿನ ಮಾಧವ ಕೃಪ, ಬೆಂಗಳೂರಿನ ಕೇಶವ ಕೃಪ ಸೇರಿದಂತೆ ದೇಶದ ಪ್ರತಿಯೊಂದು ಆರ್‌ಎಸ್‌ಎಸ್ ಕೇಂದ್ರಗಳ ಬಗ್ಗೆ ಆಂತರಿಕ ಆಡಿಟ್ ನಡೆಯಲಿದ್ದು, ಪ್ರತಿಯೊಂದು ವ್ಯವಹಾರವು ಪಾರದರ್ಶಕವಾಗಿರುತ್ತದೆ. ಹೀಗಿರುವಾಗ ಆರ್‌ಎಸ್‌ಎಸ್ ಬಗ್ಗೆ ಅಪನಂಬಿಕೆಯ ಮಾತುಗಳನ್ನಾಡುತ್ತಿರುವುದು ಸರಿಯಲ್ಲ. ಆರ್‌ಎಸ್‌ಎಸ್ ಬಗ್ಗೆ ಹೇಳಿಕೆ ನೀಡಿದರೆ ರಾಷ್ಟ್ರಮಟ್ಟದಲ್ಲಿ ಸುದ್ದಿಯಾಗಬಹುದು ಎಂಬ ಪ್ರಚಾರದ ಗೀಳಿನಿಂದ ಪ್ರಿಯಾಂಕ್ ಖರ್ಗೆ ಅಸಂಬದ್ಧ ಹೇಳಿಕೆ ನೀಡುತ್ತಿದ್ದಾರೆ ಎಂದು ಲೇವಡಿ ಮಾಡಿದರು.

> ಕಾಂಗ್ರೆಸ್ ಸರ್ಕಾರ ಅಧಿಕಾರಕ್ಕೆ ಬಂದ ನಂತರ ಕಾನೂನು ಸುವ್ಯವಸ್ಥೆ ಹದಗೆಟ್ಟಿದೆ. ಅಪರಾಧ ಪ್ರಕರಣಗಳು ಹೆಚ್ಚಾಗುತ್ತಿವೆ. ನ್ಯಾಷನಲ್ ಕ್ರೈಂ ಬ್ಯೂರೋ ವರದಿ ಪ್ರಕರಣ ಕಳೆದ ವರ್ಷಕ್ಕಿಂತ ಈ ಬಾರಿ ಶೇ.10ರಷ್ಟು ಕ್ರೈಂ ರೇಟ್ ಹೆಚ್ಚಾಗಿದೆ. ಮೈಸೂರು ಸೇರಿದಂತೆ ಕರ್ನಾಟಕದ ಪ್ರತಿಯೊಂದು ಜಿಲ್ಲೆಯ ಶಾಲಾ–ಕಾಲೇಜುಗಳು ಡ್ರಗ್ಸ್ ಕೇಂದ್ರವಾಗಿವೆ. ಡ್ರಗ್ಸ್ ಜಾಲ ವ್ಯಾಪಕವಾಗಿ ಆವರಿಸಿದೆ. ಇದಕ್ಕೆ ಕಡಿವಾಣ ಹಾಕಲು ಈ ಸರ್ಕಾರ ಸಂಪೂರ್ಣ ವಿಫಲವಾಗಿದೆ. –ಎಂ.ಜಿ.ಮಹೇಶ್

ಗೃಹ ಸಚಿವರಾಗಿ ಮಾಡುವ ಕೆಲಸ ಬೇಕಾದಷ್ಟಿದೆ: ಗೃಹ ಸಚಿವ ಪ್ರಿಯಾಂಕ್ ಖರ್ಗೆ ಅವರ ತವರು ಜಿಲ್ಲೆ ಕಲ್ಬುರ್ಗಿಯಲ್ಲಿ ಶೇ.15ರಷ್ಟು ಅಪರಾಧ ಪ್ರಕರಣಗಳ ಸಂಖ್ಯೆ ಹೆಚ್ಚಾಗಿದೆ. ಅವರೇ ಗೆದ್ದು ಬಂದಿರುವ ಚಿತ್ತಾಪುರ ಕ್ಷೇತ್ರದ ಪೊಲೀಸ್ ಠಾಣೆಗೆ ಸಿಬ್ಬಂದಿ ಕೊರತೆ ಇದ್ದು, ಅಧಿಕಾರಿಗಳು ಸಂಚರಿಸಲು ಒಂದು ವಾಹನವಿಲ್ಲ. ಈ ಹಿನ್ನೆಲೆಯಲ್ಲಿ ಗೃಹ ಸಚಿವರಾಗಿ ಮಾಡಬೇಕಾದ ಬಹಳಷ್ಟು ಕೆಲಸಗಳಿದ್ದು, ಅದನ್ನು ಮೊದಲು ಮಾಡಿ ಮುಗಿಸಲಿ, ತರುವಾಯ ಆರ್‌ಎಸ್‌ಎಸ್ ಬಗ್ಗೆ ಮಾತನಾಡಲಿ ಎಂದು ಮಹೇಶ್ ಸಲಹೆ ನೀಡಿದರು.

ಬಾಂಗ್ಲಾ ವಲಸಿಗರಿಗೆ ರಕ್ಷಣೆ: ಬೆಂಗಳೂರಿನಲ್ಲಿರುವ ಬಾಂಗ್ಲಾ ವಲಸಿಗರಿಗೆ ಊಟೋಪಚಾರಕ್ಕಾಗಿ ಎರಡು ಕೋಟಿ ಬಿಡುಗಡೆ ಮಾಡುವಂತೆ ಪ್ರಿಯಾಂಕ್ ಖರ್ಗೆ ಅವರು ನಿನ್ನೆ ಹಣಕಾಸು ಇಲಾಖೆಗೆ ಪತ್ರ ಬರೆದಿದ್ದಾರೆ. ಗೃಹ ಸಚಿವರೊಬ್ಬರು ದೇಶಕ್ಕೆ ಕಂಟಕರಾಗಿರುವ ಬಾಂಗ್ಲಾದೇಶಿಗರಿಗೆ ರಕ್ಷಣೆ ನೀಡುತ್ತಿರುವುದು ಇದರಿಂದ ಸ್ಪಷ್ಟವಾಗಿದೆ ಎಂದು ಆಪಾದಿಸಿದರು.

ಬಿಜೆಪಿ ನಗರ ಮಾಧ್ಯಮ ಸಂಚಾಲಕ ಮಹೇಶ್‌ರಾಜ್ ಅರಸ್, ಸಹ ಸಂಚಾಲಕರಾದ ಸಂತೋಷ್‌ಕುಮಾರ್ ಹಾಗೂ ಜಯಶೇಖರ್ ಗೋಷ್ಠಿಯಲ್ಲಿದ್ದರು.

ವಿದೇಶಗಳ ಅವಲಂಬನೆಯಿಂದ ಮುಕ್ತವಾಗಲು ದೇಶದಲ್ಲಿ ಗುಣಮಟ್ಟದ ಸಂಶೋಧನೆ ಅವಶ್ಯ

ಜೆಎಸ್‌ಎಸ್ ಉನ್ನತ ಶಿಕ್ಷಣ ಮತ್ತು ಸಂಶೋಧನಾ ಅಕಾಡೆಮಿ ಕುಲಪತಿ ಡಾ.ಹೆಚ್.ಬಸವನಗೌಡಪ್ಪ ಅಭಿಪ್ರಾಯ

ಮೈಸೂರು, ಜೂ.11(ಬಿಎಲ್‌ಯು)– ಅಭಿವೃದ್ಧಿ ಹಾದಿಯಲ್ಲಿ ಸಾಗಲು, ಭಾರತ ವಿದೇಶಗಳ ಅವಲಂಬನೆಯಿಂದ ಮುಕ್ತವಾಗಲು ಇಲ್ಲಿ ಗುಣಮಟ್ಟದ ಸಂಶೋಧನೆಗಳು ನಡೆಯಬೇಕು ಎಂದು ಜೆಎಸ್‌ಎಸ್ ಉನ್ನತ ಶಿಕ್ಷಣ ಮತ್ತು ಸಂಶೋಧನಾ ಅಕಾಡೆಮಿ ಕುಲಪತಿ ಡಾ.ಹೆಚ್.ಬಸವನಗೌಡಪ್ಪ ಅಭಿಪ್ರಾಯಪಟ್ಟರು.

ಮೈಸೂರಿನ ಬನ್ನಿಮಂಟಪದ ಜೆಎಸ್‌ಎಸ್ ಫಾರ್ಮಸಿ ಕಾಲೇಜಿನ ಸಭಾಂಗಣದಲ್ಲಿ ಇಂದು ನಡೆದ ಅಕಾಡೆಮಿಯ ಪಿಹೆಚ್‌ಡಿ ಸಂಶೋಧನಾ ವಿದ್ಯಾರ್ಥಿಗಳ ಪ್ರವೇಶೋನ್ಮುಖ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಅವರು, ಸಂಶೋಧನೆ ಪ್ರತಿಯೊಂದು ದೇಶದ ಅಭಿವೃದ್ಧಿಯ ಮೆಟ್ಟಿಲಾಗುತ್ತದೆ ಎಂದು ಹೇಳಿದರು.



ಮೈಸೂರಿನ ಬನ್ನಿಮಂಟಪದ ಜೆಎಸ್‌ಎಸ್ ಫಾರ್ಮಸಿ ಕಾಲೇಜಿನ ಸಭಾಂಗಣದಲ್ಲಿ ಬುಧವಾರ ನಡೆದ ಜೆಎಸ್‌ಎಸ್ ಉನ್ನತ ಶಿಕ್ಷಣ ಮತ್ತು ಸಂಶೋಧನಾ ಅಕಾಡೆಮಿಯ ಪಿಹೆಚ್.ಡಿ ಸಂಶೋಧನಾ ವಿದ್ಯಾರ್ಥಿಗಳ ಪ್ರವೇಶೋನ್ಮುಖ ಕಾರ್ಯಕ್ರಮವನ್ನು ಅಕಾಡೆಮಿ ಕುಲಪತಿ ಡಾ.ಹೆಚ್.ಬಸವನ ಗೌಡಪ್ಪ ಉದ್ಘಾಟಿಸಿದರು.

ಭಾರತದಲ್ಲೇ ಗುಣಮಟ್ಟದ ಸಂಶೋಧನೆಯಲ್ಲಿ ಕ್ರಾಂತಿ ಆಗಬೇಕು. ಆಗಾದಾಗ ಅಭಿವೃದ್ಧಿಯಲ್ಲಿ ವಿದೇಶಗಳ ಅವಲಂಬನೆಯಿಂದ ಮುಕ್ತವಾಗಬಹುದು. ಈ ನಿಟ್ಟಿನಲ್ಲಿ ಭಾರತದಲ್ಲೇ ಹೆಚ್ಚಿನ ಪ್ರಮಾಣದಲ್ಲಿ ಪ್ರತಿಯೊಂದು ಕ್ಷೇತ್ರದಲ್ಲೂ ಸಂಶೋಧನೆ ನಡೆಯಬೇಕು ಎಂದು ಸಲಹೆ ನೀಡಿದರು.

ಪ್ರಶಸ್ತಿ ಸೇರಿದಂತೆ ಯಾವುದೇ ರೀತಿಯ ಲಾಭಕ್ಕೆ ಹಾತೊರೆಯದೆ ಪ್ರತಿಫಲಾಪೇಕ್ಷೆ ಇಲ್ಲದೆ ಸಂಶೋಧಕರು ಸಂಶೋಧನೆ ಮಾಡಬೇಕು. ಈ ಮೂಲಕ ಸಂಶೋಧನಾ ಕ್ಷೇತ್ರದಲ್ಲಿ ಸಾಧನೆ ಮಾಡಬೇಕು. ಈಗಾಗಲೇ ಹಲವು ಸಾಧನೆ ಮಾಡಿರುವ ಖ್ಯಾತ ವಿಜ್ಞಾನಿಗಳ ಹಾದಿಯಲ್ಲಿ ಸಾಗಬೇಕು ಎಂದು ಡಾ.ಬಸವನಗೌಡಪ್ಪ ಸಂಶೋಧನಾ ವಿದ್ಯಾರ್ಥಿಗಳಿಗೆ ಕಿವಿಮಾತು ಹೇಳಿದರು. ಅಕಾಡೆಮಿಯ ಕುಲಸಚಿವ ಡಾ.ಬಿ.ಮಂಜುನಾಥ್, ವಿಜ್ಞಾನಿ ಡಾ.ನಂದಿನಿ ಶೆಟ್ಟಿ, ಶೈಕ್ಷಣಿಕ ತಜ್ಞ ಎ.ಹೆಚ್. ಸಾಗರ್ ವೇದಿಕೆಯಲ್ಲಿ ಉಪಸ್ಥಿತರಿದ್ದರು.

ಫಲಾನುಭವಿಯ ಸಾಲ, ಬಡ್ಡಿಗೆ ಗೃಹಲಕ್ಷ್ಮಿ ಹಣ ಕಡಿತ ಮಾಡಿಕೊಳ್ಳಲು ಬ್ಯಾಂಕ್‌ಗಳಿಗೆ ಅವಕಾಶ ಇಲ್ಲ

■ ಒತ್ತಾಯಪೂರ್ವಕವಾಗಿ ಗೃಹಲಕ್ಷ್ಮಿ ಹಣ ಜಮೆ ಮಾಡಿಕೊಂಡರೆ ಬ್ಯಾಂಕ್‌ಗಳ ವಿರುದ್ಧ ಕ್ರಮ ■ ಪಾಲಿಕೆ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಸಮಿತಿ ಅಧ್ಯಕ್ಷೆ ಪುಷ್ಪವಲ್ಲಿ

ಮೈಸೂರು, ಜೂ.11(ಪಿಎಂ)–ರಾಜ್ಯ ಸರ್ಕಾರದ ಗೃಹಲಕ್ಷ್ಮಿ ಯೋಜನೆಯ ಧನಸಹಾಯವನ್ನು ಬ್ಯಾಂಕ್‌ಗಳು ಯಾವುದೇ ಕಾರಣಕ್ಕೂ ಫಲಾನುಭವಿಗಳ ಸಾಲದ ಬಾಕಿಗೆ ಅಥವಾ ಬಡ್ಡಿಗೆ ಬಲವಂತವಾಗಿ ಕಡಿತಗೊಳಿಸದಂತೆ ಸೂಕ್ತ ಕ್ರಮ ಕೈಗೊಳ್ಳಬೇಕು ಎಂದು ಅಧಿಕಾರಿಗಳಿಗೆ ಮೈಸೂರು ಮಹಾನಗರಪಾಲಿಕೆ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಸಮಿತಿ ಅಧ್ಯಕ್ಷೆ ಪುಷ್ಪವಲ್ಲಿ ಸೂಚನೆ ನೀಡಿದರು.

ಮೈಸೂರು ಮಹಾನಗರ ಪಾಲಿಕೆ ಮುಖ್ಯ ಕಚೇರಿಯ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಸಮಿತಿ ಕಚೇರಿಯಲ್ಲಿ ಗ್ಯಾರಂಟಿ ಯೋಜನೆಗಳ ಸಂಬಂಧ ಸಮಿತಿ ಪದಾಧಿಕಾರಿಗಳು, ಅಧಿಕಾರಿಗಳ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದರು.

ಗೃಹಲಕ್ಷ್ಮಿ ಯೋಜನೆಯ ಹಣವನ್ನು ಬ್ಯಾಂಕ್‌ಗಳು ಫಲಾನು ಭವಿಯ ಸಾಲ ಹಾಗೂ ಬಡ್ಡಿಗೆ ಬಲವಂತವಾಗಿ ಕಡಿತಗೊಳಿಸಿಕೊಳ್ಳಲು ಬ್ಯಾಂಕ್‌ಗಳಿಗೆ ಅವಕಾಶ ಇಲ್ಲ. ಬ್ಯಾಂಕ್‌ಗಳು ಗೃಹಲಕ್ಷ್ಮಿ ಹಣ ಕಡಿತ ಮಾಡಿಕೊಳ್ಳುತ್ತಿರುವ ಬಗ್ಗೆ ಇಬ್ಬರು ಫಲಾನುಭವಿಗಳು ನಮ್ಮ ಸಮಿತಿಗೆ ದೂರು ನೀಡಿದ್ದಾರೆ. ಈ ಪೈಕಿ ಒಬ್ಬರು ಯೋಜನೆ ಹಣ ಸಂದಾಯವಾಗುವ ಬ್ಯಾಂಕ್ ಖಾತೆಯನ್ನು ಬದಲಾಯಿಸಿಕೊಂಡಿರುವುದಾಗಿ ತಿಳಿಸಿದ್ದಾರೆ. ಹೀಗೆ ಒತ್ತಾಯವಾಗಿ ಇನ್ನು ಹಲವು ಫಲಾನುಭವಿಗಳ ಹಣ ಕಡಿತ ಮಾಡಿಕೊಳ್ಳುತ್ತಿರಬಹುದು. ಅಂತಹವರು ನಮ್ಮ ಸಮಿತಿಗೆ ದೂರು ನೀಡಿದರೆ ಕ್ರಮ ವಹಿಸಲಾಗುವುದು ಎಂದರು.



ಮೈಸೂರು ಮಹಾನಗರಪಾಲಿಕೆ ಮುಖ್ಯ ಕಚೇರಿಯ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಸಮಿತಿ ಕಚೇರಿಯಲ್ಲಿ ಗ್ಯಾರಂಟಿ ಯೋಜನೆಗಳ ಸಂಬಂಧ ಸಭೆ ನಡೆಯಿತು.

ಎಷ್ಟೇ ಸಾಲ ಇದ್ದರೂ ಆ ರೀತಿ ಫಲಾನುಭವಿಗಳ ಸಮ್ಮತಿ ಇಲ್ಲದೆ ಯೋಜನೆಯ ಧನಸಾಹಯವನ್ನು ಕಡಿತ ಮಾಡಿಕೊಳ್ಳುವಂತಿಲ್ಲ. ಈ ಸಂಬಂಧ ಸರ್ಕಾರದಿಂದ ಬ್ಯಾಂಕ್‌ಗಳಿಗೆ ನಿರ್ದೇಶನ ಸಹ ಇದೆ. ಅದಾಗ್ಯೂ ಬ್ಯಾಂಕ್ ಗಳು ಸ್ಪಂದಿಸದೇ ಇದ್ದರೆ ಸೂಕ್ತ ಕ್ರಮ ಜರುಗಿಸುವ ಸಂಬಂಧ ಸರ್ಕಾರಕ್ಕೆ ಶಿಫಾರಸ್ಸು ಮಾಡಲಾಗುವುದು ಎಂದರು.

27.67 ಕೋಟಿ ಪಾವತಿ: ಮಹಿಳಾ–ಮಕ್ಕಳ ಅಭಿವೃದ್ಧಿ ಇಲಾಖೆಯ ಮೈಸೂರು ನಗರದ ಸಿಡಿಪಿಓ ಅಭಿಕುಮಾರ್ ಮಾತನಾಡಿ, ಗೃಹಲಕ್ಷ್ಮಿ ಫಲಾನುಭವಿ ಮರಣ ಹೊಂದಿದ್ದರೆ, ಈ ಸಂಬಂಧ ಮರಣ ಪ್ರಮಾಣ ಪತ್ರ, ಆಧಾರ್ ಕಾರ್ಡ್ ಸಲ್ಲಿಸಿ ರದ್ದುಪಡಿಸಿಕೊಳ್ಳುವ ಮೂಲಕ ಕುಟುಂಬದ ಮತ್ತೊಬ್ಬ ಹಿರಿಯ ಸದಸ್ಯೆ ಅರ್ಜಿ ಸಲ್ಲಿಸಿ ಫಲಾನುಭವಿಯಾಗಲು ಸರ್ಕಾರ ಅವಕಾಶ ಕಲ್ಪಿಸಿದೆ. ಮೈಸೂರು ನಗರದ ವ್ಯಾಪ್ತಿಯಲ್ಲಿ 1,38,355 ಗೃಹಲಕ್ಷ್ಮಿ ಫಲಾನುಭವಿಗಳ ಖಾತೆಗಳಿಗೆ ಡಿಬಿಟಿ ಮೂಲಕ ಒಟ್ಟಾರೆ 27.67 ಕೋಟಿ ರೂ. ಏಪ್ರಿಲ್ ತಿಂಗಳಲ್ಲಿ ಪಾವತಿಯಾಗಿದೆ ಎಂದು ಮಾಹಿತಿ ನೀಡಿದರು.

> ಗೃಹಲಕ್ಷ್ಮಿ ಯೋಜನೆ ಸಂಬಂಧ ಸಾವನ್ನಪ್ಪಿರುವ ಫಲಾ ನುಭವಿಗಳ ಖಾತೆಗೆ ಸಹಾಯಧನ ಜಮಾ ಆಗುತ್ತಿರುವ ಬಗ್ಗೆ ವರದಿಯಾಗಿದೆ. ಗೃಹಲಕ್ಷ್ಮಿ ಫಲಾನುಭವಿ ಸಾವನ್ನಪ್ಪಿದ್ದರೆ ಅವರ ಕುಟುಂಬಸ್ಥರು ಮರಣ ಪ್ರಮಾಣಪತ್ರ ಹಾಗೂ ಆಧಾರ್ ಕಾರ್ಡ್ ಸಲ್ಲಿಸಿ ಮತ್ತೊಬ್ಬ ಹಿರಿಯ ಸದಸ್ಯೆಯನ್ನು ಫಲಾನುಭವಿಯಾಗಿ ಮಾಡಿಕೊಳ್ಳಲು ಅವಕಾಶವಿದೆ. ಪಡಿತರ ವಿತರಣೆ ಸಂಬಂಧ ಡಿಪೋಗಳಲ್ಲಿ ಹಣ ಪಡೆಯುತ್ತಿರುವ ಸಂಬಂಧ ದೂರು ಬಂದಿದೆ. ಈ ಬಗ್ಗೆ ಖುದ್ದು ಪರಿಶೀಲಿಸಿ ಕ್ರಮ ಕೈಗೊಳ್ಳಲಾಗುವುದು. –ಪುಷ್ಪವಲ್ಲಿ

ಒಟ್ಟು 15.93 ಕೋಟಿ ರೂ. ಸಂದಾಯ: ಕೈಗಾರಿಕೆ ತರಬೇತಿ ಮತ್ತು ಉದ್ಯೋಗ ಇಲಾಖೆ ಎಂಪ್ಲಾಯ್‌ಮೆಂಟ್ ಅಧಿಕಾರಿ ಮೊಹಮ್ಮದ್ ಅಕ್ಬರ್ ಮಾತನಾಡಿ, ಮೈಸೂರು ತಾಲೂಕಿನಲ್ಲಿ ಒಟ್ಟು 6,707 ಅಭ್ಯರ್ಥಿಗಳು ಯುವನಿಧಿ ಯೋಜನೆಯಡಿ ನೋಂದಣಿಯಾಗಿದ್ದಾರೆ. ಈ ಪೈಕಿ 5,743 ಮಂದಿಗೆ ಡಿಬಿಟಿ ಮೂಲಕ ಧನಸಹಾಯ ಜಮೆಯಾಗುತ್ತಿದೆ. ಉಳಿದ 964 ಮಂದಿ ಸಂಬಂಧ ಪ್ರಕ್ರಿಯೆ ನಡೆಯುತ್ತಿದೆ. ಇದರಲ್ಲಿ ಹೊಸದಾಗಿ ಅರ್ಜಿ ಸಲ್ಲಿಸಿದವರೂ ಇದ್ದಾರೆ. ತಾಲೂಕಿನಲ್ಲಿ ಜನವರಿ ಅಂತ್ಯಕ್ಕೆ ಯುವನಿಧಿ ಫಲಾನುಭವಿಗಳಿಗೆ ಒಟ್ಟು 15.93 ಕೋಟಿ ರೂ. ಹಣ ಸಂದಾಯವಾಗಿದೆ ಎಂದರು.

ಈ ಪೈಕಿ ಪದವಿ ಅಭ್ಯರ್ಥಿಗಳಿಗೆ 15,83,62,500 ರೂ. ಹಾಗೂ ಡಿಪ್ಲೋಮಾ ಅಭ್ಯರ್ಥಿಗಳಿಗೆ 9,61,500 ರೂ. ಪಾವತಿಯಾಗಿದೆ. ಪ್ರತಿ ತಿಂಗಳು ನಾಲ್ಕೈದು ಕಾಲೇಜು ಆಯ್ಕೆ ಮಾಡಿಕೊಂಡು ವೃತ್ತಿ ಮಾರ್ಗದರ್ಶನ ಶಿಬಿರ ನಡೆಸಲಾಗುತ್ತಿದೆ. ಇದೇ ವೇಳೆ ಯುವನಿಧಿ ಯೋಜನೆ ಬಗ್ಗೆಯೂ ಅರಿವು ಮೂಡಿಸಲಾಗುತ್ತಿದೆ ಎಂದು ಸಭೆಗೆ ಮಾಹಿತಿ ನೀಡಿದರು. ಗ್ಯಾರಂಟಿ ಯೋಜನೆ ಚಾಮರಾಜ ಕ್ಷೇತ್ರದ ಸಮಿತಿ ಅಧ್ಯಕ್ಷೆ ಸುಶೀಲ ಮರೀಗೌಡ, ಎನ್‌ಆರ್ ಕ್ಷೇತ್ರದ ಸಮಿತಿ ಅಧ್ಯಕ್ಷ ಮಹದೇವ್, ಕೆಆರ್ ಕ್ಷೇತ್ರ ಸಮಿತಿ ಅಧ್ಯಕ್ಷ ವಿನಯ್, ಪಾಲಿಕೆ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಸಮಿತಿ ಸದಸ್ಯ ಕಾರ್ಯದರ್ಶಿ ಹಾಗೂ ಪಾಲಿಕೆ ಉಪಆಯುಕ್ತ(ಅಭಿವೃದ್ಧಿ) ದಾಸೇಗೌಡ ಸೇರಿದಂತೆ ವಿವಿಧ ಇಲಾಖಾಧಿಕಾರಿಗಳು ಸಭೆಯಲ್ಲಿ ಪಾಲ್ಗೊಂಡಿದ್ದರು.

ಮೈಸೂರು ಮಿತ್ರ ಶುಕ್ರವಾರ 12 ಜೂನ್ 2026

ಅಖಿಲ ಭಾರತ ಸೈನಿಕ ಶಾಲೆಗಳ ಅಂತರ ಗುಂಪು ಫುಟ್ಬಾಲ್ ಪಂದ್ಯಾವಳಿ ಮುಕ್ತಾಯ

ಸೈನಿಕ ಶಾಲೆ ಇಂಫಾಲ್ ಚಾಂಪಿಯನ್, ಕೊಡಗು ಸೈನಿಕ ಶಾಲೆ ರನ್ನರ್ ಅಪ್ ಸ್ಥಾನ



ವಿಜೇತ ತಂಡಗಳೊಂದಿಗೆ ರಾಜ್ಯಪಾಲ ರಾಜೇಂದ್ರ ವಿಶ್ವನಾಥ ಅರ್ಲೇಕರ್, ಸಂಸದ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್.

ಕುಶಾಲನಗರ: ಸಮೀಪದ ಕೂಡಿಗೆ ಕೃಷಿ ಫಾರಂ ಆವರಣದಲ್ಲಿರುವ ಕೊಡಗು ಸೈನಿಕ ಶಾಲಾ ಮೈದಾನದಲ್ಲಿ ಏಳು ದಿನಗಳ ಕಾಲ ನಡೆದ ಅಖಿಲ ಭಾರತ ಸೈನಿಕ ಶಾಲೆಗಳ ಅಂತರ ಗುಂಪು ಫುಟ್ಬಾಲ್ ಪಂದ್ಯಾವಳಿ 2026 (ಪೂರ್ವ ಸುಬ್ರೊತೊ ಕಪ್ 2026)ಯಲ್ಲಿ 17 ವರ್ಷದ ಒಳಗಿನ ಬಾಲಕರ ವಿಭಾಗದಲ್ಲಿ ಸೈನಿಕ ಶಾಲೆ ಇಂಫಾಲ್ ಚಾಂಪಿಯನ್ ಆಗಿ ಹೊರಹೊಮ್ಮಿದರೆ, ಆತಿಥೇಯ ಸೈನಿಕ ಶಾಲೆ ಕೊಡಗು ರನ್ನರ್–ಅಪ್ ಸ್ಥಾನ ಪಡೆಯಿತು.

15 ವರ್ಷದ ಒಳಗಿನ ಬಾಲಕರ ವಿಭಾಗದಲ್ಲಿ ಸೈನಿಕ ಶಾಲೆ ಚಂದ್ರಪುರ ಚಾಂಪಿಯನ್ ಆಗಿ ಹೊರಹೊಮ್ಮಿದರೆ, ಸೈನಿಕ ಶಾಲೆ ಇಂಫಾಲ್ ರನ್ನರ್–ಅಪ್ ಸ್ಥಾನ ಪಡೆದುಕೊಂಡಿತು. 17 ವರ್ಷದ ಒಳಗಿನ ಬಾಲಕಿಯರ ವಿಭಾಗದಲ್ಲಿ ಸೈನಿಕ ಶಾಲೆ ಸುಜಾನ್ಪುರ್ ತಿರಾ ಚಾಂಪಿಯನ್ ಆಗಿ ಹೊರಹೊಮ್ಮಿದರೆ, ಸೈನಿಕ ಶಾಲೆ ಚಂದ್ರಪುರ ರನ್ನರ್–ಅಪ್ ಸ್ಥಾನ ಗಳಿಸಿತು.

ಸಮಾರೋಪ ಸಮಾರಂಭದಲ್ಲಿ ಪಾಲ್ಗೊಂಡಿದ್ದ ಕೇರಳ ಮತ್ತು ತಮಿಳುನಾಡು ರಾಜ್ಯದ ರಾಜ್ಯಪಾಲ ರಾಜೇಂದ್ರ ವಿಶ್ವನಾಥ ಅರ್ಲೇಕರ್ ಅವರು ವಿಜೇತ ತಂಡಗಳಿಗೆ ಹಾಗೂ ಅತ್ಯುತ್ತಮ ಆಟಗಾರ, ಅತ್ಯುತ್ತಮ ಗೋಲ್ ಕೀಪರ್ ಹಾಗೂ ಗರಿಷ್ಠ ಗೋಲು ಗಳಿಸಿದ ಆಟಗಾರರಿಗೆ ವೈಯಕ್ತಿಕ ಪ್ರಶಸ್ತಿಗಳನ್ನು ನೀಡಿ ಗೌರವಿಸಿದರು.

ಈ ಸಂದರ್ಭ ಮಾತನಾಡಿದ ರಾಜ್ಯಪಾಲರು ದೇಶಭಕ್ತಿ, ಪ್ರಾಮಾಣಿಕತೆ, ನಾಯಕತ್ವ ಮತ್ತು ರಾಷ್ಟ್ರೀಯ ಸೇವೆಯ ಮೌಲ್ಯಗಳನ್ನು ಹೊಂದಿರುವ ಭವಿಷ್ಯದ ಯುವಕರನ್ನು ರೂಪಿಸುವಲ್ಲಿ ಸೈನಿಕ್ ಶಾಲೆಗಳ ಪಾತ್ರ ಮಹತ್ವದ್ದಾಗಿದೆ ಎಂದು ಹೇಳಿದರು.

ಸಂಸದ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್ ಮಾತನಾಡಿ, ದೇಶ ಸೇವೆ ಹಾಗೂ ನಾಯಕತ್ವಕ್ಕೆ ಬದ್ಧವಾದ ದೇಶಭಕ್ತ ಯುವಜನರನ್ನು ರೂಪಿಸುವಲ್ಲಿ ಸೈನಿಕ ಶಾಲೆಗಳ ಪಾತ್ರ ಮಹತ್ವದ್ದಾಗಿದೆ ಎಂದು ಹೇಳಿದರು.

ಶಾಲೆಯ ಪ್ರಾಂಶುಪಾಲ ಕರ್ನಲ್ ಅಮರ್ ಜೀತ್ ಸಿಂಗ್ ಮಾತನಾಡಿ, ಶಾಲೆಯ ಇತಿಹಾಸದಲ್ಲಿಯೇ ಅಖಿಲ ಭಾರತ ಸೈನಿಕ ಶಾಲೆಗಳ ಅಂತರ ಗುಂಪು ಫುಟ್ಬಾಲ್ ಪಂದ್ಯಾವಳಿ ಒಂದು ಸ್ಮರಣೀಯ ಹಾಗೂ ಐತಿಹಾಸಿಕ ಕ್ಷಣವಾಗಿತ್ತು ಎಂದು ಬಣ್ಣಿಸಿದರು.

ಈ ಸಂದರ್ಭದಲ್ಲಿ ಉಪ ಪ್ರಾಂಶುಪಾಲ ವಿಂಗ್ ಕಮಾಂಡರ್ ಮೊಹಮ್ಮದ್ ಶಾಜಿ, ಹಿರಿಯ ಶಿಕ್ಷಕ ವಿಬಿನ್ ಕುಮಾರ್ ರಾಜ್ಯ ಕ್ರೀಡಾ ಪ್ರಾಧಿಕಾರದ ಉಪಾಧ್ಯಕ್ಷ ಅರುಣ್ ಮಾಚಯ್ಯ, ವಿವಿಧ ಇಲಾಖೆಯ ಅಧಿಕಾರಿಗಳು ಹಾಗೂ ಸೈನಿಕ ಶಾಲೆಯ ಶಿಕ್ಷಕರು ಹಾಗೂ ಸಿಬ್ಬಂದಿಗಳು ಪಾಲ್ಗೊಂಡಿದ್ದರು.

ಪ್ರತಿಷ್ಠಿತ ರಾಷ್ಟ್ರೀಯ ಮಟ್ಟದ ಫುಟ್ಬಾಲ್ ಪಂದ್ಯಾವಳಿಯನ್ನು ಮೊದಲ ಬಾರಿಗೆ ಆತಿಥ್ಯ ವಹಿಸುವ ಮೂಲಕ ಸೈನಿಕ ಶಾಲೆ ಕೊಡಗು ಐತಿಹಾಸಿಕ ಮೈಲಿಗಲ್ಲನ್ನು ಸಾಧಿಸಿದೆ.

ಅತಿಥಿಗಳಿಗೆ ಸ್ವಾಗತ: ಮುಖ್ಯ ಅತಿಥಿಗಳನ್ನು ಶಾಲೆಯ ಪ್ರಾಂಶುಪಾಲ ಕರ್ನಲ್ ಅಮರ್ ಜೀತ್ ಸಿಂಗ್ ಅವರು ಸಾಂಪ್ರದಾಯಿಕ ಅಶ್ವದಳದ ಮೂಲಕ ಆತ್ಮೀಯವಾಗಿ ಸ್ವಾಗತಿಸಿದರು. ನಂತರ ಮುಖ್ಯ ಅತಿಥಿಗಳು ಹಾಗೂ ಗೌರವ ಅತಿಥಿಗಳು ಶಾಲೆಯಲ್ಲಿರುವ ಯುದ್ಧ ಸ್ಮಾರಕಕ್ಕೆ ಪುಷ್ಪ ನಮನ ಸಲ್ಲಿಸಿ ವೀರ ಯೋಧರಿಗೆ ಗೌರವ ಸಮರ್ಪಿಸಿದರು. ಗೌರವಾನ್ವಿತ ರಾಜ್ಯಪಾಲರಿಗೆ ಶಾಲೆಯ ವಿದ್ಯಾರ್ಥಿಗಳಿಂದ ಗೌರವ ವಂದನೆ ಸಲ್ಲಿಸಲಾಯಿತು.

ರಾಜ್ಯಪಾಲರು ಪಥಸಂಚಲನದ ಗೌರವ ವಂದನೆಯನ್ನು ಸ್ವೀಕರಿಸಿದರು. ಬಳಿಕ ಶಾಲಾ ವಿದ್ಯಾರ್ಥಿಗಳು ಪ್ರದರ್ಶಿಸಿದ ಡೊಳ್ಳು ಕುಣಿತ ಕರ್ನಾಟಕದ ಶ್ರೀಮಂತ ಸಾಂಸ್ಕೃತಿಕ ಪರಂಪರೆಯನ್ನು ಅನಾವರಣಗೊಳಿಸಿತು.

ಮಡಿಕೇರಿಯಲ್ಲಿ ಭಾರೀ ಮಳೆ

ಜರುಗಿದ ತಡೆಗೋಡೆ, ಆತಂಕಗೊಂಡ ನಿವಾಸಿಗಳು

ಮಡಿಕೇರಿ,ಜೂ.11– ನಗರದಲ್ಲಿ ಬುಧವಾರ ಸಂಜೆ ಸುರಿದ ಭಾರಿ ಮಳೆಗೆ ನಗರದ ಚಾಮುಂಡೇಶ್ವರಿ ನಗರದಲ್ಲಿ ಮನೆಯೊಂದರ ಬಳಿ ನಿರ್ಮಿಸಲಾಗಿದ್ದ ಬೃಹತ್ ಗಾತ್ರದ ತಡೆಗೋಡೆಯೊಂದು ಜರಿದು ಪಕ್ಕದ ಮನೆಯ ಗೋಡೆಗೆ ವಾಲಿಕೊಂಡು ನಿಂತಿದೆ. ಇದರಿಂದಾಗಿ ಮನೆಯ ಮೇಲ್ಚಾವಣಿಯ ಸಿಮೆಂಟ್ ಶೀಟ್‌ಗಳಿಗೆ ಹಾನಿಯಾಗಿ ನಷ್ಟ ಸಂಭವಿಸಿದೆ. ಈ ಬೃಹತ್ ಗಾತ್ರದ ತಡೆಗೋಡೆಯನ್ನು ಇತ್ತೀಚೆಗಷ್ಟೇ ನಿರ್ಮಿಸಲಾಗಿತ್ತು.

ಜಿಯೊಲಾಜಿಕಲ್ ಸರ್ವೆ ಆಫ್ ಇಂಡಿಯ ನೀಡಿರುವ ವರದಿಯಲ್ಲಿ ಚಾಮುಂಡೇಶ್ವರಿ ನಗರ ಭೂ ಕುಸಿತದಂತಹ ಪ್ರಕೃತಿ ವಿಕೋಪ ಸಂಭವಿಸುವ ಅಪಾಯಕಾರಿ ಪ್ರದೇಶವೆಂದು ಗುರುತಿಸಲಾಗಿದ್ದು ಮಳೆಯ ಆರಂಭಿಕ ಹಂತದಲ್ಲೇ ತಡೆಗೋಡೆ ಜರಿದು ಸ್ಥಳೀಯರಲ್ಲಿ ಆತಂಕ ಮೂಡಿಸಿದೆ. ಜರಿದು ನಿಂತಿರುವ ತಡೆಗೋಡೆಯನ್ನು ತೆರವುಗೊಳಿಸಲಾಗುತ್ತಿದ್ದು, ಮಡಿಕೇರಿಯ ನಗರಸಭೆ ಅಧಿಕಾರಿಗಳು ಸ್ಥಳಕ್ಕೆ ತೆರಳಿ ಪರಿಶೀಲನೆ ನಡೆಸಿದರು.



ತಡೆಗೋಡೆ ಜರಿದು ಹಾನಿಯಾಗಿರುವ ಮನೆಯ ಮಾಲೀಕ ರವಿ ಅವರು ಮಾತನಾಡಿ, ಕಳೆದ 1 ತಿಂಗಳ ಹಿಂದೆಯಷ್ಟೇ ತಡೆಗೋಡೆಯನ್ನು ನಿರ್ಮಿಸಲಾಗಿದ್ದು, ಅಡಿಪಾಯ ಸರಿ ಇಲ್ಲದ ಕಾರಣ ಮಳೆಗೆ ತಡೆಗೋಡೆ ಜರಿದಿರಬಹುದು ಎಂದು ಅಭಿಪ್ರಾಯ ವ್ಯಕ್ತಪಡಿಸಿದರು.

ಕಾವೇರಿ ನದಿಯಲ್ಲಿ ಮುಳುಗಿ ಸಾವನ್ನಪ್ಪಿದ ಯುವಕರಿಬ್ಬರಲ್ಲಿ ಓರ್ವನ ಮೃತದೇಹ ಪತ್ತೆ



ಮಡಿಕೇರಿ, ಜೂ.11– ಕಾವೇರಿ ನದಿ ದಡದ ಮೇಲೆ ಪಾರ್ಟಿ ಮಾಡುತ್ತಿದ್ದ ನಾಗಾಲ್ಯಾಂಡ್ ಮೂಲದ ಯುವಕರಿಬ್ಬರು ಈಜಲು ನೀರಿಗೆ ಇಳಿದ ವೇಳೆ ಸಾವನ್ನಪ್ಪಿರುವ ಘಟನೆ ಕುಶಾಲನಗರ ರಸೂಲ್ ಲೇಔಟ್ ಬಳಿ ಬುಧವಾರ ಸಂಜೆ ನಡೆದಿದ್ದು, ಗುರುವಾರ ಓರ್ವನ ಮೃತದೇಹ ಪತ್ತೆಯಾಗಿದೆ.

ನಾಗಾಲ್ಯಾಂಡ್ ರಾಜ್ಯದ ಬಸೋಸೊ ಕುಂಚಂಗ್(23) ಮೃತದೇಹ ಪತ್ತೆಯಾಗಿದ್ದು, ಮತ್ತೋರ್ವ ಯುವಕ ಯಾಂಕಾಂಗ್ (27) ಎಂಬಾತನ ಸುಳಿವು ಸಿಕ್ಕಿಲ್ಲ.

ಬುಧವಾರ ಸಂಜೆ ಕತ್ತಲಾದ ಹಿನ್ನೆಲೆಯಲ್ಲಿ ಗುರುವಾರ ಬೆಳಗಿನಿಂದ ಪೊಲೀಸ್ ಇಲಾಖೆ ಹಾಗೂ ಅಗ್ನಿ ಶಾಮಕ ದಳ ಸಿಬ್ಬಂದಿಗಳು ಮೃತದೇಹಗಳ ಪತ್ತೆಗೆ ಕಾರ್ಯಾಚರಣೆ ನಡೆಸಿದ್ದು, ಸಂಜೆ ವೇಳೆಗೆ ಓರ್ವನ ಮೃತದೇಹ ಮಾತ್ರ ಪತ್ತೆಯಾಗಿದೆ. ಕುಶಾಲನಗರ ಸರಕಾರಿ ಆಸ್ಪತ್ರೆಯಲ್ಲಿ ಮೃತದೇಹದ ಮರಣೋತ್ತರ ಪರೀಕ್ಷೆ ನಡೆಯಲಿದೆ ಎಂದು ತಿಳಿದು ಬಂದಿದೆ.

ಕುಶಾಲನಗರದ ಹೋಟೆಲ್ ಒಂದರಲ್ಲಿ ಕೆಲಸ ನಿರ್ವಹಿಸುತ್ತಿದ್ದ ಈ ಇಬ್ಬರು ಯುವಕರು ಹಾಗೂ ಓರ್ವ ಯುವತಿ ಕೆಲಸಕ್ಕೆ ರಜೆ ಮಾಡಿ ಸಂಜೆ ಕಾವೇರಿ ನದಿಯತ್ತ ತೆರಳಿದ್ದರು. ನದಿ ದಡದಲ್ಲಿ ಪಾರ್ಟಿ ಮಾಡಿದ ಬಳಿಕ ಇಬ್ಬರು ಯುವಕರು ಈಜಲು ನೀರಿಗೆ ಇಳಿದಿದ್ದಾರೆ. ಈ ಸಂದರ್ಭ ಆಳವಾದ ಗುಂಡಿಯಲ್ಲಿ ಮುಳುಗಿ ಯುವಕರು ಮೃತಪಟ್ಟಿದ್ದರು. ಕುಶಾಲನಗರ ನಗರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಕಾರು ಮಗುಚಿ ಚಾಲಕನಿಗೆ ಗಾಯ



ಮಡಿಕೇರಿ, ಜೂ.11– ಮಡಿಕೇರಿ–ಮೇಕೇರಿ ರಸ್ತೆಯ ಸರ್ವಿಸ್ ಸ್ಟೇಷನ್ ಒಂದರ ಹಿಂದೆ ಕಾರೊಂದು ಮಗುಚಿರುವ ಘಟನೆ ನಡೆದಿದೆ. ಮೂರ್ನಾಡು ಮಾರ್ಗವಾಗಿ ಮಡಿಕೇರಿ ಕಡೆಗೆ ಆಗಮಿಸಿದ ಶಿಫ್ಟ್ ಕಾರು (ಕೆಎ.01. ಎಂಎಸ್.1500) ತಿರುವು ರಸ್ತೆಯ ಮೇಲ್ಭಾಗ ಚಾಲಕನ ನಿಯಂತ್ರಣ ಕಳೆದುಕೊಂಡು ಅಂದಾಜು 30 ಅಡಿ ಆಳಕ್ಕೆ ಮಗುಚಿ ಬಿದ್ದಿದೆ. ಘಟನೆಯಿಂದ ಕಾರು ಚಾಲಕನಿಗೆ ಸಣ್ಣ ಪುಟ್ಟ ಗಾಯಗಳಾಗಿದ್ದು, ಜಿಲ್ಲಾಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದು ತೆರಳಿದ್ದಾರೆ.

ವೀರಗಾಸೆ ಕಲಾವಿದ ಮಹದೇವಪ್ಪ ವಿಧಿವಶ

ಹೆಚ್ಡಿಕೆ, ಸಿಆರ್‌ಎಸ್, ಜಿಲ್ಲಾಡಳಿತ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಕಂಬನಿ


ಮಹದೇವಪ್ಪ

ನಾಗಮಂಗಲ, ಜೂ.11– ನಾಡಿನ ಹೆಸರಾಂತ ವೀರಗಾಸೆ ಕಲಾವಿದ ಹಾಗೂ ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿ ಪುರಸ್ಕೃತ ಮಹದೇವಪ್ಪ(70) ವಿಧಿವಶರಾಗಿದ್ದಾರೆ.

ನಾಗಮಂಗಲ ಪಟ್ಟಣದ ತಮ್ಮ ನಿವಾಸದಲ್ಲಿ ಗುರುವಾರ ಬೆಳಗ್ಗೆ ಹೃದಯಾಘಾತದಿಂದ ನಿಧನರಾದ ಮಹದೇವಪ್ಪ ಅವರು ವೀರಗಾಸೆ ಕಲೆಯನ್ನು ತಮ್ಮ ಉಸಿರಾಗಿಸಿಕೊಂಡಿದ್ದರು. ಕೇವಲ ನಾಗಮಂಗಲಕ್ಕೆ ಸೀಮಿತವಾಗಿರದೇ ಜಿಲ್ಲೆ ಇಡೀ ರಾಜ್ಯದ ಮೂಲೆ ಮೂಲೆಗಳಲ್ಲಿ ಸಂಚರಿಸಿ ವೀರಗಾಸೆ ಪ್ರದರ್ಶನ ನೀಡಿದ್ದಲ್ಲದೇ ದೇಶದ ಹಲವು ರಾಜ್ಯಗಳು ಹಾಗೂ ವಿದೇಶಗಳಲ್ಲೂ ಇವರ ಕಲಾ ಸೇವೆಗೆ ಸಾರ್ವಜನಿಕರು ಪ್ರಶಂಸೆ ವ್ಯಕ್ತಪಡಿಸಿದ್ದರು.

ಕರ್ನಾಟಕದ ಶೈವ ಸಂಪ್ರದಾಯದ ಪ್ರಸಿದ್ಧ ಧಾರ್ಮಿಕ ಮತ್ತು ಸಾಂಸ್ಕೃತಿಕ ಜನಪದ ಕಲೆ ವೀರಗಾಸೆ ಶಿವನ ಕೋಪದಿಂದ ಹುಟ್ಟಿದ ವೀರಭದ್ರನ ಕಥೆಯನ್ನು ಬಿಂಬಿಸುತ್ತದೆ. ಈ ಕಲೆಯು ಶೌರ್ಯ, ಭಕ್ತಿ ಮತ್ತು ಯುದ್ಧ ಕಲೆಯ ಅಂಶಗಳನ್ನು ಒಳಗೊಂಡಿದ್ದು, ಇಂತಹ ಪ್ರದರ್ಶನದ ಶೈಲಿ ಮತ್ತು ಆಚರಣೆಯ ಆಧಾರದ ಮೇಲೆ ಪ್ರಮುಖ ಪ್ರಕಾರಗಳನ್ನು ಹೊಂದಿದ್ದ ಇಂತಹ ಕಲೆಯನ್ನು ಮಹದೇವಪ್ಪನವರು ಕರಗತ ಮಾಡಿಕೊಂಡಿದ್ದರು.

ವೀರಗಾಸೆಯನ್ನು ಬಿಡದ ಮಹದೇವಪ್ಪನವರು ನೂರಾರು ಶಿಷ್ಯರಿಗೆ ವೀರಗಾಸೆ ಕಲಿಸಿ, ಈ ಪರಂಪರೆಯನ್ನು ಮುಂದಿನ ಪೀಳಿಗೆಗೆ ದಾಟಿಸಿದರು. ಮೈಸೂರು ದಸರಾ, ಹಂಪಿ ಉತ್ಸವ, ರಾಜ್ಯದ ಎಲ್ಲಾ ಪ್ರಮುಖ ಜಾನಪದ ಸಮ್ಮೇಳನಗಳಲ್ಲಿ ಅವರ ಕಲಾ ಪ್ರದರ್ಶನ ನೋಡುಗರ ಮನ ಗೆದ್ದಿತ್ತು.

> ❝ ನಾಡಿನ ಹೆಸರಾಂತ ವೀರಗಾಸೆ ಕಲಾವಿದರು, ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿ ಪುರಸ್ಕೃತ ಶ್ರೀಮಹದೇವಪ್ಪ ಅವರ ನಿಧನದ ಸುದ್ದಿ ಕೇಳಿ ಬಹಳ ದುಃಖವಾಯಿತು. ಮೂಲತಃ ಮಂಡ್ಯ ಜಿಲ್ಲೆ ನಾಗಮಂಗಲ ತಾಲೂಕಿನ ಮಹದೇವಪ್ಪ ಅವರು ಸಕ್ಕರೆ ನಾಡಿನ ಜನಪದ ಸಿರಿಯನ್ನು ದೇಶ–ವಿದೇಶಗಳಲ್ಲಿ ಪಸರಿಸಿ ನಾಡಿಗೆ, ಜಿಲ್ಲೆಗೆ ಕೀರ್ತಿ ತಂದವರು. ಅವರ ನಿಧನ ಜಾನಪದ ಕಲಾ ಕ್ಷೇತ್ರಕ್ಕೆ ಆಗಿರುವ ಬಹು ದೊಡ್ಡ ನಷ್ಟ. ಶ್ರೀಯುತರ ಆತ್ಮಕ್ಕೆ ಆ ಭಗವಂತ ಚಿರಶಾಂತಿ ಕರುಣಿಸಲಿ, ಈ ದುಃಖದ ಸಂದರ್ಭದಲ್ಲಿ ಅವರ ಕುಟುಂಬ ಸದಸ್ಯರು, ಅಭಿಮಾನಿಗಳಿಗೆ ನೋವು ಭರಿಸುವ ಶಕ್ತಿಯನ್ನು ದಯಪಾಲಿಸಲಿ ಎಂದು ಪ್ರಾರ್ಥಿಸುವೆ. – ಹೆಚ್.ಡಿ.ಕುಮಾರಸ್ವಾಮಿ, ಕೇಂದ್ರ ಸಚಿವ.

> ❝ ಅರ್ಧ ಶತಮಾನಕ್ಕೂ ಹೆಚ್ಚು ಕಾಲ ವೀರಗಾಸೆಯನ್ನು ತಮ್ಮ ಉಸಿರಾಗಿಸಿಕೊಂಡಿದ್ದ ಮಹದೇವಪ್ಪನವರು ಜಿಲ್ಲೆಯ ಹೆಮ್ಮೆಯಷ್ಟೇ ಅಲ್ಲ, ಇಡೀ ರಾಜ್ಯದ ಜಾನಪದ ಲೋಕದ ಆಸ್ತಿಯಾಗಿದ್ದರು. ಅವರ ಡಮರುಗದ ನಾದ, ಹೆಜ್ಜೆಯ ಗತ್ತು, ಮುಖದ ಭಾವ ಕಂಡು ನಾಡಿನ ಜನ ಮೈಮರೆಯುತ್ತಿದ್ದರು. ಅವರ ನಿಧನದಿಂದ ಜಾನಪದ ಕ್ಷೇತ್ರ ದಲ್ಲಿ ಎಂದೂ ತುಂಬಲಾರದ ಶೂನ್ಯ ಸೃಷ್ಟಿಯಾಗಿದೆ. –ಎನ್. ಚಲುವರಾಯಸ್ವಾಮಿ, ಮಾಜಿ ಸಚಿವ.

ಮಹದೇವಪ್ಪನವರ ಕಲಾ ಸೇವೆ ಗುರ್ತಿಸಿ ತಾಲೂಕು, ಜಿಲ್ಲೆ ಹಾಗೂ ರಾಜ್ಯದ ವಿವಿಧ ಸಂಘ ಸಂಸ್ಥೆಗಳು ಪ್ರಶಸ್ತಿಗಳನ್ನು ನೀಡಿದ್ದಾರೆ. ಅಂತೆಯೇ ರಾಜ್ಯ ಸರ್ಕಾರ ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿ ನೀಡಿ ಗೌರವಿಸಿದೆ.

ನಾಗಮಂಗಲದಂತಹ ಹಳ್ಳಿಯಿಂದ ಬಂದು ದೇಶ–ವಿದೇಶಗಳಲ್ಲಿ ನಾಗಮಂಗಲದ ಹೆಸರನ್ನು ಪಸರಿಸಿದ ಕೀರ್ತಿ ಮಹದೇವಪ್ಪನವರಿಗೆ ಸಲ್ಲುತ್ತದೆ. ವೀರಗಾಸೆ ಎಂದರೆ ಮಹದೇವಪ್ಪ, ಮಹದೇವಪ್ಪ ಎಂದರೆ ವೀರಗಾಸೆ ಅಷ್ಟು ಮಟ್ಟಿಗೆ ಅವರು ಹೆಸರಾಗಿದ್ದರು. ಇವರ ನಿಧನಕ್ಕೆ ಮಂಡ್ಯ ಜಿಲ್ಲಾಡಳಿತ, ರಾಜ್ಯದ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಕಂಬನಿ ಮಿಡಿದಿದೆ.

ಪ್ರಕೃತಿ ಮಾತೆ ನಮ್ಮೆಲ್ಲರನ್ನು ಸಲಹುವ ದೈವಿಕ ತಾಯಿ

ಕೃಷಿಕ ಅಲಯನ್ಸ್ ಸಂಸ್ಥೆ ಕಾರ್ಯದರ್ಶಿ ಪ್ರೊ.ಡೇವಿಡ್


ಮಂಡ್ಯದಲ್ಲಿ ಪರಿಸರ ಜಾಗೃತಿ ಅಭಿಯಾನ ಕಾರ್ಯಕ್ರಮ ನಡೆಯಿತು.

ಮಂಡ್ಯ, ಜೂ.11– ಪ್ರಕೃತಿ ಮಾತೆ ನಮ್ಮೆಲ್ಲರನ್ನು ಸಲಹುವ ದೈವಿಕ ತಾಯಿ ಎಂದು ಕೃಷಿಕ ಅಲಯನ್ಸ್ ಸಂಸ್ಥೆ ಕಾರ್ಯದರ್ಶಿ ಪ್ರೊ.ಡೇವಿಡ್ ಪ್ರತಿಭಾಂಜಲಿ ತಿಳಿಸಿದರು.

ಇಲ್ಲಿನ ನೆಹರು ನಗರದಲ್ಲಿರುವ ಡ್ಯಾಫೋಡಿಲ್ಸ್ ಶಾಲೆಯಲ್ಲಿ ಪ್ರತಿಭಾಂಜಲಿ ಅಲಯನ್ಸ್ ಸಂಸ್ಥೆ ಮತ್ತು ಡ್ಯಾಫೋಡಿಲ್ಸ್ ಇಂಟರ್ ನ್ಯಾಷನಲ್ ಶಾಲೆ ವತಿಯಿಂದ ಆಯೋಜಿಸಿದ್ದ ವಿಶ್ವ ಪರಿಸರ ದಿನಾಚರಣೆ ಪ್ರಯುಕ್ತ ಪರಿಸರ ಜಾಗೃತಿ ಅಭಿಯಾನ ಮತ್ತು ಪ್ರತಿಭಾ ಪುರಸ್ಕಾರ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ವೃಕ್ಷೋ ರಕ್ಷತಿ ರಕ್ಷಿತ: ಎಂಬ ಘೋಷ ವಾಕ್ಯವನ್ನು ವಿದ್ಯಾರ್ಥಿ ದಿಸೆಯಲ್ಲಿಯೇ ಮೈಗೂಡಿಸಿಕೊಳ್ಳಬೇಕು. ಪ್ರತಿವರ್ಷ ಪರಿಸರ ದಿನಾಚರಣೆ ಬರುತ್ತದೆ. ಆದರೆ ನಮಗೆ ನಿತ್ಯವೂ ಪರಿಸರ ದಿನವಾಗಬೇಕು ಎಂದು ನುಡಿದರು.

ಪರಿಸರ ಅಸಮತೋಲನದಿಂದ ಹವಾಮಾನ ಬದಲಾಗಿ ಜಾಗತಿಕ ತಾಪಮಾನ ಹೆಚ್ಚಳವಾಗುತ್ತಿದೆ. ಭೂಕಂಪ, ಚಂಡ ಮಾರುತ, ಸುನಾಮಿ, ಅಕಾಲಿಕ ಮಳೆ, ಶುದ್ಧ ಆಮ್ಲಜನಕ ಕೊರತೆ ಎದುರಿಸುತ್ತಿದ್ದೇವೆ ಎಂದು ಎಚ್ಚರಿಸಿದರು.

ಡ್ಯಾಫೋಡಿಲ್ಸ್ ಶಾಲೆ ಕಾರ್ಯದರ್ಶಿ ಸುಜಾತ ಮಾತನಾಡಿ, ಇತ್ತೀಚಿನ ದಿನಗಳಲ್ಲಿ ಪ್ಲಾಸ್ಟಿಕ್ ಬಳಕೆ ಹೆಚ್ಚಾಗಿದ್ದು, ತಾಪಮಾನ ಹೆಚ್ಚಳ ಮತ್ತು ಪರಿಸರ ನಾಶಕ್ಕೆ ಕಾರಣವಾಗುತ್ತಿದೆ. ವಿದ್ಯಾರ್ಥಿಗಳು ಬಟ್ಟೆ ಬ್ಯಾಗ್‌ಗಳನ್ನು ಬಳಕೆ ಮಾಡಿ, ಮನೆಗಳಲ್ಲಿ ಪೋಷಕರು ಮತ್ತು ನಾಗರಿಕರಿಗೆ ಬಟ್ಟೆ ಬ್ಯಾಗ್‌ಗಳನ್ನು ಬಳಸುವಂತೆ ಮನವಿ ಮಾಡಿ ಎಂದು ಸಲಹೆ ನೀಡಿದರು.

ಈ ವರ್ಷದ ಘೋಷವಾಕ್ಯ ಪ್ರಕೃತಿಯಿಂದ ಪ್ರೇರಿತರಾಗಿ, ಹವಾಮಾನಕ್ಕಾಗಿ, ನಮ್ಮ ಭವಿಷ್ಯಕ್ಕಾಗಿ ಎಂಬುದಾಗಿದೆ. ಪ್ರಕೃತಿಯಿಂದ ತಾಳ್ಮೆ, ಸಹಬಾಳ್ವೆ ಕಲಿಯೋಣ ಹಾಗೂ ಉತ್ತಮ ಹವಾಮಾನಕ್ಕಾಗಿ ಮನೆಗೊಂದು ಮರ ನೆಟ್ಟು ಬೆಳೆಸಿ, ಪೋಷಿಸಿ, ನಾಳೆಗಾಗಿ ಇಂದೇ ಪರಿಸರವನ್ನು ಉಳಿಸಿ ಬೆಳೆಸಿ ಎಂದರು.

ಈ ವೇಳೆ ಪ್ರತಿಭಾ ಪುರಸ್ಕಾರ ನೀಡಿ, ಚಿತ್ರಕಲಾ ಸ್ಪರ್ಧೆ ವಿಜೇತರಿಗೆ ಬಹುಮಾನ ವಿತರಿಸಲಾಯಿತು. ಪರಿಸರ ಉಳಿವು ಮತ್ತು ರಕ್ಷಣೆಗಾಗಿ ಪ್ರತಿಜ್ಞಾವಿಧಿ ಸ್ವೀಕರಿಸಲಾಯಿತು. ಕಾರ್ಯಕ್ರಮದಲ್ಲಿ ಶಾಲೆ ಅಧ್ಯಕ್ಷರು, ಸಾಹಿತಿ ಡಾ.ಪ್ರದೀಪಕುಮಾರ ಹೆಬ್ರಿ, ಉಪನ್ಯಾಸಕಿ ಭಾರ್ಗವಿ, ಮುಖ್ಯ ಶಿಕ್ಷಕಿ ನಯನಾ ಮತ್ತು ಶಿಕ್ಷಕಿಯರ ವೃಂದ ಹಾಗೂ ಸಿಬ್ಬಂದಿ ಹಾಜರಿದ್ದರು.

ಚೈತ್ರ ನಿಧನ



ಭಾರತೀನಗರ, ಜೂ.11– ಇಲ್ಲಿಗೆ ಸಮೀಪದ ಗೊರವನಹಳ್ಳಿ ಗ್ರಾಮದ ಯುವತಿ ಚೈತ್ರ(25) ಗುರುವಾರ ನಿಧನರಾದರು. ಈಕೆ ಬೆಂಗಳೂರು ಅಪೋಲೋ ಆಸ್ಪತ್ರೆಯಲ್ಲಿ ಶುಶ್ರೂಷಕಿಯಾಗಿ ಕರ್ತವ್ಯ ನಿರ್ವಹಿಸುತ್ತಿದ್ದರು.

ಮೃತರು ತಂದೆ ಹನುಮಂತಯ್ಯ, ತಾಯಿ ಸರೋಜಮ್ಮ, ಇಬ್ಬರು ಸಹೋದರರು ಸೇರಿದಂತೆ ಅಪಾರ ಬಂಧುಗಳನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ಸ್ವಗ್ರಾಮದ ರುದ್ರಭೂಮಿಯಲ್ಲಿ ಜರುಗಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಶುದ್ಧ ಕುಡಿಯುವ ನೀರಿನ ಘಟಕ ದುರಸ್ತಿಗೆ ಆಗ್ರಹ

ಕಿಕ್ಕೇರಿ, ಜೂ.11– ಶುದ್ಧ ಕುಡಿಯುವ ನೀರಿನ ಘಟಕ ದುರಸ್ತಿಗೆ ಆಗ್ರಹಿಸಿ ಆನೆಗೊಳ ಗ್ರಾಮದಲ್ಲಿ ರೈತ ಸಂಘದಿಂದ ಪ್ರತಿಭಟನೆ ನಡೆಸಲಾಯಿತು.

ಶುದ್ಧ ಕುಡಿಯುವ ನೀರಿನ ಘಟಕದ ಎದುರು ಜಮಾಯಿಸಿದ ರೈತ ಸಂಘದ ಕಾರ್ಯಕರ್ತರು ಪ್ರತಿಭಟನೆ ನಡೆಸಿ ಆಕ್ರೋಶ ವ್ಯಕ್ತಪಡಿಸಿದರು.

ಈ ವೇಳೆ ಮಾತನಾಡಿದ ಪ್ರತಿಭಟನಾಕಾರರು, ಹಲವು ದಿನಗಳಿಂದ ಶುದ್ಧ ಕುಡಿಯುವ ನೀರಿನ ಘಟಕದಲ್ಲಿ ನೀರು ಬರುತ್ತಿಲ್ಲ. ಏಕೈಕ ಕುಡಿಯುವ ನೀರಿನ ಘಟಕ ಇದಾಗಿದೆ. ಜಲಜೀವನ್ ಮಿಷನ್ ನಿಂದಲೂ ನೀರಿನ ವ್ಯವಸ್ಥೆ ಇಲ್ಲವಾಗಿದ್ದು, ಈ ಸಂಬಂಧ ಎಲ್ಲಾ ವಿಚಾರವನ್ನು ಪಿಡಿಓಗೆ ಮನವರಿಕೆ ಮಾಡಲಾಗಿದೆ. ಆದರೂ ಯಾವುದೇ ಪ್ರಯೋಜನವಾಗಿಲ್ಲ. ಹೀಗಾಗಿ ಕೆಟ್ಟು ಹೋಗಿರುವ ಶುದ್ಧ ಕುಡಿಯುವ ನೀರಿನ ಘಟಕವನ್ನು ದುರಸ್ತಿಗೊಳಿಸಬೇಕು. ಇಲ್ಲದಿದ್ದರೇ ಪ್ರತಿಭಟನೆ ನಡೆಸಲಾಗುವುದು ಎಂದು ಎಚ್ಚರಿಕೆ ನೀಡಿದರು. ಈ ವೇಳೆ ಆನೆಗೊಳ ಘಟಕದ ಅಧ್ಯಕ್ಷ ಮಂಜೇಗೌಡ, ಸದಸ್ಯರಾದ ಸುಮಾ, ಆನೆಗೊಳ ಮಂಜೇಗೌಡ, ಪುನೀತ್, ಗೋವಿಂದೇಗೌಡ, ಕಾಂತರಾಜು, ಪುರುಷೋತ್ತಮ್, ಪುಟ್ಟರಾಜು, ಕುಮಾರ್ ಇತರರಿದ್ದರು.


ಕುಡಿಯುವ ನೀರಿನ ಘಟಕ ದುರಸ್ತಿಗೆ ಆಗ್ರಹಿಸಿ ಪ್ರತಿಭಟನೆ ನಡೆಸಲಾಯಿತು.

ಜೂಜಾಡುತ್ತಿದ್ದ ಇಬ್ಬರು ಪೊಲೀಸರು ಅಮಾನತು




ಚಾಮರಾಜನಗರ: ಜೂಜಾಟದಲ್ಲಿ ತೊಡಗಿರುವವರ ಹೆಡೆಮುರಿಕಟ್ಟಿ ಜೂಜುಕೋರರನ್ನು ಬಂಧಿಸಿ, ಕಾನೂನು ಸುವ್ಯವಸ್ಥೆ ಕಾಪಾಡಬೇಕಿದ್ದ ಪೊಲೀಸರೇ ಜೂಜಾಟವಾಡುವಾಗ ಸಿಕ್ಕಿಬಿದ್ದಿರುವ ಘಟನೆ ನಗರದ ಹೊರವಲಯದಲ್ಲಿ ನಡೆದಿದೆ.

ಜಿಲ್ಲಾ ಸಶಸ್ತ್ರ ಮೀಸಲು (ಡಿಎಆರ್) ಘಟಕದ ಎಆರ್‌ಎಸ್‌ಐ ನಾಗೇಶ್ ಹಾಗೂ ಮಹಿಳಾ ಪೊಲೀಸ್ ಠಾಣೆಯ ಪೇದೆ ಮಲ್ಲಿಕಾರ್ಜುನ್ ಬಂಧಿತರು. ಇವರನ್ನು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಮುತ್ತುರಾಜು ಅವರು ಅಮಾನತುಗೊಳಿಸಿ ಆದೇಶ ಹೊರಡಿಸಿದ್ದಾರೆ.

ನಗರದ ಹೊರವಲಯದ ಗ್ರಾಮಾಂತರ ಪೊಲೀಸ್ ಠಾಣೆ ವ್ಯಾಪ್ತಿಯಲ್ಲಿ ಜೂಜಾಟ ನಡೆಯುತ್ತಿರುವ ಬಗ್ಗೆ ಬಂದ ಖಚಿತ ಮಾಹಿತಿ ಮೇರೆಗೆ ಪೊಲೀಸರು ದಾಳಿ ನಡೆಸಿದ್ದರು. ಈ ವೇಳೆ ಜೂಜಾಟದಲ್ಲಿ ತೊಡಗಿದ್ದ ಆರೋಪದಡಿ ಹಲವರನ್ನು ವಶಕ್ಕೆ ಪಡೆಯಲಾಗಿದ್ದು, ಅವರಲ್ಲಿ ಈ ಇಬ್ಬರು ಪೊಲೀಸ್ ಸಿಬ್ಬಂದಿಯೂ ಇದ್ದರು ಎಂದು ತಿಳಿದು ಬಂದಿದೆ.

ಘಟನೆಯು ಪೊಲೀಸ್ ಇಲಾಖೆಯ ಶಿಸ್ತು ಮತ್ತು ನಡವಳಿಕೆಗೆ ವಿರುದ್ಧವಾಗಿರುವ ಹಿನ್ನೆಲೆಯಲ್ಲಿ ಇಲಾಖಾ ಕ್ರಮವಾಗಿ ಇಬ್ಬರನ್ನೂ ಅಮಾನತುಗೊಳಿಸಲಾಗಿದೆ ಎಂದು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ತಿಳಿಸಿದ್ದಾರೆ. ಈ ಪ್ರಕರಣ ಕುರಿತು ಹೆಚ್ಚಿನ ತನಿಖೆ ಮುಂದುವರಿದಿದೆ.

ರಸ್ತೆ, ಚರಂಡಿ ಅಭಿವೃದ್ಧಿ ಕಾಮಗಾರಿಗೆ ಶಾಸಕ ಪುಟ್ಟರಂಗಶೆಟ್ಟಿ ಗುದ್ದಲಿ ಪೂಜೆ


ಕಾಮಗಾರಿಗೆ ಶಾಸಕ ಸಿ.ಪುಟ್ಟರಂಗಶೆಟ್ಟಿ ಭೂಮಿ ಪೂಜೆ ನೆರವೇರಿಸಿದರು.

ಚಾಮರಾಜನಗರ, ಜೂ.11– ಗ್ರಾಮೀಣ ರಸ್ತೆಗಳು ಗ್ರಾಮೀಣಾಭಿವೃದ್ಧಿಯ ಪ್ರತೀಕವಾಗಿದ್ದು, ಗ್ರಾಮ ಸಂಪರ್ಕ ರಸ್ತೆಗಳ ನಿರ್ಮಾಣಕ್ಕೆ ಹೆಚ್ಚಿನ ಆದ್ಯತೆ ನೀಡುತ್ತಿದ್ದೇನೆ ಎಂದು ಶಾಸಕ ಸಿ.ಪುಟ್ಟರಂಗಶೆಟ್ಟಿ ತಿಳಿಸಿದರು.

ಚಾಮರಾಜನಗರ ವಿಧಾನಸಭೆ ಕ್ಷೇತ್ರದ ಕೂಡ್ಲೂರು, ಆಲೂರು, ಸರಗೂರುಮೋಳೆ ಗ್ರಾಮದ ಉಪ್ಪಾರ ಬಡಾವಣೆಗಳಲ್ಲಿ ಮಳೆ ಹಾನಿ ಪರಿಹಾರ ಯೋಜನೆ ಅನುದಾನ 1.80 ಕೋಟಿ ರೂ.ವೆಚ್ಚದಲ್ಲಿ ಕೈಗೊಳ್ಳಲಾಗುವ ರಸ್ತೆ ಹಾಗೂ ಚರಂಡಿ ಅಭಿವೃದ್ಧಿಕಾಮಗಾರಿಗೆ ಗುದ್ದಲಿಪೂಜೆ ನೆರವೇರಿಸಿ ಮಾತನಾಡಿದರು.

ಕೂಡ್ಲೂರು ಗ್ರಾಮದ ರಸ್ತೆ ಅಭಿವೃದ್ಧಿ ಕಾಮಗಾರಿಗೆ 80 ಲಕ್ಷ, ಆಲೂರು ಗ್ರಾಮದ ಉಪ್ಪಾರ ಬಡಾವಣೆಯಲ್ಲಿ ರಸ್ತೆ ಅಭಿವೃದ್ಧಿಗೆ 50ಲಕ್ಷ, ಸರಗೂರುಮೋಳೆ ಗ್ರಾಮಕ್ಕೆ 50 ಲಕ್ಷ ರೂ ಸೇರಿದಂತೆ 1.80 ಕೋಟಿ ರೂ.ವೆಚ್ಚದಲ್ಲಿ ರಸ್ತೆ ಹಾಗೂ ಚರಂಡಿ ಅಭಿವೃದ್ಧಿ ಮಾಡಲಾಗುವುದು.

ಗ್ರಾಮಸ್ಥರು ಮುಂದೆ ನಿಂತು ಗುಣಮಟ್ಟದ ಚರಂಡಿ ಹಾಗೂ ರಸ್ತೆ ಕಾಮಗಾರಿ ಮಾಡಿಸಿಕೊಳ್ಳುವಂತೆ ಶಾಸಕರು ಸೂಚಿಸಿದರು. ನಿಗದಿತ ಅವಧಿಯೊಳಗೆ ಕಾಮಗಾರಿ ಪೂರ್ಣಗೊಳಿಸಿ, ಸಾರ್ವಜನಿಕರ ಸಂಚಾರಕ್ಕೆ ಅನುವು ಮಾಡಿಕೊಡಬೇಕು ಎಂದು ಸೂಚನೆ ನೀಡಿದರು.

ಇದೇ ವೇಳೆ ನಗರದ ರೇಷ್ಮೆ ಗೂಡು ಮಾರುಕಟ್ಟೆಯಿಂದ ಚನ್ನೀಪುರಮೋಳೆ, ಜಾಲಹಳ್ಳಿ ಹುಂಡಿಯಲ್ಲಿ ನಡೆಯುತ್ತಿರುವ ರಸ್ತೆ ಕಾಮಗಾರಿಯನ್ನು ಶಾಸಕರು ಪರಿಶೀಲಿಸಿದರು.

ಎಪಿಎಂಸಿ ಸದಸ್ಯ ಎ.ಎಸ್. ಆಲೂರು ಪ್ರದೀಪ್, ಗ್ರಾಪಂ ಮಾಜಿ ಸದಸ್ಯೆ ಯೋಗೇಶ್ವರಿ ಮುಖಂಡರಾದ ಮಂಜುನಾಥ್, ಗಿರೀಶ್, ನಾರಾಯಣ್, ಕೃಷ್ಣ, ಮಹದೇವ ಸ್ವಾಮಿ, ಶಿವಕುಮಾರ್, ಗೋವಿಂದರಾಜು, ಚಿನ್ನಸ್ವಾಮಿ, ರಮೇಶ್, ಮಲ್ಲು, ಸಚ್ಚಿನ್, ಪುಟ್ಟಸ್ವಾಮಿ, ಎಸಿ.ಮಹದೇವಸ್ವಾಮಿ, ಕುಮಾರ್, ಶೇಷಣ್ಣ, ಚಿಕ್ಕಮಾದು, ಚಂದ್ರು, ಕೆಆರ್‌ಐಡಿಎಲ್ ಎಂಜಿನಿಯರ್, ಮಧು ಸೇರಿದಂತೆ ಆಯಾ ಗ್ರಾಮದ ಬಡಾವಣೆಗಳ ನಿವಾಸಿಗಳು, ಮುಖಂಡರು ಹಾಜರಿದ್ದರು.

ಚಾಮರಾಜನಗರದಲ್ಲಿ ಪ್ರೈಡ್ ಮೆರವಣಿಗೆ, 'ನಮ್ಮ ಅಸ್ತಿತ್ವದ ಸಂಜೆ' ಕಾರ್ಯಕ್ರಮ


ಸುದ್ದಿಗೋಷ್ಠಿಯಲ್ಲಿ ಸಮತ ಸೊಸೈಟಿ ಸಮಿತಿ ಜಿಲ್ಲಾಧ್ಯಕ್ಷೆ ದೀಪಾಬುದ್ದೆ ಮಾತನಾಡಿದರು.

ಚಾಮರಾಜನಗರ, ಜೂ.11– ಲೈಂಗಿಕ ಕಾರ್ಮಿಕರು, ಲೈಂಗಿಕ ಮತ್ತು ಲಿಂಗತ್ವ ಅಲ್ಪಸಂಖ್ಯಾತರ ಹಕ್ಕುಗಳ ಒಕ್ಕೂಟದ ವತಿಯಿಂದ ಕರ್ನಾಟಕ ಸ್ವಾಭಿಮಾನ ಹಬ್ಬದ ಅಂಗವಾಗಿ ಜೂ.15ರಂದು ನಗರದಲ್ಲಿ ಪ್ರೈಡ್ ಮೆರವಣಿಗೆ ಹಾಗೂ ಮಧ್ಯಾಹ್ನ 2ಕ್ಕೆ 'ನಮ್ಮ ಅಸ್ತಿತ್ವದ ಸಂಜೆ' ಸಾಂಸ್ಕೃತಿಕ ಕಾರ್ಯಕ್ರಮವನ್ನು ನಗರದ ಡಾ.ರಾಜ್‌ಕುಮಾರ್ ರಂಗಮಂದಿರದಲ್ಲಿ ಆಯೋಜಿಸಲಾಗಿದೆ ಎಂದು ಸಮತ ಸೊಸೈಟಿ ಸಮಿತಿ ಜಿಲ್ಲಾಧ್ಯಕ್ಷೆ ದೀಪಾಬುದ್ದೆ ಹೇಳಿದರು.

ನಗರದ ಜಿಲ್ಲಾ ಕಾರ್ಯನಿರತ ಪತ್ರಕರ್ತರ ಸಂಘದ ಭವನದಲ್ಲಿ ನಡೆದ ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ಕರ್ನಾಟಕ ಸ್ವಾಭಿಮಾನ ಹಬ್ಬವು ಕೇವಲ ಉತ್ಸವವಲ್ಲ, ಸಾಮಾಜಿಕ ನ್ಯಾಯ, ಮಾನವ ಹಕ್ಕುಗಳು ಮತ್ತು ಸಮಾನತೆಯ ಪರ ಜನಾಂದೋಲನವಾಗಿದೆ. ಕ್ವಿಯರ್, ಟ್ರಾನ್ಸ್‌ಜೆಂಡರ್, ಅಂತರ್ಲಿಂಗಿ, ನಾನ್–ಬೈನರಿ ಸಮುದಾಯಗಳು, ಲೈಂಗಿಕ ಕಾರ್ಮಿಕರು, ವಿದ್ಯಾರ್ಥಿಗಳು, ಕಲಾವಿದರು ಹಾಗೂ ವಿವಿಧ ಸಮುದಾಯಗಳನ್ನು ಒಗ್ಗೂಡಿಸುವ ಉದ್ದೇಶದಿಂದ ಈ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದೆ ಎಂದರು.

ಅಂದು ಬೆಳಗ್ಗೆ 11.30ಕ್ಕೆ ನಗರದ ಚಾಮರಾಜೇಶ್ವರ ದೇವಾಲಯದ ಆವರಣದಲ್ಲಿ ಪ್ರೈಡ್ ಮೆರವಣಿಗೆಗೆ ಚಾಲನೆ ನೀಡಲಾಗುತ್ತದೆ. ಮೆರವಣಿಗೆ ನಗರದ ಪ್ರಮುಖ ಬೀದಿಗಳಲ್ಲಿ ಸಾಗಿ, ಮಧ್ಯಾಹ್ನ 2ರ ವೇಳೆಗೆ ವೇದಿಕೆ ಕಾರ್ಯಕ್ರಮ ಆಯೋಜಿಸಿರುವ ಡಾ.ರಾಜ್ ಕುಮಾರ್ ಜಿಲ್ಲಾ ರಂಗಮಂದಿರದಲ್ಲಿ ಸಮಾವೇಶಗೊಳ್ಳಲಿದೆ ಎಂದರು.

ಮೆರವಣಿಗೆಯಲ್ಲಿ ಭಾಗವಹಿಸುವವರು ಸಮಾನತೆ, ಘನತೆ, ಸಂವಿಧಾನಿಕ ಹಕ್ಕುಗಳು ಮತ್ತು ಸಾಮಾಜಿಕ ನ್ಯಾಯಕ್ಕಾಗಿ ಐಕ್ಯತೆಯ ಭಿತ್ತಿ ಚಿತ್ರಗಳನ್ನು ಪ್ರದರ್ಶಿಸಲಿದ್ದು, ಸಮುದಾಯ ಮತ್ತು ಲೈಂಗಿಕ ಕಾರ್ಮಿಕರು ಎದುರಿಸುತ್ತಿರುವ ವಿವಿಧ ಸಮಸ್ಯೆಗಳತ್ತ ಗಮನ ಸೆಳೆಯಲಿದ್ದಾರೆ ಎಂದು ತಿಳಿಸಿದರು.

ಹಕ್ಕೊತ್ತಾಯಗಳು: ವೇದಿಕೆ ಕಾರ್ಯಕ್ರಮದಲ್ಲಿ ಜಿಲ್ಲಾಧಿಕಾರಿ, ಜಿಪಂ ಸಿಇಒ, ಡಿಎಚ್‌ಒ ಸೇರಿದಂತೆ ಜಿಲ್ಲಾ ಮಟ್ಟದ ವಿವಿಧ ಇಲಾಖೆಯ ಅಧಿಕಾರಿಗಳು ಭಾಗವಹಿಸುವರು. ಟ್ರಾನ್ಸ್‌ಜೆಂಡರ್ ವ್ಯಕ್ತಿಗಳ ಹಕ್ಕುಗಳಿಗೆ ಸಂಬಂಧಿಸಿದ 2026– ತಿದ್ದುಪಡಿ ಕಾಯ್ದೆಯನ್ನು ವಾಪಸ್ ಪಡೆಯಬೇಕು, ಕರ್ನಾಟಕ ಟ್ರಾನ್ಸ್‌ಜೆಂಡರ್ ನೀತಿಯನ್ನು ಜಾರಿಗೊಳಿಸಬೇಕು, ಬದಲಾವಣೆ ಥೆರಪಿಗೆ ಸಂಪೂರ್ಣ ನಿಷೇಧ ಹೇರಬೇಕು, ಲಿಂಗ ದೃಢೀಕರಣ ಆರೋಗ್ಯ ಸೇವೆಗಳನ್ನು ಉಚಿತವಾಗಿ ಒದಗಿಸಬೇಕು, ನಾನ್–ಬೈನರಿ ಮತ್ತು ಅಂತರ್ಲಿಂಗಿ ವ್ಯಕ್ತಿಗಳ ಗುರುತಿಗೆ ಕಾನೂನು ಮಾನ್ಯತೆ ನೀಡುವುದು ಸೇರಿದಂತೆ ಹಲವು ಹಕ್ಕೊತ್ತಾಯಗಳನ್ನು ಕೇಂದ್ರ ಮತ್ತು ರಾಜ್ಯ ಸರ್ಕಾರಕ್ಕೆ ಇದೇ ಸಂದರ್ಭದಲ್ಲಿ ಸಲ್ಲಿಸಲಾಗುವುದು ಎಂದರು.

ಅರಣ್ಯ ಇಲಾಖೆ ಬೋನಿನಲ್ಲಿ ಚಿರತೆ ಸೆರೆ



ಚಾಮರಾಜನಗರ: ಅರಣ್ಯ ಇಲಾಖೆ ಇರಿಸಿದ್ದ ಬೋನಿನಲ್ಲಿ ಚಿರತೆಯೊಂದು ಸೆರೆಯಾಗಿರುವ ಘಟನೆ ತಾಲೂಕಿನ ಹೊನ್ನಳ್ಳಿ ಗ್ರಾಮದ ಬಳಿ ನಡೆದಿದೆ.

ಹೊನ್ನಳ್ಳಿ ಸೇರಿದಂತೆ ಸುತ್ತಮುತ್ತಲಿನ ಪ್ರದೇಶದಲ್ಲಿ ಚಿರತೆಯ ಓಡಾಟ ಕಂಡುಬಂದ ಹಿನ್ನೆಲೆಯಲ್ಲಿ ಗ್ರಾಮಸ್ಥರು ಭಯಭೀತರಾಗಿದ್ದರು.

ಜಾನುವಾರುಗಳ ಮೇಲೆ ದಾಳಿ ನಡೆಸುವ ಸಾಧ್ಯತೆ ಮತ್ತು ಸಾರ್ವಜನಿಕರ ಸುರಕ್ಷತೆಯ ದೃಷ್ಟಿಯಿಂದ ಅರಣ್ಯ ಇಲಾಖೆ ಮುನ್ನೆಚ್ಚರಿಕಾ ಕ್ರಮವಾಗಿ ಚಿರತೆ ಸೆರೆ ಹಿಡಿಯಲು ಬೋನು ಇರಿಸಿತ್ತು.

ಗುರುವಾರ ಬೆಳಗಿನ ಜಾವ ಅಂದಾಜು 5 ರಿಂದ 6 ವರ್ಷ ವಯಸ್ಸಿನ ಗಂಡು ಚಿರತೆ ಬೋನಿಗೆ ಬಿದಿದ್ದು, ವಿಷಯ ತಿಳಿಯುತ್ತಿದ್ದಂತೆ ಅರಣ್ಯ ಇಲಾಖೆ ಅಧಿಕಾರಿಗಳು ಸ್ಥಳಕ್ಕೆ ಭೇಟಿ ನೀಡಿ ಪರಿಶೀಲಿಸಿದರು. ಬಳಿಕ ಚಿರತೆಯನ್ನು ಸುರಕ್ಷಿತವಾಗಿ ಸ್ಥಳಾಂತರಿಸಿದರು. ಚಿರತೆ ಸೆರೆಯಿಂದಾಗಿ ಗ್ರಾಮಸ್ಥರು ನಿಟ್ಟುಸಿರು ಬಿಟ್ಟಿದ್ದಾರೆ.

ಅಂಗನವಾಡಿ ಕೇಂದ್ರದಲ್ಲಿ ಎಲ್‌ಕೆಜಿ, ಯುಕೆಜಿ ಪ್ರಾರಂಭ

ಚಾಮರಾಜನಗರ: ನಗರಸಭಾ ವ್ಯಾಪ್ತಿಯ ಕರಿನಂಜನಪುರ 10ನೇ ವಾರ್ಡಿನ 2ನೇ ಅಂಗನವಾಡಿ ಕೇಂದ್ರದಲ್ಲಿ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ವತಿಯಿಂದ ಎಲ್‌ಕೆಜಿ ಮತ್ತು ಯುಕೆಜಿಯನ್ನು ಗುರುವಾರ ಪ್ರಾರಂಭಿಸಲಾಯಿತು,

ಉತ್ತಮವಾಗಿ ನಡೆಯುತ್ತಿರುವ ಈ ಅಂಗನವಾಡಿ ಕೇಂದ್ರದಲ್ಲಿ ಗುರುವಾರ ಎಲ್‌ಕೆಜಿ ಮತ್ತು ಯುಕೆಜಿಗೆ ಮಾಜಿ ನಗರಸಭಾ ಸದಸ್ಯ ಮನೋಜ್ ಪಟೇಲ್ ಚಾಲನೆ ನೀಡಿ ಶುಭ ಹಾರೈಸಿ ಅಂಗನವಾಡಿ ಕೇಂದ್ರದಲ್ಲಿ ಎಲ್‌ಕೆಜಿ ಮತ್ತು ಯುಕೆಜಿ ಒಳ್ಳೆಯ ಬೆಳವಣಿಗೆ ಎಂದರು.

ಇದೇ ಸಂದರ್ಭದಲ್ಲಿ ಎಲ್‌ಕೆಜಿ ಮತ್ತು ಯುಕೆಜಿ ಪುಸ್ತಕ ಬಿಡುಗಡೆ, ಸ್ಮಾರ್ಟ್ ಟಿವಿ ಬಿಡುಗಡೆ ಹಾಗೂ ಇಸಿಸಿಇ ಡೇ ಕಾರ್ಯಕ್ರಮ ನಡೆಸಲಾಯಿತು,

ಈ ವೇಳೆ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಯೋಜನಾಧಿಕಾರಿ ಮೀನಾಕ್ಷಿ, ಸಹ ಶಿಕ್ಷಕಿ ಮೀನಾಕ್ಷಿದೇವಿ, ಎಸ್‌ಡಿಎಂಸಿ ಅಧ್ಯಕ್ಷರಾದ ಶೋಭಾ ಅಂಗನವಾಡಿ ಕಾರ್ಯಕರ್ತೆಯರಾದ ಶಾರದ, ರಾಜಮ್ಮ, ಮಮತಾ, ಮಹದೇವಮ್ಮ, ಬಸಮ್ಮಣ್ಣಿ, ಸುನಂದ, ಪೋಷಕರು, ಗ್ರಾಮಸ್ಥರು ಇದ್ದರು.

'ನೀ ನಂಗೆ ಅಲ್ಲವಾ' ಟೀಸರ್ ಬಿಡುಗಡೆ



ಈ ಹಿಂದೆ 'ನಿದ್ರಾದೇವಿ ನೆಕ್ಸ್ಟ್‌ಡೋರ್' ಚಿತ್ರ ನಿರ್ಮಿಸಿದ್ದ ಜಯರಾಂ ದೇವಸಮುದ್ರ ಅವರ ಮತ್ತೊಂದು ಚಿತ್ರ 'ನೀ ನಂಗೆ ಅಲ್ಲವಾ'. ಮನೋಜ್ ಪಿ. ನಡಲುಮನೆ ಅವರ ನಿರ್ದೇಶನವಿರುವ ಈ ಚಿತ್ರದ ಟೀಸರ್ ಇತ್ತೀಚೆಗೆ ಬಿಡುಗಡೆಯಾಯಿತು. ವಿಭಿನ್ನ ಪ್ರೇಮ ಕಥಾನಕ ಇರುವ ಈ ಚಿತ್ರದಲ್ಲಿ ರಾಹುಲ್ ಆರ್ಕಟ್, ಕಾಶಿಮಾ ನಾಯಕ, ನಾಯಕಿಯಾಗಿ ನಟಿಸಿದ್ದಾರೆ. ಕ.ರಾ.ವೇ. ಅಧ್ಯಕ್ಷ ಪ್ರವೀಣ್ ಶೆಟ್ಟಿ ಹಾಗೂ ನಿರ್ದೇಶಕ ಪವನ್ ಒಡೆಯರ್ ಟೀಸರ್‌ಗೆ ಚಾಲನೆ ನೀಡಿದರು,

ಈ ವೇಳೆ ಮಾತನಾಡಿದ ನಿರ್ದೇಶಕ ಮನೋಜ್ ಬೆಳ್ಳಿ ತೆರೆಮೇಲೆ ಈವರೆಗೆ ನೋಡಿರದ ಒಂದು ಅಪ್ಪಟ ಪ್ರೇಮಕಥೆ ಇದಾಗಿದೆ, ಬೆಂಗಳೂರು, ಮಂಗಳೂರು ಹಾಗೂ ಉಡುಪಿಯ ಸುತ್ತಮುತ್ತ ಚಿತ್ರೀಕರಣ ನಡೆಸಿದ್ದೇವೆ. ಚಿತ್ರವೀಗ ಬಿಡುಗಡೆಯ ಹಂತದಲ್ಲಿದ್ದು. ಆಗಸ್ಟ್‌ನಲ್ಲಿ ರಿಲೀಸ್ ಮಾಡುತ್ತೇವೆ ಎಂದರು.

ನಿರ್ಮಾಪಕ ಜಯರಾವ್ ದೇವಸಮುದ್ರ ಮಾತನಾಡಿ ನಮ್ಮ ಸಂಸ್ಥೆಯ ಮತ್ತೊಂದು ಚಿತ್ರ ಶ್ರೀಮುರಳಿ ಅಭಿನಯದ 'ಉಗ್ರಾಯುಧಂ' ಶೂಟಿಂಗ್ ಹಂತದಲ್ಲಿದೆ. ಈ ಚಿತ್ರ ಹಾಗೂ ಅದರಲ್ಲಿರುವ ಕಂಟೆಂಟ್ ಕನ್ನಡ ಪ್ರೇಕ್ಷಕರಿಗೆ ಇಷ್ಟವಾಗುತ್ತೆ ಎಂಬ ನಂಬಿಕೆಯಿದೆ ಎಂದರು.

ನಾಯಕ ರಾಹುಲ್ ಆರ್ಕಟ್ ಮಾತನಾಡಿ ತನ್ನ ಪಾತ್ರ ಪರಿಚಯ ಮಾಡಿಕೊಂಡರು. ನಾಯಕಿ ಕಾಶಿಮಾ ಮಾತನಾಡುತ್ತ ಈ ಚಿತ್ರದಲ್ಲಿ ನಾನು ಖುಷಿ ಎಂಬ ಯುವತಿಯಾಗಿ ಕಾಣಿಸಿಕೊಂಡಿದ್ದೇನೆ. ಈ ಹಿಂದೆ ಮಾಡಿದ ಪಾತ್ರಕ್ಕಿಂತ ಈ ಕಥೆ, ಕ್ಯಾರೆಕ್ಟರ್ ವಿಭಿನ್ನವಾಗಿದೆ ಎಂದು ಹೇಳಿದರು. ಸಂಗೀತ ನಿರ್ದೇಶಕ ಸೂರಜ್ ಜೋಯಿಸ್ ಚಿತ್ರದ ಹಾಡುಗಳ ಬಗ್ಗೆ ವಿವರಿಸಿದರು. ಉದಯಲೀಲಾ ಅವರ ಛಾಯಾಗ್ರಹಣ, ನಾಗೇಂದ್ರ ಉಜ್ಜನಿ ಅವರ ಸಂಕಲನ ಈ ಚಿತ್ರಕ್ಕಿದೆ.



ಟ್ರೈಲರ್‌ನಲ್ಲಿ ಹಾರರ್ 'ಪಂಚಮುಖಿ'



ಹಾರರ್, ಥ್ರಿಲ್ಲರ್ ಕಾನ್ಸೆಪ್ಟ್ ಇಟ್ಟುಕೊಂಡು ತಯಾರಾದ ಪಂಚಮುಖಿ ಚಿತ್ರದ ಟ್ರೈಲರ್ ಇತ್ತೀಚೆಗೆ ಬಿಡುಗಡೆಯಾಯಿತು, ನಾಯಕನ ಕನಸಿನಲ್ಲಿ ಆಗಾಗ ಪಂಚಮುಖಿ ನಿವಾಸ ಎಂಬ ಮನೆ, ಅಲ್ಲಿರುವ ಒಂದು ಕುಟುಂಬ ಬರುತ್ತಿರುತ್ತಾರೆ. ಒಮ್ಮೆ ನಾಯಕ ಕುತೂಹಲದಿಂದ ಆ ಮನೆಯನ್ನು ಹುಡುಕಿಕೊಂಡು ಒಂದು ನಿಗೂಢ ಸ್ಥಳಕ್ಕೆ ಹೋಗುತ್ತಾನೆ. ಆನಂತರ ಆ ಪಂಚಮುಖಿ ನಿವಾಸದಲ್ಲಿ ಏನೇನೆಲ್ಲ ಘಟನೆಗಳು ನಡೆಯುತ್ತವೆ. ಅದಕ್ಕೆ ಕಾರಣವೇನು ಎಂಬುದನ್ನು ನಿರ್ದೇಶಕ ಚಂದ್ರು ಅವರು ಕುತೂಹಲಕರ ಕಥೆಯೊಂದಿಗೆ ಹೇಳೋ ಪ್ರಯತ್ನ ಮಾಡಿದ್ದಾರೆ. ಎಸ್.ಪಿ. ಪ್ರೊಡಕ್ಷನ್ಸ್ ಅಡಿ ಚಂದ್ರು ಆಚಾರ್ ಕಥೆ, ಚಿತ್ರಕಥೆ ಬರೆದು ನಿರ್ಮಾಣ ಮಾಡುವ ಜತೆಗೆ ಚಿತ್ರದ ನಾಯಕನಾಗಿಯೂ ನಟಿಸಿದ್ದಾರೆ. ಸ್ಫೂರ್ತಿ ಮನೋಹರ್ ನಾಯಕಿಯಾಗಿ ನಟಿಸಿದ್ದಾರೆ. ಅರೋನ್ ಕಾರ್ತಿಕ್ ವೆಂಕಟೇಶ್ ಅವರ ಸಂಗೀತದ 4 ಹಾಡುಗಳು ಚಿತ್ರದಲ್ಲಿದ್ದು. ಜೂನ್ 26ರಂದು ಚಿತ್ರ ರಾಜ್ಯಾದ್ಯಂತ ತೆರೆಗೆ ಬರುತ್ತಿದೆ.

ಈವೇಳೆ ನಾಯಕ ಕಮ್ ನಿರ್ದೇಶಕ ಚಂದ್ರು ಆಚಾರ್ ಮಾತನಾಡುತ್ತ ನಿರ್ದೇಶಕನಾಗಿ ನನ್ನ ಮೊದಲ ಚಿತ್ರವಿದು, ಕೋವಿಡ್‌ಗೂ ಮುನ್ನ ಚಿತ್ರದ ಚಿತ್ರೀಕರಣವನ್ನು ಪ್ರಾರಂಭಿಸಿದ್ದೆವು. ಕಾರಣಾಂತರದಿಂದ ಬಿಡುಗಡೆ ವಿಳಂಬವಾಗಿದೆ. ಚಿತ್ರದ ಬಹುತೇಕ ತಂತ್ರಜ್ಞರು ಹಾಗೂ ಕಲಾವಿದರು ನನ್ನ ಮೇಲಿನ ವಿಶ್ವಾಸದಿಂದ ಯಾವುದೇ ಸಂಭಾವನೆ ಪಡೆಯದೆ ಕೆಲಸ ಮಾಡಿದ್ದಾರೆ. ಅರೋನ್ ಕಾರ್ತಿಕ್ ವೆಂಕಟೇಶ್ ತುಂಬಾ ಚೆನ್ನಾಗಿ ಹಾಡುಗಳನ್ನು ಮಾಡಿಕೊಟ್ಟಿದ್ದಾರೆ, ಪ್ರವೀಣ್ ಪೂಜಾರಿ ಅವರ ಛಾಯಾಗ್ರಹಣ ಹಾಗೂ ಅರವಿಂದ್ ಮಲ್ಲು ಅವರ ಸಂಕಲನ ಚಿತ್ರಕ್ಕಿದೆ ಎಂದು ಹೇಳಿದರು.

ಇಂದಿನ ಯುವ ಪೀಳಿಗೆಯ ಪ್ರೇಮಕಥೆ 'ಅಗ್ನಿಸಾಕ್ಷಿ'



ವಿರುದ್ಧ ಸ್ವಭಾವದ ನಾಯಕ, ನಾಯಕಿಯ ನಡುವಿನ ಪ್ರೇಮಕಥೆಯನ್ನು 'ಅಗ್ನಿಸಾಕ್ಷಿ' ಮೂಲಕ ಹೇಳ ಹೊರಟಿದ್ದಾರೆ ನಿರ್ದೇಶಕ ಪ್ರಶಾಂತ್. ದಶಕಗಳ ಹಿಂದೆ ಪ್ರಸಾರವಾಗಿದ್ದ ಜನಪ್ರಿಯ ಧಾರಾವಾಹಿಯ ಶೀರ್ಷಿಕೆ ಇಟ್ಟುಕೊಂಡು, ನಿರ್ಮಾಪಕರೂ ಆದ ಹ್ಯಾರಿಸ್ ಅವರು ವಿಭಿನ್ನ ಪ್ರೇಮಕಥೆಯನ್ನು ಹೆಣೆದಿದ್ದಾರೆ. ಇತ್ತೀಚೆಗೆ ನಡೆದ ಪತ್ರಿಕಾಗೋಷ್ಠಿಯಲ್ಲಿ ಈ ಕುರಿತು ಕಲಾವಿದರು ಹಾಗೂ ತಂತ್ರಜ್ಞರು ಮಾಹಿತಿ ಹಂಚಿಕೊಂಡರು. ಎರಡು ವಿಭಿನ್ನ ವ್ಯಕ್ತಿತ್ವಗಳ ನಡುವಿನ ಸಂಘರ್ಷ ಇದಾಗಿದ್ದು, ಘರ್ಷಣೆಯೊಂದಿಗೆ ಪ್ರಾರಂಭವಾದ ಅಗ್ನಿ ಹಾಗೂ ಸಾಕ್ಷಿ ಇಬ್ಬರ ಪರಿಚಯ ಹೇಗೆ ಪ್ರೇಮಕ್ಕೆ ತಿರುಗಿತು ಎಂಬುದನ್ನು ನಿರ್ದೇಶಕ ಪ್ರಶಾಂತ್ ಕಲರ್ಸ್ ಕನ್ನಡ ವಾಹಿನಿಯಲ್ಲಿ ಕಳೆದ ಸೋಮವಾರದಿಂದ ಪ್ರಸಾರವಾಗುತ್ತಿರುವ ಅಗ್ನಿಸಾಕ್ಷಿಯಲ್ಲಿ ಎಳೆಎಳೆಯಾಗಿ ಬಿಚ್ಚಿಟ್ಟಿದ್ದಾರೆ. ಇಬ್ಬರೂ ಕಣ್ಮುಂದೆ ಬಂದ್ರೆ ಸಹಿಸೋಕಾಗಲ್ಲ, ಕಾಣದೇ ಹೋದ್ರೆ ಬದುಕೋಕೇ ಆಗಲ್ಲ ಎಂಬ ವಿಶಿಷ್ಟ ಪ್ರೇಮಕಥೆ ಇದರಲ್ಲಿದೆ.


ನಿರ್ದೇಶಕ ಪ್ರಶಾಂತ್ ಮಾತನಾಡುತ್ತ ಈ ಹಿಂದೆ ಬಂದಿದ್ದ 'ಅಗ್ನಿಸಾಕ್ಷಿ'ಗೆ ಕಥೆ ಬರೆದ ಹ್ಯಾರಿಸ್ ಅವರೇ ಈ ಕಥೆ ಬರೆಯುವುದರೊಂದಿಗೆ ನಿರ್ಮಾಣದ ಜವಾಬ್ದಾರಿ ಹೊತ್ತಿದ್ದಾರೆ. ಪ್ರೇಕ್ಷಕರ ನಿರೀಕ್ಷೆಯನ್ನು ನಾವು ಹುಸಿ ಮಾಡಲ್ಲ. ಒಂದು ಫ್ಯಾಮಿಲಿ ಸುತ್ತ ನಡೆಯುವ ಕಥೆಯಿದು ಎಂದರು. ಶಮಂತ್ ಬ್ರೋ ಗೌಡ ಅಗ್ನಿಯಾಗಿ ಕಾಣಿಸಿಕೊಂಡರೆ, ಎಷ್ಟೇ ಕಷ್ಟ ಬಂದರೂ ತನ್ನ ಆತ್ಮಗೌರವ ಬಿಟ್ಟುಕೊಡದ ಯುವತಿಯಾಗಿ ನಟಿ ವರ್ಷಿಣಿಗೌಡ ನಟಿಸಿದ್ದಾರೆ. ತಂದೆಯಾಗಿ ಮಿಥುನ್ ತೇಜಸ್ವಿ ಕಾಣಿಸಿಕೊಂಡಿದ್ದಾರೆ.



ಸಿನಿಪದಬಂಧ-630



ಉಮ್ಮತ್ತೂರು ಇಂದುಶೇಖರ್
ಮೊ.9880820462



ಹೆಸರು ____________
ವಿಳಾಸ ____________
____
ದೂರವಾಣಿ ಸಂಖ್ಯೆ ____________

ಎಡದಿಂದ ಬಲಕ್ಕೆ

1. ಸುನಿಲ್, ಮಾಲಾಶ್ರೀಗೆ ಇಟ್ಟ ಬೊಟ್ಟು ! 6
4. _ _ ಸಿರಿಯಾಳ 2
5. ಪುತ್ರನೊಂದಿಗೆ ಪುತ್ರನ ಪುತ್ರನೂ ಇದ್ದಾನೆ 5
6. ನೆನಪಿರಲಿ ಪ್ರೇಮ್ ಅಭಿನಯಕ್ಕೆ ರೂಪ ಅಯ್ಯರ್ ನಿರ್ದೇಶನವಿದೆ 2
7. ಕ್ರೇಜಿ ಕುಟುಂಬ ಚಿತ್ರದ ನಟಿ ಹೊಸಬಳಾದರೂ ಹಳೆಯ ಕಾಲದವಳಂತಿದ್ದಾಳೆ 4
9. ತಾರಾಕೇಶ್ ಪಟೇಲ್ ಅಭಿನಯಿಸಲು ಬಂದವನು 2
11. ವರ್ಷ ಚಿತ್ರದ ನಾಯಕಿ 2
12. ಕೈಲಾಸವಾಸಿಯ ಲ್ಯಾಪ್ ಮತ್ತು ಟಾಪ್ ನಲ್ಲಿ ಇವರಿದ್ದಾರೆ 4
14. ಸ್ಟೈಲ್ ಕಿಂಗ್ ನೆನಪಿಸಿಕೊಂಡರೆ ದುನಿಯಾ ವಿಜಯ್ ಚಿತ್ರ ಪ್ರತ್ಯಕ್ಷ ! 5
15. ಅಶೋಕ್ ಅಭಿನಯದಲ್ಲಿ ಬುದ್ಧಿವಂತ ಎಡವಿದ್ದಾನೆ 6
17. ಪ್ರೇಮಾ ಕಾರಂತ್ ನಿರ್ದೇಶನದಲ್ಲಿ ಅರಸಿ ನಗೆ ಬೀರಿದಳೇ? 8

ಮೇಲಿನಿಂದ ಕೆಳಕ್ಕೆ

1. ವಿಷ್ಣುವರ್ಧನ್ – ದ್ವಾರಕೀಶ್ ಜೊತೆಯಾಗಿ ವಿದೇಶದಲ್ಲಿ ಕಾಣಿಸಿಕೊಂಡಿದ್ದರು 10
2. ಡಾ. ರಾಜ್ ಕುಮಾರ್, ಲಕ್ಷ್ಮೀ, ಸುಮಲತಾ ಅಭಿನಯದ ಚಿತ್ರವಿದು 4
3. ನಟಿ ಜಯಂತಿಯ ಮೂಲ ನಾಮ 6
4. ಭೂಮಿಗೆ ಬಂದ _ _ _ _ 4
8. ಒಲಿದ ಹೆಣ್ಣು ಕೋಪಗೊಂಡರೆ ಊರದೇವಿಯೇ ಸರಿ 8
10. ಪಿ. ವಾದಿರಾಜ್ ನಿರ್ದೇಶನದಲ್ಲಿ ಎಳೆಯರು ಕ್ರಾಂತಿ ಮಾಡಿದ್ದರು 7
13. ರಮೇಶ್ ಅರವಿಂದ್ ಕೊಲೆಗಾರ 3
16. ಕಾಡಿಗೆಯಂತಿರುವ ನಟಿ 3

ಸಿನಿ ಪದಬಂಧ 629ರ ಉತ್ತರ

ಆ	ರ್ಯ	ಭ	ಟ				ಅಂ			
ಪ		ವ್ಯ		ಆ	ರ	ದ	ಗಾ	ಯ		ಟ
ದ್ಬಾಂ				ಗ್ರೋ			ರ			ಗ
ಧ	ನ	ಪಿ	ಶಾ	ಚಿ		ಶಂ	ಕ	ರ್	ಗು	ರು
ವ		ಕ		ಕ್ಕ					ರಿ	
			ಬ	ಣ್ಣ	ದ	ಹೆ	ಜ್ಜೆ			
	ಜಾ					ಣ್ಣೆ		ಬ		ಮೀ
ಮಿ	ನು	ಗು	ತಾ	ರೆ		ನ	ಯ	ನ	ತಾ	ರಾ
ಥು			ರಾ			ಸೇ				ಜಾ
ನ		ಮೂ	ಗ	ನ	ಸೇ	ಡು		ಟೋ		ಸ್ಮಿ
			ಣ				ಹ	ನಿ	ಮೂ	ನ್

ವಿಜೇತರು: ಬಾಲರಾಜ್, ನಂ.16, 3ನೇ ಮೇನ್, ಗೋಕುಲಂ, ಮೈಸೂರು

ವಿಳಾಸ: 'ಸಿನಿಬಂಧ' ವಿಭಾಗ, 'ಮೈಸೂರು ಮಿತ್ರ' ದಿನಪತ್ರಿಕೆ, ಬನ್ನಿಮಂಟಪ, ಮೈಸೂರು-570 015

ಈ ವಾರ 'ಉತ್ತರ'ದ ಜೊತೆಗೆ 'ಅಭ್ಯಂಜನ'



ಕನ್ನಡಿಗರಿಗೆ ಅಮೃತವರ್ಷಿಣಿಯಂಥ ಹಿಟ್ ಸಿನಿಮಾ ನೀಡಿದ ದಿನೇಶ್‌ಬಾಬು ನಿರ್ದೇಶನದ 2 ವಿಭಿನ್ನ ಜಾನರ್ ಚಿತ್ರಗಳು ಈ ವಾರ ತೆರೆಕಾಣುತ್ತಿವೆ, ಕೋರ್ಟ್‌ರೂಂ ಡ್ರಾಮಾ ಕಥಾಹಂದರ ಒಳಗೊಂಡ 'ಉತ್ತರ' ಹಾಗೂ 'ಎಣ್ಣೆ ಸ್ನಾನ' ಮತ್ತು ದಯಾಮರಣದ ಕಾನ್ಸೆಪ್ಟ್ ಒಳಗೊಂಡ 'ಅಭ್ಯಂಜನ'. ಈ ಎರಡೂ ಚಿತ್ರಗಳ ಟ್ರೈಲರ್‌ನ್ನು ಇತ್ತೀಚೆಗೆ ರಾಜ್ ಪುತ್ರಿ ಲಕ್ಷ್ಮಿಗೋವಿಂದರಾಜ್ ಬಿಡುಗಡೆ ಮಾಡಿದರು. ಒಬ್ಬರೇ ನಿರ್ದೇಶಕರ, ಒಂದೇ ಭಾಷೆಯ 2 ಚಿತ್ರಗಳು ಒಂದೇ ದಿನ ಬಿಡುಗಡೆಯಾಗುತ್ತಿರುವುದು ಭಾರತೀಯ ಚಿತ್ರರಂಗದಲ್ಲೇ ಹೊಸ ದಾಖಲೆಯಾಗಿದೆ.

ಡಾ.ರಾಜಕುಮಾರ್, ಎಂಜಿಆರ್, ವಿಷ್ಣು ಸೇರಿದಂತೆ ಬಹುತೇಕ ಸ್ಟಾರ್‌ಗಳಿಗೆ ಕೇಶವಿನ್ಯಾಸ ಮಾಡಿರುವ ನಾಗೇಶ್ವರರಾವ್ ಅವರು ಈ ಚಿತ್ರಗಳನ್ನು ನಿರ್ಮಿಸಿದ್ದಾರೆ. ಜತೆಗೆ ಚಿಕ್ಕ ಪಾತ್ರವನ್ನೂ ನಿರ್ವಹಿಸಿದ್ದಾರೆ, 'ಉತ್ತರ' ಚಿತ್ರದಲ್ಲಿ ನಟಿ ತಾರಾ ನ್ಯಾಯಾಧೀಶೆಯಾಗಿ ಕಾಣಿಸಿಕೊಂಡಿದ್ದಾರೆ. ಕೌಟಂಬಿಕ ಮೌಲ್ಯಗಳು ಹಾಗೂ ಕಾನೂನಿನಡಿಯಲ್ಲಿ ಪಾಲಿಸಲೇಬೇಕಾದ ನಿಯಮಗಳ ಮಧ್ಯೆ ಇರುವ ಸಣ್ಣ ಎಳೆಯನ್ನು ಕಾನೂನು ಬದ್ಧವಾಗಿ ಜನರಿಗೆ ಹೇಗೆ ಹೇಳಬಹುದು ಎಂಬುದನ್ನು ಅರ್ಥಪೂರ್ಣವಾಗಿ 'ಉತ್ತರ' ಚಿತ್ರದ ಮೂಲಕ ನಿರ್ದೇಶಕರು ಹೇಳಿದ್ದಾರೆ. ಇಂಥ ಕೇಸ್ ತನ್ನ ಮುಂದೆ ಬಂದಾಗ ಆಕೆ ಅದನ್ನು ಯಾವ ರೀತಿ ನಿಭಾಯಿಸಬಲ್ಲಳು ಎಂಬುದನ್ನು ತುಂಬಾ ಚೆನ್ನಾಗಿ ನಿರೂಪಿಸಿದ್ದಾರೆ ಎಂದವರು ಹೇಳಿದರು. ನಾರಾಯಣಸ್ವಾಮಿ, ಸಂಪ್ರತಿ ಆಳ್ವ, ಅಶ್ವಿನಿಗೌಡ, ಅರ್ಜುನ್ ಚೌಹಾಣ್, ನಿಧಿ ಚಕ್ರವರ್ತಿ ಚಿತ್ರದ ಇತರೆ ಪಾತ್ರಗಳಲ್ಲಿ ನಟಿಸಿದ್ದಾರೆ.

ತಮಿಳುನಾಡಿನ ಕೆಲ ಗ್ರಾಮೀಣ ಕುಟುಂಬಗಳಲ್ಲಿ ಅಭ್ಯಂಜನಸ್ನಾನ ಪದ್ಧತಿ ಇಂದಿಗೂ ಚಾಲ್ತಿಯಲ್ಲಿದೆ. ವೃದ್ಧರು ಅನಾರೋಗ್ಯಪೀಡಿತರಾದಲ್ಲಿ, ಅವರನ್ನು ನೋಡಿಕೊಳ್ಳಲು ಕಷ್ಟವಾದರೆ, ಅಂಥವರನ್ನು ಅಭ್ಯಂಜನ ಸ್ನಾನದ ಮೂಲಕ ದಯಾಮರಣ ಕಲ್ಪಿಸುತ್ತಾರೆ. ಈ ಕಥೆಯಲ್ಲಿ ಕರ್ನಾಟಕ ಮೂಲದ ದಂಪತಿಗಳು ಆ ಭಾಗದಲ್ಲಿ ವಾಸಿಸುತ್ತಿದ್ದು, ಇಂತಹ ಸಂದರ್ಭವನ್ನು ಹೇಗೆ ಎದುರಿಸುತ್ತಾರೆ ಎಂದು ಈ ಚಿತ್ರದಲ್ಲಿ ಹೇಳಲಾಗಿದೆ. ವೃದ್ಧನಾಗಿ ಕರಿಸುಬ್ಬು ಅಲ್ಲದೆ ಅಪೂರ್ವ ಭಾರದ್ವಾಜ್ ಈ ಚಿತ್ರದಲ್ಲಿ ನಟಿಸಿದ್ದಾರೆ. ಡಾ.ಸಿ.ಮಹಾರಾಜ್ ಅವರ ಸಂಗೀತ, ಈಶ್ವರ್ ಅವರ ಸಂಕಲನ ಈ ಚಿತ್ರಕ್ಕಿದೆ.

'ನಮ್ಮ ರೇಂಜ್ ರೋವರ್' ಸುತ್ತ ಸಸ್ಪೆನ್ಸ್ ಥ್ರಿಲ್ಲರ್ ಕಥಾನಕ...



ಸಸ್ಪೆನ್ಸ್, ಥ್ರಿಲ್ಲರ್ ಕಥಾಹಂದರ ಇಟ್ಟುಕೊಂಡು ಓ.ಎಸ್. ಆರ್.ಕುಮಾರ್ 'ನಮ್ಮ ರೇಂಜ್ ರೋವರ್' ಚಿತ್ರಕ್ಕೆ ಆಕ್ಷನ್ ಕಟ್ ಹೇಳಿದ್ದಾರೆ. ಡಾ॥ಮೌಲಾ ಶರೀಫ್ ಅವರು ನಿರ್ಮಿಸಿರುವ ಈ ಚಿತ್ರದ ಟೀಸರನ್ನು ಕೂಡಲ ಸಂಗಮದ ಸಂಗಮಾನಂದ ಸ್ವಾಮಿಗಳು ಬಿಡುಗಡೆ ಮಾಡಿದರು. ಈ ವೇಳೆ ನಿರ್ದೇಶಕ ಕುಮಾರ್ ಮಾತನಾಡುತ್ತ ಪ್ರತಿಷ್ಠಿತ ಕಾರೊಂದರ ಹೆಸರಿಟ್ಟುಕೊಂಡು ಏಕೆ ಈ ಚಿತ್ರ ಮಾಡಿದ್ದೇವೆ ಎನ್ನುವುದು ಸಿನಿಮಾ ನೋಡಿದಾಗ ತಿಳಿಯುತ್ತೆ. ಎಮೋಷನ್ ಜತೆಗೊಂದು ಲವ್‌ಸ್ಟೋರಿ ಕೂಡ ಚಿತ್ರದಲ್ಲಿದೆ. ಬೆಂಗಳೂರು, ಮಂಗಳೂರು, ಹೈದರಾಬಾದ್‌ನಲ್ಲಿ ಚಿತ್ರೀಕರಣ ಮಾಡಿದ್ದೇವೆ. ಸತ್ಯಸೋಮೇಶ್ ಹಾಡುಗಳಿಗೆ ಸಂಗೀತ ನೀಡಿದ್ದಾರೆ. ಆಟ ಸಂದೀಪ್ ಈ ಚಿತ್ರದಲ್ಲಿ ನಾಯಕನಾಗಿದ್ದು, ರಾಜಸ್ಥಾನದ ಮೇಘನಾ ರಜಪೂತ್ ನಾಯಕಿ ಪಾತ್ರ ನಿರ್ವಹಿಸಿದ್ದಾರೆ. ಕನ್ನಡದಲ್ಲೇ ತಯಾರಾಗಿರುವ ಈ ಚಿತ್ರವನ್ನು ತೆಲುಗಿಗೆ ಡಬ್ ಮಾಡುವ ಯೋಚನೆಯಿದೆ ಎಂದರು.

ನಿರ್ಮಾಪಕ ಮೌಲಾ ಶರೀಫ್ ಮಾತನಾಡಿ ಚಿಕ್ಕಂದಿನಿಂದ ನಾನು ರಾಜಕುಮಾರ್ ಅವರ ಚಿತ್ರಗಳನ್ನು ನೋಡಿಕೊಂಡೇ ಬೆಳೆದವನು. ಈ ಹಿಂದೆ 'ಹೀರೋ ನಾನಲ್ಲ', 'ನಮ್ಮೂರ ಅಳಿಯ' ಚಿತ್ರಗಳನ್ನು ನಿರ್ಮಿಸಿದ್ದೆ. ನಿರ್ದೇಶಕರು ಹೇಳಿದ ಈ ಕಥೆಯಲ್ಲಿನ ಕಂಟೆಂಟ್ ನನಗೆ ಬಹಳ ಇಷ್ಟವಾಯಿತು. ಹಾಗಾಗಿ ಚಿತ್ರ ನಿರ್ಮಾಣಕ್ಕೆ ಕೈಹಾಕಿದೆ. ಮುಂದೆಯೂ ಚಿತ್ರಗಳನ್ನು ನಿರ್ಮಿಸುವುದಾಗಿ ಹೇಳಿದರು. ನಾಯಕಿ ಮೇಘನಾ ರಜಪೂತ್ ಮಾತನಾಡಿ ಜಾಬ್ ಮಾಡಿಕೊಂಡಿರುವ ಸಿಂಪಲ್ ಹುಡುಗಿ, ಒಂದು ಘಟನೆ ನಡೆದ ಮೇಲೆ ಆಕೆಯ ಲೈಫೇ ಬದಲಾಗುತ್ತೆ ಎಂದು ಹೇಳಿದರು. ಅರವಿಂದ್‌ರಾವ್, ಬ್ಯಾಂಕ್ ಜನಾರ್ಧನ್, ಯತಿರಾಜ್, ಸನತ್ ಪ್ರಮುಖ ಪಾತ್ರಗಳಲ್ಲಿದ್ದಾರೆ. ರಾಜಾ ಶಿವಶಂಕರ್ ಅವರ ಛಾಯಾಗ್ರಹಣ, ಗುರುಪ್ರಸಾದ್ ಅವರ ಸಂಕಲನ ಈ ಚಿತ್ರಕ್ಕಿದೆ.

ಮೈಸೂರು ಮಿತ್ರ ಶುಕ್ರವಾರ 12 ಜೂನ್ 2026

ಹುಣಸೂರಲ್ಲಿ ಬೋನಿಗೆ ಬಿದ್ದ ಚಿರತೆ



ಹುಣಸೂರು, ಜೂ.11– ನಗರದ ಬಡಾವಣೆಯೊಂದರಲ್ಲಿ ನಾಯಿ ಬೇಟೆಯಾಡಿದ್ದ ಚಿರತೆ ಬೋನಿಗೆ ಬಿದ್ದಿರುವ ಘಟನೆ ಬುಧವಾರ ನಡೆದಿದೆ.

ನಗರದ ಬಸ್ ಡಿಪೋ ಹಿಂಭಾಗದ ಲಕ್ಷ್ಮೀ ಬಡಾವಣೆ ನಿವಾಸಿ ಜಗದೀಶ್ ಅವರ ಮನೆ ಬಳಿ ನಾಯಿ ಬೇಟೆಯಾಡಿದ್ದ ಚಿರತೆ ಸೆರೆಗಾಗಿ ಇರಿಸಿದ್ದ ಬೋನ್‌ನಲ್ಲಿ ನಾಯಿ ಬೇಟೆಯಾಡಲು ಬಂದ ಚಿರತೆ ಸೆರೆಯಾಗಿದೆ. ಸುಮಾರು 2 ರಿಂದ 3 ವರ್ಷದ ಹೆಣ್ಣು ಚಿರತೆ ಇದಾಗಿದ್ದು, ಚಿರತೆ ವಶಕ್ಕೆ ಪಡೆದು ನಂತರ ಕಾಡಿಗೆ ಬಿಡಲಾಗಿದೆ ಎಂದು ಪ್ರಾದೇಶಿಕ ಅರಣ್ಯ ವಿಭಾಗದ ಆರ್‌ಎಫ್‌ಓ ಸಂತೋಷ್ ಹೂಗಾರ್ ತಿಳಿಸಿದ್ದಾರೆ. ಕಾರ್ಯಾಚರಣೆಯಲ್ಲಿ ಡಿಆರ್‌ಎಫ್‌ಓ ಮಂಜುನಾಥ್, ಬೀಟ್ ಫಾರೆಸ್ಟರ್ ಶಿವಪ್ಪ ಗುಡ್ಡರಾದವರ್ ಹಾಗೂ ಸಿಬ್ಬಂದಿ ಭಾಗವಹಿಸಿದ್ದರು.

ಕಾಡು ಮೊಲ ಬೇಟೆ: ಆರೋಪಿ ಬಂಧನ



ಹುಣಸೂರು, ಜೂ.11– ಉರುಳು ಹಾಕಿ ಕಾಡು ಮೊಲಗಳನ್ನು ಬೇಟೆಯಾಡಿ, ಮಾರಾಟ ಮಾಡಲು ಯತ್ನಿಸುತ್ತಿದ್ದ ವೇಳೆ ಆರೋಪಿಯನ್ನು ಅರಣ್ಯ ಇಲಾಖೆ ಅಧಿಕಾರಿಗಳು ಬುಧವಾರ ಬಂಧಿಸಿದ್ದಾರೆ.

ತಾಲೂಕಿನ ಎರಡನೇ ಪಕ್ಷಿರಾಜಪುರದ ನಿವಾಸಿ ರಿನೇಶ್ ಬಂಧಿತ ಆರೋಪಿ. ಈತನಿಂದ ಬೇಟೆಯಾಡಿದ್ದ 5 ಮೊಲಗಳನ್ನು ವಶಪಡಿಸಿಕೊಳ್ಳಲಾಗಿದೆ.

ಖಚಿತ ಮಾಹಿತಿ ಮೇರೆಗೆ ಹುಣಸೂರು ಪ್ರಾದೇಶಿಕ ಅರಣ್ಯ ವಿಭಾಗದ ಡಿಸಿಎಫ್ ಕಿರುಬನಂತನ್ ಮಾರ್ಗದರ್ಶನದಲ್ಲಿ ಆರ್‌ಎಫ್‌ಓ ಸಂತೋಷ್ ಹೂಗಾರ್ ನೇತೃತ್ವದ ತಂಡ ಹುಣಸೂರು–ಹೆಚ್.ಡಿ.ಕೋಟೆ ಮುಖ್ಯ ರಸ್ತೆಯ ಎರಡನೇ ಪಕ್ಷಿರಾಜಪುರದ ಬಳಿ ರಿನೇಶ್ ಮೊಲಗಳನ್ನು ಮಾರಾಟ ಮಾಡಲು ಸುತ್ತಾಡುತ್ತಿದ್ದ ವೇಳೆ ದಾಳಿ ನಡೆಸಿ ಆರೋಪಿ ಬಂಧಿಸಿ ಅರಣ್ಯ ಕಾಯ್ದೆಯಡಿ ಪ್ರಕರಣ ದಾಖಲಿಸಿ, ನ್ಯಾಯಾಂಗ ಬಂಧನಕ್ಕೊಪ್ಪಿಸಿದ್ದಾರೆ.

ಈ ವೇಳೆ ಗಸ್ತು ಅರಣ್ಯ ಪಾಲಕರಾದ ಮಂಜುನಾಥ್, ಉದಯಕುಮಾರ್, ಶಿವಪ್ಪ ಗುಡ್ಡರಾದವರ್, ಸಿದ್ದಪ್ಪ ಹೊಸಮನಿ, ಅರಣ್ಯ ವೀಕ್ಷಕರಾದ ಶಶಿಕುಮಾರ್, ರವಿ, ಕುಮಾರ್, ಚಾಲಕ ಮನೋಹರ್ ಕಾರ್ಯಾಚರಣೆಯಲ್ಲಿದ್ದರು.

ಪ್ರತ್ಯೇಕ ಪ್ರಕರಣಗಳಲ್ಲಿ ಲಕ್ಷಾಂತರ ರೂ. ಚಿನ್ನಾಭರಣ, ಹುಂಡಿ ಹಣ ಕಳ್ಳತನ

ಹುಣಸೂರು, ಜೂ.11– ಮೂರು ಪ್ರತ್ಯೇಕ ಪ್ರಕರಣಗಳಲ್ಲಿ ಲಕ್ಷಾಂತರ ರೂ. ಚಿನ್ನಾಭರಣ, ಹುಂಡಿ ಹಣ ಕಳ್ಳತನ ಮಾಡಿರುವ ಘಟನೆ ನಗರ ಸೇರಿದಂತೆ ಗ್ರಾಮಾಂತರ ಪ್ರದೇಶದಲ್ಲಿ ಗುರುವಾರ ನಡೆದಿದೆ.

ತಾಲೂಕಿನ ಹೆಬ್ಬಾಳ ಗ್ರಾಮದ ಸಣ್ಣೇಗೌಡರ ಮನೆಯಲ್ಲಿ ಹಾಡಹಗಲೇ 150 ಗ್ರಾಂ ಚಿನ್ನಾಭರಣ ಹಾಗೂ 5 ಸಾವಿರ ರೂ. ಕಳ್ಳತನ ಮಾಡಲಾಗಿದೆ. ಸಣ್ಣೇಗೌಡರು ಕುಟುಂಬ ಸಮೇತರಾಗಿ ಪಿರಿಯಾಪಟ್ಟಣಕ್ಕೆ ತೆರಳಿದ್ದರು. ಈ ವೇಳೆ ಮನೆ ಬೀಗ ಮುರಿದು ಒಳ ನುಗ್ಗಿರುವ ದುಷ್ಕರ್ಮಿಗಳು ಕಳ್ಳತನ ಮಾಡಿದ್ದಾರೆಂದು ಗ್ರಾಮಾಂತರ ಠಾಣೆಯಲ್ಲಿ ದೂರು ದಾಖಲಿಸಿದ್ದಾರೆ.

ನಗರದ ಮಾರಿಗುಡಿ ಬೀದಿ ಕೋಲನೂಲು ಮಾರಮ್ಮ ದೇವಾಲಯದ ಬೀಗ ಒಡೆದಿರುವ ಕಳ್ಳರು, ದೇವರ ಮೇಲಿದ್ದ ಚಿನ್ನದ ತಾಳಿ ಹಾಗೂ ಗೋಲಕ ಒಡೆದು ಹಣ ದೋಚಿದ್ದಾರೆ. ನಗರದ ಬಂಡಿ ಕಾಳಮ್ಮ ದೇವಾಲಯದ ಬಾಗಿಲ ಬೀಗ ಮುರಿದು ಒಳಹೊಕ್ಕ ಕಳ್ಳರು, ದೇವರ ಮೇಲಿದ್ದ ಚಿನ್ನದ ಸರ, ತಾಳಿಗಳನ್ನು ಕಳ್ಳತನ ಮಾಡಿ, ಗೋಲಕ ಒಡೆದು ಹಣ ದೋಚಿ ಪರಾರಿಯಾಗಿದ್ದಾರೆ. ಈ ಸಂಬಂಧ ಎರಡೂ ದೇವಾಲಯಗಳ ಮುಖ್ಯಸ್ಥರು ಹುಣಸೂರು ನಗರ ಠಾಣೆಯಲ್ಲಿ ದೂರು ದಾಖಲಿಸಿದ್ದು, ಪೊಲೀಸರು ಮುಂದಿನ ಕ್ರಮ ಕೈಗೊಂಡಿದ್ದಾರೆ.

ಕಬಿನಿ ಯೋಜನೆ ಮಟ್ಟದ ನೀರು ಬಳಕೆದಾರರ ಸಹಕಾರ ಸಂಘ ಮಹಾ ಮಂಡಲ

ಅಧ್ಯಕ್ಷರ ವಿರುದ್ಧದ ಅವಿಶ್ವಾಸ ನಿರ್ಣಯಕ್ಕೆ ಸೋಲು

ಅಭಿವೃದ್ಧಿ ಕಾರ್ಯಗಳೇ ನನ್ನ ಕೈ ಹಿಡಿದಿದೆ: ಅಧ್ಯಕ್ಷ ಮಹದೇವಪ್ಪ



ಅಧ್ಯಕ್ಷ ಚೌಹಳ್ಳಿ ಮಹದೇವಪ್ಪ ಅವರನ್ನು ಬೆಂಬಲಿಗರು ಅಭಿನಂದಿಸಿದರು.

ತಿ.ನರಸೀಪುರ, ಜೂ.11– ಕಬಿನಿ ಯೋಜನೆ ಮಟ್ಟದ ನೀರು ಬಳಕೆದಾರರ ಸಹಕಾರ ಸಂಘ ಮಹಾ ಮಂಡಲದ ಅಧ್ಯಕ್ಷರ ವಿರುದ್ಧ ಕಾಂಗ್ರೆಸ್ ಬೆಂಬಲಿತ ಬಂಡಾಯ ಸದಸ್ಯರು ಮಂಡಿಸಿದ್ದ ಅವಿಶ್ವಾಸ ನಿರ್ಣಯಕ್ಕೆ ಸೋಲಾಗಿದ್ದು, ನಿರ್ಣಯದ ಹಿಂದೆ ಇದ್ದ ಸದಸ್ಯರಿಗೆ ತೀವ್ರ ಮುಖಭಂಗವಾಗಿದೆ ಎಂದು ಮಹಾ ಮಂಡಲದ ಅಧ್ಯಕ್ಷ ಮಹದೇವಪ್ಪ ತಿಳಿಸಿದರು.

ತಮ್ಮ ವಿರುದ್ಧದ ಅವಿಶ್ವಾಸ ನಿರ್ಣಯಕ್ಕೆ ಸೋಲುಂಟಾದ ಹಿನ್ನೆಲೆಯಲ್ಲಿ ಗೆಲುವಿನ ಸಂತಸದಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಕೆಲವರು ವೈಯಕ್ತಿಕ ಹಿತಾಸಕ್ತಿ ಮತ್ತು ರಾಜಕೀಯ ಉದ್ದೇಶಗಳಿಗಾಗಿ ಅವಿಶ್ವಾಸ ನಿರ್ಣಯಕ್ಕೆ ಮುಂದಾಗಿದ್ದರು. ಆದರೆ ಮಹಾಮಂಡಲದ ಅಭಿವೃದ್ಧಿ ಕಾರ್ಯಗಳು, ರೈತರ ಪರ ಕೈಗೊಂಡಿರುವ ಯೋಜನೆಗಳು ಹಾಗೂ ನೀರು ಬಳಕೆದಾರರ ಹಿತಾಸಕ್ತಿ ಗಮನಿಸಿದ ಸದಸ್ಯರು ನಿರ್ಣಯ ಬೆಂಬಲಿಸದೇ ಸಂಘದ ಪರ ನಿಂತಿದ್ದಾರೆ ಎಂದರು.

ಕಳೆದ ಕೆಲವು ವರ್ಷಗಳಿಂದ ಮಹಾ ಮಂಡಲದಿಂದ ನೀರಾವರಿ ವ್ಯವಸ್ಥೆ ಸುಧಾರಣೆ, ಕಾಲುವೆಗಳ ನಿರ್ವಹಣೆ, ರೈತರಿಗೆ ಅಗತ್ಯ ಮಾಹಿತಿ ಒದಗಿಸುವುದು ಸೇರಿದಂತೆ ಹಲವು ಅಭಿವೃದ್ಧಿ ಕಾರ್ಯ ಕೈಗೊಳ್ಳಲಾಗಿದೆ. ಇದರ ಫಲವಾಗಿ ರೈತ ಸಮುದಾಯದಲ್ಲಿ ಮಹಾ ಮಂಡಲದ ಮೇಲೆ ವಿಶ್ವಾಸ ಹೆಚ್ಚಾಗಿದ್ದು, ಅದೇ ವಿಶ್ವಾಸ ಅವಿಶ್ವಾಸ ನಿರ್ಣಯದ ಸೋಲಿನ ಮೂಲಕ ಮತ್ತೊಮ್ಮೆ ವ್ಯಕ್ತವಾಗಿದೆ. ಕಾಂಗ್ರೆಸ್‌ನ ಚಂದ್ರಧರ ಎಂಬಾತ ಪಕ್ಷ ವಿರೋಧಿ ಚಟುವಟಿಕೆ ನಡೆಸುತ್ತಿದ್ದು, ಪಕ್ಷ ಅವರನ್ನು ಕಡೆಗಾಣಿಸಬೇಕು ಎಂದು ಮನವಿ ಮಾಡಿದರು.

ಅವಿಶ್ವಾಸ ನಿರ್ಣಯದ ಮೂಲಕ ಸಂಘದ ಆಡಳಿತಕ್ಕೆ ಅಡ್ಡಿ ಪಡಿಸಲು ಯತ್ನಿಸಿದವರಿಗೆ ಸದಸ್ಯರು ತಕ್ಕ ಉತ್ತರ ನೀಡಿದ್ದಾರೆ. ಅಭಿವೃದ್ಧಿ ಕಾರ್ಯ ಮುಂದುವರಿಸುವ ನಿಟ್ಟಿನಲ್ಲಿ ಎಲ್ಲಾ ಸದಸ್ಯರನ್ನು ವಿಶ್ವಾಸಕ್ಕೆ ತೆಗೆದುಕೊಂಡು ಕೆಲಸ ಮಾಡುವುದಾಗಿ ಮಹದೇವಪ್ಪ ತಿಳಿಸಿದರು.

ಅವಿಶ್ವಾಸ ಪತ್ರಕ್ಕೆ ಸಹಿ ಹಾಕಿದ್ದವರೇ ಗೈರು: ಮಹಾಮಂಡಲ ಆಡಳಿತ ಮಂಡಳಿ ವಿರುದ್ಧ ಅಸಮಾಧಾನ ವ್ಯಕ್ತಪಡಿಸಿದ್ದ ಕೆಲ ನಿರ್ದೇಶಕರು ಅಧ್ಯಕ್ಷರ ವಿರುದ್ಧ ಅವಿಶ್ವಾಸ ನಿರ್ಣಯಕ್ಕೆ ಮುಂದಾಗಿದ್ದರು. ಸಹಕಾರ ಸಂಘದ ಒಟ್ಟು 12 ನಿರ್ದೇಶಕರ ಪೈಕಿ 9 ಮಂದಿ ಅವಿಶ್ವಾಸ ನಿರ್ಣಯಕ್ಕೆ ಸಹಿ ಹಾಕಿದ್ದ ಹಿನ್ನೆಲೆಯಲ್ಲಿ ಅಧ್ಯಕ್ಷರು ಹಾಗೂ ಉಪಾಧ್ಯಕ್ಷರ ಬದಲಾವಣೆ ಖಚಿತ ಎನ್ನುವ ಮಾತುಗಳು ಕೇಳಿ ಬಂದಿದ್ದವು. ಆದರೆ ಅಂತಿಮವಾಗಿ ಸಹಕಾರ ಸಂಘದ ಮೈಸೂರು ಕಚೇರಿಯಲ್ಲಿ ನಡೆದ ಸಭೆಯಲ್ಲಿ ನಿರ್ಣಯಕ್ಕೆ ಸಹಿ ಹಾಕಿದ್ದ 9 ಮಂದಿ ಗೈರಾಗುವ ಮೂಲಕ ಅಗತ್ಯ ಬೆಂಬಲ ದೊರೆಯದೇ ಅದು ಸೋಲನುಭವಿಸಿದೆ.

ಕಾಂಗ್ರೆಸ್ ಬಂಡಾಯ ಸದಸ್ಯರಾಗಿರುವ ತೊಟ್ಟವಾಡಿ ಶಿವಕುಮಾರ್ ಹಾಗೂ ಪುಟ್ಟಸ್ವಾಮಿ ಅವರು ಕೆಡಿಪಿ ಸದಸ್ಯ ಚಂದ್ರಧರ ಅವರ ಮುಖಂಡತ್ವದಲ್ಲಿ ಬಿಜೆಪಿ ಸದಸ್ಯರ ಬೆಂಬಲದೊಂದಿಗೆ ಅಧ್ಯಕ್ಷ ಚೌಹಳ್ಳಿ ಮಹದೇವಪ್ಪ ಮತ್ತು ಉಪಾಧ್ಯಕ್ಷ ಬಿ.ಸಿ.ಬಸಪ್ಪ ವಿರುದ್ಧ ಅವಿಶ್ವಾಸ ನಿರ್ಣಯ ಮಂಡಿಸಿದ್ದರು. ಆದರೆ ಸಹಿ ಮಾಡಿದ ಸದಸ್ಯರೇ ಸಭೆಗೆ ಗೈರು ಹಾಜರಾದ ಕಾರಣ ಅವರ ರಾಜಕೀಯ ತಂತ್ರಕ್ಕೆ ಹಿನ್ನಡೆಯಾಗಿ ಕಾಂಗ್ರೆಸ್ ಹಿರಿಯ ಮುಖಂಡ ಮಾಡ್ರಹಳ್ಳಿ ಶಿವಮೂರ್ತಿ ಅವರ ಬೆಂಬಲಿತರಾಗಿರುವ ಎಸ್.ಮಹದೇವಪ್ಪ ನೇತೃತ್ವದ ತಂಡಕ್ಕೆ ಮಹತ್ವದ ಗೆಲುವು ದೊರೆಯಿತು. ಮತ್ತೊಂದೆಡೆ ಸ್ವಪಕ್ಷದವರ ವಿರುದ್ಧವೇ ಅವಿಶ್ವಾಸ ನಿರ್ಣಯ ಮಂಡಿಸಿ ಅದನ್ನು ಯಶಸ್ವಿಗೊಳಿಸಲು ವಿಫಲರಾದ ಶಿವಕುಮಾರ್, ಪುಟ್ಟಸ್ವಾಮಿ ಅವರಿಗೆ ರಾಜಕೀಯ ಹಿನ್ನಡೆಯಾಗಿರುವುದು ಚರ್ಚೆಗೆ ಗ್ರಾಸವಾಗಿದೆ.

ಸಭೆಯ ಬಳಿಕ ಚುನಾವಣಾಧಿಕಾರಿ ಮನೋಜ್ ಕುಮಾರ್ ಮಾತನಾಡಿ, ಅವಿಶ್ವಾಸ ನಿರ್ಣಯಕ್ಕೆ ಅಗತ್ಯ ಪ್ರಕ್ರಿಯೆ ಪೂರ್ಣಗೊಳ್ಳದ ಕಾರಣ ಅದು ವಿಫಲಗೊಂಡಿದ್ದು, ಮಹದೇವಪ್ಪ ಅವರು ಅಧ್ಯಕ್ಷರಾಗಿ ಮುಂದುವರಿಯಲಿದ್ದಾರೆ ಎಂದು ಘೋಷಿಸಿದರು.

ಈ ವೇಳೆ ನಿರ್ದೇಶಕರಾದ ಶಿವಮೂರ್ತಿ, ಪಿ. ಮಹದೇವಸ್ವಾಮಿ, ಮಲ್ಲೇಶಪ್ಪ ಮಲ್ಲಿಕಾರ್ಜುನಸ್ವಾಮಿ, ಮುಖಂಡರಾದ ಮಹದೇವಯ್ಯ, ನಾಗರಾಜು, ಪುಟ್ಟಬುದ್ಧಿ, ಬಿ.ಎಂ.ರಾಮು, ಕಾರ್ ಮಲ್ಲಪ್ಪ ಹಾಜರಿದ್ದರು.

ವಿದ್ಯುತ್ ಖಾಸಗೀಕರಣ ವಿರೋಧಿಸಿ ರೈತರ ಪ್ರತಿಭಟನೆ



ವಿದ್ಯುತ್ ಖಾಸಗೀಕರಣ ವಿರೋಧಿಸಿ ಪ್ರತಿಭಟನೆ ನಡೆಸಲಾಯಿತು.

ನಂಜನಗೂಡು, ಜೂ.11– ವಿದ್ಯುತ್ ಖಾಸಗೀಕರಣ ಮಾಡುತ್ತಿರುವ ಸರ್ಕಾರದ ನಿಲುವು ವಿರೋಧಿಸಿ ನಗರದಲ್ಲಿ ಕರ್ನಾಟಕ ರಾಜ್ಯ ರೈತ ಸಂಘ ಮತ್ತು ಹಸಿರು ಸೇನೆಯಿಂದ ಪ್ರತಿಭಟನೆ ನಡೆಸಲಾಯಿತು.

ನಗರದ ಚೆಸ್ಕಾಂ ವಿಭಾಗೀಯ ಕಚೇರಿ ಎದುರು ಜಮಾಯಿಸಿದ ರೈತ ಸಂಘದ ಪದಾಧಿಕಾರಿಗಳು ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ವಿರುದ್ಧ ಘೋಷಣೆ ಕೂಗಿ ಆಕ್ರೋಶ ವ್ಯಕ್ತಪಡಿಸಿದರು.

ಕರ್ನಾಟಕ ರಾಜ್ಯ ರೈತ ಸಂಘ ಮತ್ತು ಹಸಿರು ಸೇನೆ ರಾಜ್ಯ ಕಾರ್ಯಾಧ್ಯಕ್ಷ ಟಿ.ಆರ್.ವಿದ್ಯಾಸಾಗರ್ ಮಾತನಾಡಿ, ಸರ್ಕಾರದ ಹಿಡಿತದಲ್ಲಿರುವ ಚೆಸ್ಕಾಂ ಕಂಪನಿಗಳು, ಲಕ್ಷಾಂತರ ರೈತರ ಪಂಪ್‌ಸೆಟ್‌ಗಳಿಗೆ ಉಚಿತವಾಗಿ ವಿದ್ಯುತ್ ನೀಡುತ್ತಿವೆ. ವಿದ್ಯುತ್ ಖಾಸಗೀಕರಣವಾದರೆ ವಿದ್ಯುತ್ ಅನ್ನು ಹಣಕ್ಕೆ ಮಾರಾಟ ಮಾಡಿ ಲಾಭ ಮಾಡಿಕೊಳ್ಳುತ್ತಾರೆ. ಜೊತೆಗೆ ಯುವಕ–ಯುವತಿಯರಿಗೆ ಸರ್ಕಾರಿ ಉದ್ಯೋಗದ ಲಭ್ಯತೆ ಇಲ್ಲವಾಗುತ್ತದೆ. ಆದ್ದರಿಂದ ಜನಸೇವಾ ಚುಟುವಟಿಕೆ ಸಂಸ್ಥೆಗಳಾದ ವಿದ್ಯುಚ್ಛಕ್ತಿ, ನೀರು ಹಾಗೂ ಲೋಕೋಪಯೋಗಿ ಇಲಾಖೆಯಂತಹ ಸಂಸ್ಥೆಗಳು ಸರ್ಕಾರದಿಂದಲೇ ನಿರ್ವಹಿಸಬೇಕು ಎಂದು ಡಾ. ಬಿ.ಆರ್.ಅಂಬೇಡ್ಕರ್ ಹೇಳಿದ್ದರು. ಆದರೆ ಸರ್ಕಾರ 15 ಜಿಲ್ಲೆಗಳ ವಿದ್ಯುತ್ ಸರಬರಾಜು ಘಟಕಗಳನ್ನು ಖಾಸಗೀಕರಣ ಮಾಡಲು ಹುನ್ನಾರ ನಡೆಸಿದೆ. ಸಾರ್ವಜನಿಕ ಹಿತದೃಷ್ಟಿಯಿಂದ ಟಾಟಾ ಪವರ್ ಕಂಪನಿ ಲಿಮಿಟೆಡ್ ಸಲ್ಲಿಸಿರುವ ಅರ್ಜಿ ಪುರಸ್ಕರಿಸದೆ ತಿರಸ್ಕರಿಸುವ ಮೂಲಕ, ಕೂಡಲೇ ಸರ್ಕಾರ ವಿದ್ಯುತ್ ಖಾಸಗೀಕರಣವನ್ನು ಕೈ ಬಿಡಬೇಕು ಎಂದು ಆಗ್ರಹಿಸಿದರು.

ಇದೇ ವೇಳೆ ಚೆಸ್ಕಾಂ ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್ ಅನಿಲ್ ಕುಮಾರ್ ಅವರಿಗೆ ಮನವಿ ಸಲ್ಲಿಸಲಾಯಿತು. ಪ್ರತಿಭಟನೆಯಲ್ಲಿ ರೈತ ಸಂಘದ ಜಿಲ್ಲಾಧ್ಯಕ್ಷ ಸತೀಶ್‌ರಾವ್, ರಾಜ್ಯ ಉಪಾಧ್ಯಕ್ಷ ರಘು, ತಾಲೂಕು ಅಧ್ಯಕ್ಷ ಮಹದೇವ ನಾಯಕ, ಪಟ್ಟಣ ಅಧ್ಯಕ್ಷ ಶಿವಣ್ಣ, ಉಪಾಧ್ಯಕ್ಷ ನಂಜುಂಡ, ಮಹದೇವ ನಾಯಕ, ಪ್ರಧಾನ ಕಾರ್ಯದರ್ಶಿ ದೇವರಾಜ್, ರವಿಚಂದ್ರ, ರವಿ, ಮಂಜು, ಪ್ರಕಾಶ್, ಮನು, ವೆಂಕಟೇಶ್, ಮಂಜುನಾಥ್ ಇತರರಿದ್ದರು.

ಆರೋಗ್ಯ ಸಮಸ್ಯೆ ನಿವಾರಣೆಗೆ ಆರೋಗ್ಯ ಶಿಬಿರ ಸಹಕಾರಿ



ಉಚಿತ ಆರೋಗ್ಯ ತಪಾಸಣಾ ಶಿಬಿರಕ್ಕೆ ಖ್ಯಾತ ಮೂಳೆ ತಜ್ಞ ಡಾ.ಸಾ.ರಾ.ಧನುಷ್ ಚಾಲನೆ ನೀಡಿದರು.

ಭೇರ್ಯ, ಜೂ.11– ಬದಲಾದ ಜೀವನ ಶೈಲಿ ಮತ್ತು ಒತ್ತಡದ ಬದುಕಿನ ಇಂದಿನ ದಿನಗಳಲ್ಲಿ ಜನರಲ್ಲಿ ಆರೋಗ್ಯ ಸಮಸ್ಯೆ ಹೆಚ್ಚುತ್ತಿದೆ. ಇದರ ನಿವಾರಣೆಗೆ ಆರೋಗ್ಯ ಶಿಬಿರ ಸಹಕಾರಿ ಎಂದು ಖ್ಯಾತ ಮೂಳೆ ತಜ್ಞ ಡಾ.ಸಾ.ರಾ.ಧನುಷ್ ತಿಳಿಸಿದರು.

ಸಾಲಿಗ್ರಾಮ ಪಟ್ಟಣದ ಸಾರಾ ವಸತಿ ಗೃಹದಲ್ಲಿ ಸಾ.ರಾ.ಸ್ನೇಹ ಬಳಗದಿಂದ ಹಮ್ಮಿಕೊಂಡಿದ್ದ 8ನೇ ಉಚಿತ ಆರೋಗ್ಯ ತಪಾಸಣಾ ಶಿಬಿರಕ್ಕೆ ಚಾಲನೆ ನೀಡಿ ಮಾತನಾಡಿದ ಅವರು, ಗ್ರಾಮೀಣ ಜನರ ಆರೋಗ್ಯ ಕಾಪಾಡುವ ಹಿತದೃಷ್ಟಿಯಿಂದ ಆರೋಗ್ಯ ಶಿಬಿರ ಏರ್ಪಡಿಸಲಾಗಿದೆ. ಪ್ರತಿಯೊಬ್ಬರೂ ಆರೋಗ್ಯ ಕಾಪಾಡಿಕೊಂಡು ಜೀವನ ಶೈಲಿಯನ್ನು ಸಾಧ್ಯವಾದಷ್ಟು ಬದಲಾವಣೆ ಮಾಡಿಕೊಳ್ಳುವುದು ಉತ್ತಮ ಎಂದು ಸಲಹೆ ನೀಡಿದರು.

ಗ್ರಾಮೀಣ ಜನರು ದೂರದ ಆಸ್ಪತ್ರೆಗೆ ಹೋಗಿ ಚಿಕಿತ್ಸೆ ಪಡೆಯಲಾಗದ ಸ್ಥಿತಿಯಲ್ಲಿದ್ದಾರೆ. ಹೀಗಾಗಿ ಇಂತಹ ಆರೋಗ್ಯ ತಪಾಸಣಾ ಶಿಬಿರಗಳಲ್ಲಿ ಜನರು ಆರೋಗ್ಯ ತಪಾಸಣೆ ಮಾಡಿಸಿಕೊಂಡು ಚಿಕಿತ್ಸೆ ಪಡೆಯಬಹುದಾಗಿದೆ ಎಂದರು.

ಆರೋಗ್ಯ ಇದ್ದರೆ ನಾವು ಸುಖವಾಗಿರಬಹುದು. ಕಷ್ಟಪಟ್ಟು ದುಡಿದ ಹಣವನ್ನು ಆಸತ್ರೆಗೆ ಸುರಿಯುವ ಬದಲು ಕಾಯಿಲೆ ಬರದಂತೆ ತಡೆಯುವುದು ಜಾಣತನ. ಹಾಗಾಗಿ ಕಾಯಿಲೆ ಬರುವ ಮುನ್ನವೇ ಎಚ್ಚರ ವಹಿಸಿದರೆ ಆಸ್ಪತ್ರೆ, ಗುಳಿಗೆ ಮುಂತಾದ ಕಷ್ಟಗಳಿಂದ ಪಾರಾಗಬಹುದು. ಹಳ್ಳಿಗಳಲ್ಲೂ ಜನರಿಗೆ ಆರೋಗ್ಯದ ಬಗ್ಗೆ ಅರಿವು ಮೂಡಿಸಿ ಆರೋಗ್ಯವಂತ ಸಮಾಜ ನಿರ್ಮಾಣ ಮಾಡಬೇಕಾದ ಅಗತ್ಯವಿದೆ ಎಂದು ತಿಳಿಸಿದರು.

ಈ ವೇಳೆ ಶಿಬಿರದಲ್ಲಿ ಕಿವಿ, ಮೂಗು, ಗಂಟಲು, ಮೂಳೆ, ಚರ್ಮ, ಥೈರಾಯ್ಡ್, ಮಧುಮೇಹ, ಬಿಪಿ ಸೇರಿದಂತೆ ರೋಗಿಗಳಿಗೆ ನುರಿತ ತಜ್ಞರು ತಪಾಸಣೆ ನಡೆಸಿದರು. 400ಕ್ಕೂ ಹೆಚ್ಚು ಮಂದಿ ಶಿಬಿರದ ಪ್ರಯೋಜನ ಪಡೆದುಕೊಂಡರು. ಈ ವೇಳೆ ರೋಗಿಗೆ ಔಷಧಿಗಳನ್ನು ವಿತರಣೆ ಮಾಡಲಾಯಿತು.

ಮೂರನೇ ಪುಟದಿಂದ

ಅನರ್ಹ 'ಗೃಹಲಕ್ಷ್ಮಿ' ಫಲಾನುಭವಿಗಳು!

ಮೂರು ವರ್ಷದ ಅವಧಿಯಲ್ಲಿ ಗೃಹಲಕ್ಷ್ಮಿ ಯೋಜನೆಯಡಿ ಮೈಸೂರು ಜಿಲ್ಲೆಯ ಫಲಾನುಭವಿಗಳಿಗೆ ಸುಮಾರು 402 ಕೋಟಿ ರೂಪಾಯಿಗಳನ್ನು ಪಾವತಿಸಿದೆ. ಆದರೆ ಮೃತಪಟ್ಟಿರುವ, ಜಿಎಸ್ ಟಿ ಪಾವತಿ ಮಾಡುವ ಹಾಗೂ ನಕಲಿ ಫಲಾನುಭವಿಗಳಿರುವ ಬಗ್ಗೆ ಸರ್ಕಾರಕ್ಕೆ ಸುಳಿವು ದೊರೆತಿದೆ. ಈ ಹಿನ್ನೆಲೆಯಲ್ಲಿ ಪ್ರತಿಯೊಂದು ಜಿಲ್ಲೆಯ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆಯ ನಿರ್ದೇಶಕರಿಗೆ ಕಟ್ಟುನಿಟ್ಟಿನ ಸೂಚನೆ ನೀಡಿದ ಸರ್ಕಾರ, ಅನರ್ಹ ಫಲಾನುಭವಿಗಳನ್ನು ಗುರುತಿಸುವಂತೆ ತಾಕೀತು ಮಾಡಿತ್ತು. ಅದರಂತೆ ಮೈಸೂರು ಜಿಲ್ಲೆಯ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆಯ ಉಪ ನಿರ್ದೇಶಕ ನಾಗರಾಜು ಅವರ ನೇತೃತ್ವದ ಅಧಿಕಾರಿಗಳ ತಂಡ 6.99,99 ಫಲಾನುಭವಿಗಳ ಅರ್ಹತೆಯನ್ನು ಪರಿ ಶೀಲನೆ ನಡೆಸಿತು. ಈ ಮೂಲಕ ಮೃತ ಪಟ್ಟಿರುವ 8 ಸಾವಿರ ಫಲಾನುಭವಿಗಳು, ಜಿಎಸ್‌ಟಿ ಪಾವತಿ ಮಾಡುವ 5 ಸಾವಿರ ಫಲಾನುಭವಿಗಳನ್ನು ಗುರುತಿಸಲಾಯಿತು. ಅಲ್ಲದೆ ನಕಲಿ ಫಲಾನುಭವಿಗಳನ್ನು ಕೂಡ ಗುರುತಿಸಲಾಯಿತು. ಅನರ್ಹ ಫಲಾನುಭವಿಗಳನ್ನು ಗುರುತಿ ಸುವಲ್ಲಿ ಲೋಪವಾಗಿ ಅರ್ಹರಿಗೆ ಅನ್ಯಾಯ ವಾಗಬಾರದೆಂದು ಮತ್ತೊಮ್ಮೆ ಪರಿ ಶೀಲನೆ ನಡೆಸಿತು. ಈ ಮೂಲಕ 13 ಸಾವಿರ ಅನರ್ಹ ಫಲಾನುಭವಿಗಳನ್ನು ಗುರುತಿಸಿರುವ ಇಲಾಖೆ ಕೇಂದ್ರ ಕಚೇರಿಗೆ ವರದಿಯನ್ನು ಸಲ್ಲಿಸಿತ್ತು.

ಗೃಹಲಕ್ಷ್ಮಿ ಯೋಜನೆಯ ಫಲಾನುಭವಿಗಳ ಪರಿಷ್ಕರಣೆಯಲ್ಲಿ ಕಠಿಣ ನಿಯಮ ಜಾರಿ ಮಾಡಲು ಸರ್ಕಾರ ಮುಂದಾಗಿದೆ. ಪ್ರತಿಯೊಬ್ಬ ಫಲಾನುಭವಿ ಬಯೋಮೆಟ್ರಿಕ್ ಮಾಡಿಸುವುದು ಕಡ್ಡಾಯ. ಇದರಿಂದ ಮತ್ತಷ್ಟು ಅನರ್ಹ ಫಲಾನುಭವಿಗಳು ಯೋಜನೆಯಿಂದ ಹೊರಗುಳಿದು ಅರ್ಹರಿಗೆ ಯೋಜನೆ ಸದ್ವಿನಿಯೋಗ ಆಗಲಿದೆ ಎಂಬುದು ಸರ್ಕಾರದ ಲೆಕ್ಕಾಚಾರ.

ನಿರ್ಣಾಯಕ: ಸುಪ್ರೀಂಕೋರ್ಟ್

ಬೀದಿಯ ಜನರಿಗೂ ಮಧ್ಯಸ್ಥಿಕೆಯ ಮಹತ್ವ ತಿಳಿದಿದೆ ಎಂದು ಅವರು ಹೇಳಿದರು. ಬ್ರಿಟನ್ ಸುಪ್ರೀಂ ಕೋರ್ಟ್ ನ್ಯಾಯಮೂರ್ತಿ ಲಾರ್ಡ್ ಹ್ಯಾಂಬ್ಲೆನ್ ಕ್ರೆಸಿ, ಇಂಗ್ಲೆಂಡ್ ಮತ್ತು ವೇಲ್ಸ್‌ನ ಬಾರ್ ಕೌನ್ಸಿಲ್ ಅಧ್ಯಕ್ಷ ಕ್ರಿಸ್ಟಿ ಬ್ರಿಮೆಲೊ, ಕಾನೂನು ಸಮಿತಿಯ ಉಪಾಧ್ಯಕ್ಷ ಬ್ರೆಟ್ ಡಿಕ್ಸನ್, ಸಿಜೆಐ ಸೂರ್ಯಕಾಂತ್ ಅವರೊಂದಿಗೆ ಚರ್ಚೆಯಲ್ಲಿ ಭಾಗವಹಿಸಿದ್ದರು. ಲಂಡನ್‌ನಲ್ಲಿರುವ ಭಾರತದ ಹೈಕಮಿಷನರ್ ಕುಮಾರನ್ ಪಿ. ಪ್ರಾಸ್ತಾವಿಕವಾಗಿ ಮಾತನಾಡಿದರು. ಸುಪ್ರೀಂ ಕೋರ್ಟ್‌ನ ಎಒಆರ್ ತನ್ವಿ ದುಬೆ, ಅಮೆರಿಕ ಮತ್ತು ಬ್ರಿಟನ್‌ನ ನ್ಯಾಯಾಂಗ ಮತ್ತು ಕಾನೂನು ಕ್ಷೇತ್ರದ ತಜ್ಞರು ಇದ್ದರು.

ಮಧ್ಯಸ್ಥಿಕೆ ಕಾಯ್ದೆ 2023 ಜಾರಿಗೆ ಬರುವ ಮೊದಲು ಕೂಡ ನ್ಯಾಯಾಲಗಳು ವ್ಯಾಜ್ಯ ಪರಿಹಾರಕ್ಕೆ ಮಧ್ಯಸ್ಥಿಕೆಯನ್ನು ಪ್ರೋತ್ಸಾಹಿಸುತ್ತಿದ್ದವು. ಕಾಯ್ದೆ ಜಾರಿಗೆ ಬಂದ ನಂತರ ಮಧ್ಯಸ್ಥಿಕೆ ನ್ಯಾಯಾಂಗ ವ್ಯವಸ್ಥೆಯಲ್ಲಿ ನಿರ್ಣಾಯಕ ಪಾತ್ರ ವಹಿಸುತ್ತಿದೆ ಎಂದ ಸಿಜೆಐ, ವಿಚಾರಣಾ ನ್ಯಾಯಾಲಯ, ಹೈಕೋರ್ಟ್ ಮತ್ತು ಸುಪ್ರೀಂಕೋರ್ಟ್‌ನಲ್ಲಿ ಮಧ್ಯಸ್ಥಿಕೆ ಕೇಂದ್ರಗಳನ್ನು ತೆರೆಯುವ ಅಗತ್ಯದ ಬಗ್ಗೆಯೂ ಗಮನ ಸೆಳೆದರು.

ಸುತ್ತೋಲೆಗೆ ಹೈಕೋರ್ಟ್ ಮಧ್ಯಂತರ ತಡೆ

ವಿಚಾರಣೆಯನ್ನು ಜುಲೈ 3ಕ್ಕೆ ಮುಂದೂಡಿತು. ಕೇವಲ ಎಸ್ಸಿ ಮತ್ತು ಎಸ್ಟಿ ವಿದ್ಯಾರ್ಥಿಗಳಿಗೆ ಮಾತ್ರ ಈ ಸೌಲಭ್ಯ ವಿಸ್ತರಿಸಿರುವುದು ಸಂವಿಧಾನ ಪರಿಚ್ಛೇದ 14ಕ್ಕೆ (ಸಮಾನತೆಯ ಹಕ್ಕು) ವಿರುದ್ಧವಾಗಿದ್ದು, ಇದು ತಾರತಮ್ಯದ ಕ್ರಮವಾಗಿದೆ. ಈ ಆದೇಶವನ್ನು ಮುಖ್ಯಮಂತ್ರಿಗಳ ಕಚೇರಿ ಹಾಗೂ ಸಮಾಜ ಕಲ್ಯಾಣ ಇಲಾಖೆಯ ನಿರ್ದೇಶನದ ಮೇರೆಗೆ ಹೊರಡಿಸಲಾಗಿದೆ. ಸಂಬಂಧಿತ ಅಧಿಕಾರಿಗಳು ಸ್ವತಂತ್ರವಾಗಿ ವಿಚಾರ ಪರಿಶೀಲನೆ ನಡೆಸಿಲ್ಲ. ಆದ್ದರಿಂದ, 2026ರ ಮೇ 21ರ ಸುತ್ತೋಲೆಯನ್ನು ರದ್ದುಪಡಿಸಬೇಕೆಂದು ಅರ್ಜಿಯಲ್ಲಿ ಕೋರಲಾಗಿದೆ.

ಅರ್ಜಿದಾರರ ಆಕ್ಷೇಪವೇನು: 2026ರ ಮೇ 21ರಂದು ಸಾರ್ವಜನಿಕ ಶಿಕ್ಷಣ ಇಲಾಖೆ ಹೊರಡಿಸಿರುವ ಸುತ್ತೋಲೆಯ ಪ್ರಕಾರ 2025–26ನೇ ಶೈಕ್ಷಣಿಕ ವರ್ಷದಲ್ಲಿ 8ನೇ ತರಗತಿ ಪೂರ್ಣಗೊಳಿಸಿರುವ ಎಸ್ಸಿ ಮತ್ತು ಎಸ್ಟಿ ವರ್ಗದ ವಿದ್ಯಾರ್ಥಿಗಳು ಕಾಯ್ದೆಯ ಸೆಕ್ಷನ್ 12(1)(ಸಿ) ಅಡಿಯಲ್ಲಿ ಅದೇ ಶಾಲೆಯಲ್ಲಿ 9ನೇ ಮತ್ತು 10ನೇ ತರಗತಿಯನ್ನು ಮುಂದುವರಿಸಬಹುದು ಎಂದು ಹೇಳಲಾಗಿದೆ. ಈ ಸುತ್ತೋಲೆ ಶಿಕ್ಷಣ ಹಕ್ಕು ಕಾಯ್ದೆ 2009 ಹಾಗೂ ಕರ್ನಾಟಕ ಶಿಕ್ಷಣ ಹಕ್ಕು ನಿಯಮಗಳು– 2012ಕ್ಕೆ ತದ್ವಿರುದ್ಧವಾಗಿದೆ ಎಂದು ಅರ್ಜಿಯಲ್ಲಿ ಆಕ್ಷೇಪಿಸಲಾಗಿದೆ.

ಆರ್‌ಟಿಇ ಕಾಯ್ದೆಯ ಈ ವಿಧಿಯು 9 ಮತ್ತು 10ನೇ ತರಗತಿಗೆ ಅನ್ವಯಿಸುವುದಿಲ್ಲ. ಸುತ್ತೋಲೆ ಮೂಲಕ ಅದರ ವ್ಯಾಪ್ತಿಯನ್ನು ಅನಧಿಕೃತವಾಗಿ ವಿಸ್ತರಿಸಲಾಗಿದೆ. ಆರ್‌ಟಿಇ ಕಾಯ್ದೆಯು 6ರಿಂದ 14 ವರ್ಷದ ಮಕ್ಕಳಿಗೆ ಮಾತ್ರ ಉಚಿತ ಮತ್ತು ಕಡ್ಡಾಯ ಶಿಕ್ಷಣದ ಹಕ್ಕು ನೀಡುತ್ತದೆ. ಸುತ್ತೋಲೆ ಮೂಲಕ 9 ಮತ್ತು 10ನೇ ತರಗತಿಗೆ ಈ ಸೌಲಭ್ಯ ವಿಸ್ತರಿಸುವ ಅಧಿಕಾರ ಸರ್ಕಾರಕ್ಕೆ ಇಲ್ಲ ಎಂದು ಅರ್ಜಿಯಲ್ಲಿ ವಿವರಿಸಲಾಗಿದೆ.

ಹೊಸಬರಿಗೆ ಆದ್ಯತೆ!

ಆ ಹಿನ್ನೆಲೆಯಲ್ಲಿ ಎರಡನೇ ಹಂತದಲ್ಲಿ ಯಾರಿಗೆ ಸಚಿವ ಸ್ಥಾನ ಸಿಗಲಿದೆ ಎಂಬ ಕುತೂಹಲಕ್ಕೆ ಕಾರಣವಾಗಿದೆ. ಎರಡನೇ ಹಂತದ ಸಂಪುಟ ವಿಸ್ತರಣೆ ಸಂಬಂಧ ಪಕ್ಷದ ವರಿಷ್ಠರು ತೀರ್ಮಾನ ಮಾಡುತ್ತಾರೆ. ಮೂರು ವರ್ಷ ಆರೋಗ್ಯ ಇಲಾಖೆಯಲ್ಲಿ ಪಾರದರ್ಶಕವಾಗಿ ಕೆಲಸ ಮಾಡಿದ್ದೇನೆ. ಇಲಾಖೆಯಲ್ಲಿ ಹಲವು ಬದಲಾವಣೆಗಳನ್ನು ತಂದಿದ್ದೇನೆ. ಎಲ್ಲರಿಗೂ ನನ್ನ ಕೆಲಸದ ಬಗ್ಗೆ ಮೆಚ್ಚುಗೆಯೂ ಇದೆ. ನನಗೆ ಖಾತೆ ಕೊಡುವುದು ವರಿಷ್ಠರಿಗೆ ಬಿಟ್ಟ ವಿಚಾರ ಎಂದು ಮಾಜಿ ಸಚಿವ ದಿನೇಶ್ ಗುಂಡೂರಾವ್ ಪ್ರತಿಕ್ರಿಯೆ ನೀಡಿದ್ದಾರೆ.

ಸಂಪುಟ ವಿಸ್ತರಣೆ ವೇಳೆ ಹೊಸಬರಿಗೂ ಅವಕಾಶ ನೀಡಬೇಕಾಗುತ್ತದೆ. ಸಮುದಾಯದ ಹೆಸರಿನಲ್ಲಿ ಸಚಿವ ಸ್ಥಾನ ಸಿಗಬೇಕು ಎಂದೇನು ಇಲ್ಲ. ನಮ್ಮ ಅರ್ಹತೆ, ಕೆಲಸ ಕಾರ್ಯಗಳ ಮೇಲೆ ಗುರುತಿಸಬೇಕು. ಅರ್ಹತೆಗೆ ಜಾತಿ ಮಾನದಂಡ ಆಗಬಾರದು. ಖಾತೆ ಬಗ್ಗೆ ನಾನು ಹೆಚ್ಚಿಗೆ ಏನನ್ನೂ ಹೇಳುವುದಿಲ್ಲ ಎಂದು ದಿನೇಶ್ ಗುಂಡೂರಾವ್ ತಿಳಿಸಿದರು. ಹುಬ್ಬಳ್ಳಿ–ಧಾರವಾಡ ಪೂರ್ವ ಕ್ಷೇತ್ರದ ಶಾಸಕ ಪ್ರಸಾದ್ ಅಬ್ಬಯ್ಯ ಮಾತನಾಡಿ, ಜೂ.20ರ ನಂತರ ಸಂಪುಟ ವಿಸ್ತರಣೆಯಾಗಲಿದೆ. ನಾನು ಸಚಿವ ಸ್ಥಾನಕ್ಕಾಗಿ ನನ್ನ ಬೇಡಿಕೆಯನ್ನಿಟ್ಟಿದೇನೆ. ರಾಜ್ಯದ ಎಲ್ಲ ನಾಯಕರು ಹಾಗೂ ವರಿಷ್ಠರ ಬಳಿ ನಾನು ಮನವಿ ಮಾಡಿದ್ದೇನೆ. ಸಚಿವ ಸ್ಥಾನ ಸಿಗುವ ನಿರೀಕ್ಷೆ ಇಟ್ಟುಕೊಂಡಿದ್ದೇನೆ ಎಂದು ಹೇಳಿದರು. ಸಚಿವ ಸಂಪುಟದಲ್ಲಿ ಮುಂಬೈ ಕರ್ನಾಟಕ ಭಾಗಕ್ಕೆ ಪ್ರಾತಿನಿಧ್ಯ ಇಲ್ಲ. ಬಿಜೆಪಿ ಪ್ರಭಾವ ಇರುವ ಭಾಗವಾಗಿದ್ದು, ಆ ಭಾಗಕ್ಕೆ ಒಂದು ಸ್ಥಾನ ನೀಡಬೇಕು. ಉತ್ತರ ಕರ್ನಾಟಕಕ್ಕೆ ಅನ್ಯಾಯ ಆಗುತ್ತಿದೆ ಎಂಬ ಆರೋಪವಿದೆ. ಹೀಗಾಗಿ ಪ್ರಾದೇಶಿಕವಾರು ಪ್ರಾತಿನಿಧ್ಯ ಕಲ್ಪಿಸುವುದು ಪಕ್ಷದ ಹಿತದೃಷ್ಟಿಯಿಂದ ಒಳ್ಳೆಯದು ಎಂದು ಅವರು ತಿಳಿಸಿದರು.

ನಾಲ್ವರು ರಾಜ್ಯಸಭೆಗೆ ಅವಿರೋಧ ಆಯ್ಕೆ

ಆಯ್ಕೆಗೊಂಡಿರುವುದನ್ನು ಘೋಷಣೆ ಮಾಡಿದರು. ಕರ್ನಾಟಕದಿಂದ ರಾಜ್ಯಸಭೆಗೆ ಅವಿರೋಧವಾಗಿ ಆಯ್ಕೆಯಾದ ಮಲ್ಲಿಕಾರ್ಜುನ ಖರ್ಗೆ, ಪವನ್ ಖೇರಾ ಹಾಗೂ ಮನ್ಸೂರ್ ಅಲಿಖಾನ್ ಅವರಿಗೆ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅಭಿನಂದನೆ ಸಲ್ಲಿಸಿದ್ದಾರೆ. ಈ ಸಂಬಂಧ ಟ್ವೀಟ್ ಮಾಡಿರುವ ಅವರು, ನಮ್ಮ ರಾಜ್ಯದ ಹಿತರಕ್ಷಣೆ, ಪ್ರಗತಿ ಮತ್ತು ಅಭಿವೃದ್ಧಿಗಾಗಿ ಇವರೆಲ್ಲರೂ ಕೇಂದ್ರದಲ್ಲಿ ಕರ್ನಾಟಕದ ಪರವಾಗಿ ಧ್ವನಿಯಾಗಲಿದ್ದಾರೆ ಎಂಬ ವಿಶ್ವಾಸ ನನಗಿದೆ ಎಂದಿದ್ದಾರೆ.

ಶಾಸಕ ಷಡಕ್ಷರಿಗೆ ಲಘು ಪಾರ್ಶ್ವವಾಯು!

ಪ್ರವಾಸ ಮುಂದುವರೆಸಲಿದ್ದಾರೆ. ಮುಖ್ಯಮಂತ್ರಿಯವರು ಮಂತ್ರಿಮಂಡಲ ವಿಸ್ತರಣೆ ಮಾಡುತ್ತಾರೆ ಎಂಬ ಸುಳಿವು ದೊರೆತ ಸುಮಾರು 50ಕ್ಕೂ ಹೆಚ್ಚು ಕಾಂಗ್ರೆಸ್ ಶಾಸಕರು ದೆಹಲಿಯಲ್ಲೇ ಬಿಡಾರ ಹೂಡಿದ್ದಾರೆ.

ಕರ್ನಾಟಕ ಭವನದ ಮೂರು ಅತಿಥಿ ಗೃಹಗಳು ಇವರಿಂದ ಬಹುತೇಕ ಭರ್ತಿಯಾಗಿವೆ. ವಿಧಾನಸಭೆಗೆ 3 ರಿಂದ ಐದಾರು ಬಾರಿ ಆಯ್ಕೆಗೊಂಡಿರುವ ಹಿರಿಯ ಶಾಸಕರು ಶಿವಕುಮಾರ್ ಸಂಪುಟದಲ್ಲಾದರೂ, ಅವಕಾಶ ಪಡೆಯ ಬೇಕೆಂದು ಲಾಭಿ ನಡೆಸುತ್ತಿದ್ದಾರೆ. ಮಂತ್ರಿ ಸ್ಥಾನ ಪಡೆಯಲೆಂದೇ ದೆಹಲಿಗೆ ತೆರಳಿದ್ದ ಷಡಕ್ಷರಿ ಅವರು ತೀವ್ರ ಒತ್ತಡಕ್ಕೊಳಗಾಗಿ ಪಾರ್ಶ್ವವಾಯುವಿಗೆ ತುತ್ತಾಗಿ ಕರ್ನಾಟಕ ಭವನದಲ್ಲಿ ಕುಸಿದು ಬಿದಿದ್ದಾರೆ. ಅವರ ಜೊತೆಯಲ್ಲೇ ಇದ್ದ ಮಾಜಿ ಸಚಿವ ಕೆ.ಎನ್. ರಾಜಣ್ಣ ಅವರ ಪುತ್ರ ವಿಧಾನ ಪರಿಷತ್ತು ಸದಸ್ಯ ರಾಜೇಂದ್ರ ತಕ್ಷಣವೇ ಅವರನ್ನು ಖಾಸಗಿ ಆಸ್ಪತ್ರೆಗೆ ದಾಖಲು ಮಾಡಿದ್ದು, ಷಡಕ್ಷರಿ ಅವರನ್ನು ತೀವ್ರ ನಿಗಾ ಘಟಕದಲ್ಲಿ ಚಿಕಿತ್ಸೆಗೆ ಒಳಪಡಿಸಲಾಗಿದೆ.

ಜಮೀರ್ ವಿರುದ್ಧ ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅಸಮಾಧಾನ!?

ಬೆಂಗಳೂರು, ಜೂ.11– ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯನವರಿಗೆ ಅಲ್ಪಸಂಖ್ಯಾತ ವರ್ಗದ ನಾಯಕ ಮಾಜಿ ಸಚಿವ ಜಮೀರ್ ಅಹ್ಮದ್ ಖಾನ್ ಪರಮಾಪ್ತರಾಗಿದ್ದವರು. ಆದರೆ, ಈಗ ದೂರವಾಗಿದ್ದಾರಾ ಎಂಬ ಅನುಮಾನ ಕಾಡುತ್ತಿದೆ.

ಸಿದ್ದರಾಮಯ್ಯನವರ ಪರಮಾಪ್ತ ಎಂದೇ ಗುರುತಿಸಿಕೊಂಡಿದ್ದ ಜಮೀರ್ ಅಹ್ಮದ್ ಖಾನ್ ವಿರುದ್ಧವೇ ಈಗ ಸಿದ್ದರಾಮಯ್ಯ ಮುನಿಸು ಹೊರಹಾಕಿದ್ದಾರೆ. ಅವನು ನನ್ನ ವಿರುದ್ಧವೇ ದಾವಣಗೆರೆಯಲ್ಲಿ ಕೆಲಸ ಮಾಡಿದ್ದಾನೆ ಎಂದು ಹೇಳುವ ಮೂಲಕ ರಾಜಕೀಯ ವಲಯದಲ್ಲಿ ಸಂಚಲನ ಮೂಡಿಸಿದ್ದಾರೆ. ಸಿಎಂ ಡಿ.ಕೆ.ಶಿವಕುಮಾರ್ ಸಂಪುಟದಲ್ಲಿ ಜಮೀರ್ ಅಹ್ಮದ್ ಖಾನ್ ಅವರಿಗೆ ಸಚಿವ ಸ್ಥಾನ ನೀಡಬೇಕು ಎಂದು ಕೋರಲು ಅವರ ಬೆಂಬಲಿಗರು ಸಿದ್ದರಾಮಯ್ಯ ಅವರನ್ನು ಭೇಟಿ ಮಾಡಲು ಬಂದಿದ್ದರು. ಆದರೆ, ಈ ಸಂದರ್ಭದಲ್ಲಿ ಬೆಂಬಲಿಗರ ಮನವಿ ಆಲಿಸುವ ಬದಲು ಸಿದ್ದರಾಮಯ್ಯ ನವರು ಅವರ ಮುಂದೆ ಜಮೀರ್ ವಿರುದ್ಧ ಆಕ್ರೋಶ ಹೊರ ಹಾಕಿದ್ದಾರೆ. ಸಿಟ್ಟಿನಿಂದ ಬೆಂಬಲಿಗರು ಮುಂದೆ ಗುಡುಗಿದ ಸಿದ್ದರಾಮಯ್ಯ, ಅವನು ನನ್ನ ಪರಮಾಪ್ತ ಅಂತ ನೀವೆಲ್ಲ ಹೇಳ್ತೀರಾ. ಆದರೆ, ಅವನು ಚುನಾವಣೆಯಲ್ಲಿ ನನ್ನ ವಿರುದ್ಧವೇ ಕೆಲಸ ಮಾಡಿದ್ದಾನೆ ಎಂದು ಗರಂ ಆಗಿ ಹೇಳಿದ್ದಾರೆ.

ಇಂದಿನಿಂದ ಐಸಿಸಿ ಮಹಿಳಾ ಟಿ20 ವಿಶ್ವಕಪ್ ಆರಂಭ



ವಿಶ್ವಕಪ್ ತಂಡಗಳ ನಾಯಕಿಯರು.

ಮೈಸೂರು, ಜೂ.11 (ವಿವಿಹೆಚ್)– 2026ರ ಐಸಿಸಿ ಮಹಿಳಾ ಟಿ20 ವಿಶ್ವಕಪ್ ನಾಳೆ (ಜೂ.12) ಯಿಂದ ಇಂಗ್ಲೆಂಡ್ ಮತ್ತು ವೇಲ್ಸ್‌ನಲ್ಲಿ ಆರಂಭವಾಗಲಿದೆ. ಮಹಿಳಾ ಟಿ20 ವಿಶ್ವಕಪ್ ಕ್ರಿಕೆಟ್‌ನಲ್ಲಿ ಮೊಟ್ಟ ಮೊದಲ ಬಾರಿಗೆ 12 ತಂಡಗಳು ಸ್ಪರ್ಧಿಸಲಿವೆ. 24 ದಿನಗಳ ಕಾಲ ನಡೆಯುವ ಈ ಚುಟುಕು ಮಾದರಿಯಲ್ಲಿ 33 ಪಂದ್ಯಗಳನ್ನು ನಿಗದಿಪಡಿಸಲಾಗಿದೆ.

ಜೂ.12 ರಂದು ನಡೆಯುವ ಉದ್ಘಾಟನಾ ಪಂದ್ಯದಲ್ಲಿ ಅತಿಥೇಯ ಇಂಗ್ಲೆಂಡ್ ಹಾಗೂ ಶ್ರೀಲಂಕಾ ಮಹಿಳಾ ತಂಡಗಳು ಕಾದಾಡಲಿವೆ. ಹಾಲಿ ಚಾಂಪಿಯನ್ ನ್ಯೂಜಿಲೆಂಡ್ ಪ್ರಶಸ್ತಿ ಉಳಿಸಿಕೊಳ್ಳುವ ಗುರಿ ಹೊಂದಿದ್ದರೆ, ಆತಿಥೇಯ ಇಂಗ್ಲೆಂಡ್ ತಂಡವು ತವರಿನ ಪರಿಸ್ಥಿತಿಯನ್ನು ಬಳಸಿಕೊಳ್ಳಲು ಪ್ರಯತ್ನಿಸುತ್ತಿದೆ. ಏತನ್ಮಧ್ಯೆ, ಮಹಿಳಾ ಏಕದಿನ ವಿಶ್ವಕಪ್ ಗೆಲುವಿನ ನಂತರ ಭಾರತ ತಂಡವು ಹೊಸ ವಿಶ್ವಾಸದೊಂದಿಗೆ ಆಗಮಿಸುತ್ತಿದ್ದು, ಚೊಚ್ಚಲ ಮಹಿಳಾ ಟಿ20 ವಿಶ್ವಕಪ್ ಕಿರೀಟವನ್ನು ಮುಡಿಗೇರಿಸಿಕೊಳ್ಳಲು ಸಕಲ ಸಿದ್ಧತೆ ಮಾಡಿಕೊಂಡಿದೆ. ಜೂ.14ರ ಭಾನುವಾರದಂದು ಸಾಂಪ್ರದಾಯಿಕ ಎದುರಾಳಿ ಪಾಕಿಸ್ತಾನ ವಿರುದ್ಧ ಪಂದ್ಯ ಆಡುವ ಮೂಲಕ ಟೀಂ ಇಂಡಿಯಾ ಟೂರ್ನಿಯಲ್ಲಿ ಮೊದಲ ಪಂದ್ಯವನ್ನಾಡಲಿದೆ. ಈ ಪಂದ್ಯವು ಬರ್ಮಿಂಗ್ ಹ್ಯಾಮ್‌ನ ಎಡ್ಜ್‌ಬಾಸ್ಟನ್ ಕ್ರೀಡಾಂಗಣದಲ್ಲಿ ನಡೆಯಲಿದ್ದು, ಭಾರತೀಯ ಕಾಲಮಾನ ಸಂಜೆ 7 ಗಂಟೆ ಪಂದ್ಯ ನೇರ ಪ್ರಸಾರವಾಗಲಿದೆ.

ಉಚಿತ ಸಂಸ್ಕೃತ ಶಿಕ್ಷಣ

ಮೈಸೂರು, ಜೂ. 11– ಮೈಸೂರಿನ ಚಾಮುಂಡಿಪುರಂನ ಆರಾಧ್ಯ ಮಹಾಸಭಾ, ವಿಶ್ವಭಾರತೀ ಸಂಸ್ಕೃತ ಪಾಠಶಾಲೆ ವತಿಯಿಂದ ಪ್ರಥಮ ಮತ್ತು ಕಾವ್ಯದ ಬಗ್ಗೆ ಉಚಿತ ಸಂಸ್ಕೃತ ಶಿಕ್ಷಣವನ್ನು ಹಮ್ಮಿಕೊಳ್ಳಲಾಗಿದೆ. ತರಗತಿಗಳು ಬೆಳಗ್ಗೆ 7 ರಿಂದ 9, ಸಂಜೆ 5.30 ರಿಂದ 7.30, ಶನಿವಾರ ಮಧ್ಯಾಹ್ನ 3 ರಿಂದ 5 ರವರೆಗೆ ನಡೆಯಲಿವೆ. ಮಾಹಿತಿಗೆ ದೂ. 2332784, ಮೊ. 9980737941 ಸಂಪರ್ಕಿಸಿ.

ನಾಡಿ ಪರೀಕ್ಷೆ

ಮೈಸೂರು, ಜೂ. 11– ಶ್ರೀ ಶ್ರೀ ರವಿಶಂಕರ್ ಗುರೂಜಿಯವರ ಆರ್ಟ್ ಆಫ್ ಲಿವಿಂಗ್ ವತಿಯಿಂದ ಜೂ. 14 ರಂದು ಲಲಿತಾದ್ರಿ ಪುರ ರಸ್ತೆಯಲ್ಲಿರುವ ಆರ್ಟ್ ಆಫ್ ಲಿವಿಂಗ್ ಮೈಸೂರು ಆಶ್ರಮದಲ್ಲಿ ನಾಡಿ ಪರೀಕ್ಷೆ ಹಮ್ಮಿಕೊಳ್ಳಲಾಗಿದೆ. ವಿವರಗಳಿಗೆ ಮೊ. 9886186580 ಸಂಪರ್ಕಿಸಬಹುದು.

ಕೇರಳದ ಕೊಲ್ಲಂನಲ್ಲಿ ಇಬ್ಬರು ವಿದ್ಯಾರ್ಥಿಗಳಿಗೆ ಶಿಗೆಲ್ಲಾ ಸೋಂಕು ದೃಢ

ಕೊಲ್ಲಂ, ಜೂ.11– ವಿಶ್ವಾದ್ಯಂತ ಮಾರಕ ಎಬೋಲಾ ಸೋಂಕಿನ ಭೀತಿ ಹರಡಿರುವ ನಡುವೆಯೇ ಕೇರಳದಲ್ಲಿ ಮತ್ತೊಂದು ಸೋಂಕು ವ್ಯಾಪಕ ಅತಂಕ ಸೃಷ್ಟಿಸಿದೆ.

ಕೇರಳದ ಕೊಲ್ಲಂ ಜಿಲ್ಲೆಯ ಪರಿಪ್ಪಳ್ಳಿಯ ಸರ್ಕಾರಿ ವೈದ್ಯಕೀಯ ಕಾಲೇಜು ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದ ಇಬ್ಬರು ವಿದ್ಯಾರ್ಥಿಗಳಿಗೆ ಶಿಗೆಲ್ಲಾ ಸೋಂಕು ದೃಢಪಟ್ಟಿದೆ ಎಂದು ಆರೋಗ್ಯ ಇಲಾಖೆ ಗುರುವಾರ ತಿಳಿಸಿದೆ.

ಪ್ರಸ್ತುತ ಸುಮಾರು 38 ವಿದ್ಯಾರ್ಥಿಗಳು ಶಿಗೆಲ್ಲಾ ಸೋಂಕಿನ ಲಕ್ಷಣಗಳೊಂದಿಗೆ ಚಿಕಿತ್ಸೆ ಪಡೆಯುತ್ತಿದ್ದಾರೆ ಎಂದು ವರದಿಯಾಗಿದೆ. ವಿದ್ಯಾರ್ಥಿಗಳನ್ನು ಅತಿಸಾರ (ಭೇದಿ), ವಾಂತಿ ಹಾಗೂ ಜ್ವರದಂತಹ ಲಕ್ಷಣಗಳೊಂದಿಗೆ ಆಸ್ಪತ್ರೆಗೆ ದಾಖಲಿಸಲಾಗಿತ್ತು. ಅವರ ಮಾದರಿಗಳನ್ನು ಪ್ರಯೋಗಾಲಯ ಪರೀಕ್ಷೆಗೆ ಕಳುಹಿಸಲಾಗಿದ್ದು, ಪರೀಕ್ಷೆಯಲ್ಲಿ ಬ್ಯಾಕ್ಟೀರಿಯಾ ಸೋಂಕು ಇರುವುದು ದೃಢಪಟ್ಟಿದೆ. ಸೋಂಕು ದೃಢಪಟ್ಟ ನಂತರ, ಆರೋಗ್ಯ ಅಧಿಕಾರಿಗಳು ನಿಗಾ ಕ್ರಮಗಳನ್ನು ತೀವ್ರಗೊಳಿಸಿದ್ದು, ರೋಗ ಹರಡುವುದನ್ನು ತಡೆಯಲು ಮುನ್ನೆಚ್ಚರಿಕಾ ಕ್ರಮಗಳನ್ನು ಆರಂಭಿಸಿದ್ದಾರೆ. ಸಾರ್ವಜನಿಕರು ವೈಯಕ್ತಿಕ ಸ್ವಚ್ಛತೆಯನ್ನು ಕಾಪಾಡಿಕೊಳ್ಳಬೇಕು ಹಾಗೂ ಸುರಕ್ಷಿತ ಕುಡಿಯುವ ನೀರನ್ನು ಮಾತ್ರ ಬಳಸಬೇಕು ಎಂದು ಅಧಿಕಾರಿಗಳು ಸಲಹೆ ನೀಡಿದ್ದಾರೆ.

ಮಾಫಿಯಾ ವಿರುದ್ಧ ಜನತಾ ಏಜೆಂಟ್ ನಾನು!

ಸಿಎಂ ಡಿಕೆಶಿಗೆ ವಿಪಕ್ಷ ನಾಯಕ ಎದಿರೇಟು



ಆರ್. ಅಶೋಕ್

ಬೆಂಗಳೂರು, ಜೂ.11 (ಕೆಎಂಶಿ)– ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಮಾಡಿರುವ ಆರೋಪದಂತೆ ನಾನು ಏಜೆಂಟ್ ಆಗಿಯೇ ಮಾತನಾಡುತ್ತಿದ್ದೇನೆ ಎಂದು ವಿಧಾನಸಭೆಯ ಪ್ರತಿಪಕ್ಷದ ನಾಯಕ ಆರ್. ಅಶೋಕ್ ಕಿಡಿಕಾರಿದ್ದಾರೆ.

ಆದರೆ ನಿಮ್ಮ ತರಹ ಯಾವುದೋ 'ಮಾಫಿಯಾ' ಹಿತಾಸಕ್ತಿ ಕಾಯುವ ಕಮಿಷನ್ ಏಜೆಂಟ್ ಆಗಿ ಅಲ್ಲ. ಕರ್ನಾಟಕದ ಏಳೂವರೆ ಕೋಟಿ ಕನ್ನಡಿಗರ ಹಕ್ಕಿಗಾಗಿ, ಬೆಂಗಳೂರಿನ ಒಂದೂವರೆ ಕೋಟಿ ನಾಗರಿಕರ ಧ್ವನಿಯಾಗಿ ನಿಂತಿರುವ ಜನತಾ ಏಜೆಂಟ್ ನಾನು ಎಂದಿದ್ದಾರೆ.

ಈ ಸಂಬಂಧ ಟ್ವೀಟ್ ಮಾಡಿರುವ ಅವರು, ವಿಪಕ್ಷ ನಾಯಕನಾಗಿ ನಿಮ್ಮ ಲೂಟಿ–ದಂಧೆಯನ್ನು ಪ್ರಶ್ನಿಸುವುದು ನನ್ನ ಸಂವಿಧಾನಬದ್ಧ ಕರ್ತವ್ಯ, ಅದಕ್ಕೆ ಯಾರ ಅಪ್ಪಣೆಯೂ ಬೇಕಿಲ್ಲ. ಹೈಕಮಾಂಡ್ ಬಾಗಿಲಲ್ಲಿ ಕಾಡಿ–ಬೇಡಿ, ಅತ್ತು–ಕರೆದು, ಕೊನೆಗೂ ಮುಖ್ಯಮಂತ್ರಿ ಪದವಿ ಗಿಟ್ಟಿಸಿಕೊಂಡಿರುವ ತಮಗೆ ವಿಪಕ್ಷಗಳು ಕನಿಷ್ಠ 'ಹನಿಮೂನ್ ಪೀರಿಯಡ್' ಕೂಡ ಕೊಡ್ತಿಲ್ಲವಲ್ಲ ಅನ್ನೋ ಹತಾಶೆ ನಿಮಗಿದೆ. ನಿಮ್ಮ ಭಯ, ಆತಂಕ ನನಗೆ ಅರ್ಥವಾಗುತ್ತದೆ. ಆದರೆ ಕಾಂಗ್ರೆಸ್ ಶಾಸಕರೇ ದಿನಬೆಳಗಾದರೆ ಮಾಧ್ಯಮಗಳ ಮುಂದೆ ನಿಮ್ಮ ವಿರುದ್ಧ ಅಸಮಾಧಾನದ ಜಾಗಟೆ ಬಾರಿಸುತ್ತಾ ದೆಹಲಿಗೆ ದಂಡೆತ್ತಿ ಹೋಗುತ್ತಿರುವಾಗ ನಿಮಗೆ ಹನಿಮೂನ್ ಪೀರಿಯಡ್ ಎಲ್ಲಿಂದ ಸಿಗಬೇಕು ಎಂದು ವ್ಯಂಗ್ಯವಾಡಿದ್ದಾರೆ.

ನಮ್ಮ ಪಾರದರ್ಶಕತೆ, ಕಾರ್ಯವೈಖರಿ ಸಹಿಸಲು ಅವರಿಂದ ಸಾಧ್ಯವಾಗುತ್ತಿಲ್ಲ ಎಂಬ ನಿಮ್ಮ ಹೇಳಿಕೆ ಶತಮಾನದ ಅತಿ ದೊಡ್ಡ ಹಾಸ್ಯ, ನಿಮ್ಮ ಹಿನ್ನೆಲೆ ಏನು, ನಿಮ್ಮ 'ಆಡಳಿತ ವೈಖರಿ'ಯ ಅಸಲಿ ಚರಿತ್ರೆ ಏನು, ತಾವು ಕಟ್ಟಿಕೊಂಡಿರುವ 'ಪಾರದರ್ಶಕ ಸಾಮ್ರಾಜ್ಯ ಎಂಥದ್ದು ಎಂಬುದು ಇಡೀ ಕರ್ನಾಟಕಕ್ಕೆ ಗೊತ್ತಿದೆ. ನಿಮ್ಮಿಂದ ಪಾರ ದರ್ಶಕತೆಯ ಪಾಠ ಕಲಿಯುವ ದೌರ್ಭಾಗ್ಯ ಕನ್ನಡಿಗರಿಗಿಲ್ಲ.

ಟೆಂಡರ್ ನಿಯಮಗಳ ಅಕ್ರಮವನ್ನು ಮುಚ್ಚಿಹಾಕಲು ನೀವೇ ಸ್ವತಃ ಉನ್ನತ ಮಟ್ಟದ ಸಮಿತಿ ರಚಿಸಿ, ವರದಿ ನೀಡಲು ಕೊಟ್ಟಿದ್ದ ಒಂದು ವಾರದ ಗಡುವು ಇಂದಿಗೆ ಮುಕ್ತಾಯವಾಗಿದೆ. ತಾಕತ್ತಿದ್ದರೆ, ನಿಮ್ಮಲ್ಲಿ ಕಿಂಚಿತ್ತಾದರೂ ಪಾರದರ್ಶಕತೆ ಉಳಿದಿದ್ದರೆ, ಆ ವರದಿಯನ್ನು ಅಡಗಿಸಿಡದೆ ತಕ್ಷಣ ಬಹಿರಂಗಪಡಿಸಿ, ವರದಿಯನ್ನು ಇಡೀ ರಾಜ್ಯದ ಜನರ ಮುಂದಿಡಿ. ನಿಮ್ಮ ಅಸಲಿ ಮುಖವಾಡ ಕಳಚಿ ಬೀಳಲಿ, ಯಾರ ಕಾರ್ಯವೈಖರಿ ಎಂಥದ್ದು ಅಂತ ಜನರೇ ತೀರ್ಮಾನ ಮಾಡುತ್ತಾರೆ.

ಮೈಸೂರು ಮಿತ್ರ

ಅತೀ ಶೀಘ್ರ ಮೈಸೂರು ಪಾಲಿಕೆಯಲ್ಲಿ ಐದು ವಾರ್ಡ್ ಸಮಿತಿ ರಚನೆ

●ಎಂಜಿಪಿ ಪ್ರಸ್ತಾಪಕ್ಕೆ ಪಾಲಿಕೆ ಆಡಳಿತಾಧಿಕಾರಿ ನಿತೇಶ್ ಪಾಟೀಲ್ ಭರವಸೆ ●ಮೈಸೂರು ವಿಷನ್ ಗ್ರೂಪ್ ರಚನೆಗೂ ಮನವಿ

ಮೈಸೂರು, ಜೂ.11(ವಿವಿಹೆಚ್)– ಮೈಸೂರಲ್ಲಿ ಪ್ರಾಯೋಗಿಕವಾಗಿ ಯಾದವಗಿರಿ ಒಳಗೊಂಡಂತೆ ಐದು ವಾರ್ಡ್ ಸಮಿತಿ ರಚಿಸುವುದಾಗಿ ಪ್ರಾದೇಶಿಕ ಆಯುಕ್ತರೂ ಆದ ಮಹಾನಗರ ಪಾಲಿಕೆ ಆಡಳಿತಾಧಿಕಾರಿ ನಿತೇಶ್ ಪಾಟೀಲ್ ತಿಳಿಸಿದರು.



ಎಂಜಿಪಿ ಸಭೆಯಲ್ಲಿ ಪ್ರಾದೇಶಿಕ ಆಯುಕ್ತ ನಿತೇಶ್ ಪಾಟೀಲ್ ಮಾತನಾಡಿದರು

ಯಾದವಗಿರಿಯ ಎಂಜಿಪಿ ಕಚೇರಿಯಲ್ಲಿ ಗುರುವಾರ ನಡೆದ ಮೈಸೂರು ಗ್ರಾಹಕರ ಪರಿಷತ್ ಸಭೆಯಲ್ಲಿ ಅವರು ಮಾತನಾಡಿದರು.

ಬಡಾವಣೆಗಳ ಅಭಿವೃದ್ಧಿಗಾಗಿ ಕೆಲಸ ಮಾಡಲು ವಾರ್ಡ್ ಸಮಿತಿ ರಚಿಸಬೇಕು. 74ನೇ ಸಂವಿಧಾನ ತಿದ್ದುಪಡಿಯಂತೆ ವಾರ್ಡ್ ಸಮಿತಿಗಳನ್ನು ರಚಿಸುವಂತೆ ಹೈಕೋರ್ಟ್ ನಿರ್ದೇಶನ ನೀಡಿದ್ದರೂ, ಪಾಲಿಕೆ ಈ ಬಗ್ಗೆ ಆಸಕ್ತಿ ತೋರಿಲ್ಲ. ಸ್ಥಳೀಯ ಮಟ್ಟದಲ್ಲಿ ಜನರ ಭಾಗವಹಿಸುವಿಕೆಯನ್ನು ಹೆಚ್ಚಿಸಲು ವಾರ್ಡ್ ಸಮಿತಿಗಳ ರಚನೆ ಅಗತ್ಯವೆಂದು ಎಂಜಿಪಿ ಮನವಿ ಮಾಡಿತು.

ಇದಕ್ಕೆ ಸ್ಪಂದಿಸಿದ ಆಯುಕ್ತ ನಿತೇಶ್ ಪಾಟೀಲ್, ವಲಯ ಕಚೇರಿ 4ರ ವ್ಯಾಪ್ತಿಯಲ್ಲಿ ಪ್ರಥಮ ಹಂತದಲ್ಲಿ 5 ವಾರ್ಡ್ ಸಮಿತಿಗಳನ್ನು ಮೈಗ್ರಾಪ ಸಹಯೋಗದಲ್ಲಿ ಪ್ರಾಯೋಗಿಕವಾಗಿ ಆರಂಭಿಸಲಾಗುವುದು. ವಾರ್ಡ್ ಸಮಿತಿಯಲ್ಲಿ ಕನಿಷ್ಠ 10 ಮಂದಿ ಇರಬೇಕು. ಸಮಿತಿಗೆ ಸೇರ ಬಯಸುವವರು ರಾಜಕೀಯ ಹಿನ್ನೆಲೆ ಹೊಂದಿರಬಾರದು. ಮಹಿಳೆಯರು, ಪ.ಜಾತಿ, ಪಂಗಡಗಳ ಸದಸ್ಯರಿರಬೇಕು. ವಾರ್ಡ್ ಸಮಿತಿ ರಚನೆ ಸಂಬಂಧ ಪತ್ರಿಕಾ ಪ್ರಕಟಣೆ ಹೊರಡಿಸಲಾಗುವುದು. ಈ ಬಗ್ಗೆ ಮುಂದಿನ ಸಭೆಯಲ್ಲಿ ಚರ್ಚಿಸಿ ಶೀಘ್ರ ಅನುಷ್ಠಾನಕ್ಕೆ ಒತ್ತು ನೀಡುವುದಾಗಿ ಹೇಳಿದರು.

ಮುಂದುವರಿದು ಎಂಜಿಪಿ, ನಗರದ ಉದ್ಯಾನವನಗಳ ಅಭಿವೃದ್ಧಿಗೆ ವಿಶೇಷ ಒತ್ತು ನೀಡುವ ಮೂಲಕ ಮೈಸೂರನ್ನು 'ಪಾರ್ಕ್ ಸಿಟಿ'ಯಾಗಿ ರೂಪಿಸಬೇಕು. ಉದ್ಯಾನವನಗಳ ಅತಿಕ್ರಮಣ ತೆರವು ಹಾಗೂ ಮೂಲ ಸೌಕರ್ಯ ಅಭಿವೃದ್ಧಿಗೆ ವಿಶೇಷ ಯೋಜನೆ ರೂಪಿಸಬೇಕೆಂದು ಮನವಿ ಮಾಡಿತು.

ಮೈಸೂರು ನಗರದಲ್ಲಿ 35 ಪಾರ್ಕ್‌ಗಳ ನಿರ್ವಹಣೆಗೆ ಸ್ವಯಂ ಸೇವಕರ ಅಗತ್ಯವಿದೆ. ಸಾರ್ವಜನಿಕರು ಸಹಕರಿಸಿದರೆ ಪಾರ್ಕ್‌ಗಳ ಜೊತೆಗೆ ಅಗತ್ಯವಿರುವ ಕಡೆ ಗ್ರಂಥಾಲಯಗಳ ಸಂಖ್ಯೆ ಹೆಚ್ಚಿಸುವ ಜೊತೆಗೆ ಮೂಲಸೌಕರ್ಯದೊಂದಿಗೆ ಹೆಚ್ಚು ಪುಸ್ತಕಗಳನ್ನು ನೀಡಲಾಗುವುದು ಎಂದು ವಿವರಿಸಿದರು.

ಮೈಸೂರು ವಿಷನ್ ಗ್ರೂಪ್ ರಚನೆ: ಮೈಗ್ರಾಪ ಸಂಸ್ಥಾಪಕ ಭಾಮಿ ಶೆಣೈ ಮಾತನಾಡಿ, ನಗರದ ಐತಿಹಾಸಿಕ ಪರಂಪರೆ, ಸಾಂಸ್ಕೃತಿಕ ಮೌಲ್ಯಗಳ ಉಳಿಸಿಕೊಳ್ಳುವ ಉದ್ದೇಶದೊಂದಿಗೆ 'ಗ್ರೇಟ್ ಮೈಸೂರು ಮಾಸ್ಟರ್ ಪ್ಲಾನ್' ರೂಪಿಸಬೇಕು. ಇದರಲ್ಲಿ ಪರಿಣಿತರನ್ನು ಒಳಗೊಂಡ 'ಮೈಸೂರು ವಿಷನ್ ಗ್ರೂಪ್' ರಚಿಸಿ ದೀರ್ಘಾವಧಿಯ ಅಭಿವೃದ್ಧಿ ಯೋಜನೆ ರೂಪಿಸಬೇಕೆಂದು ಮನವಿ ಮಾಡಿದರು.

ಇದಕ್ಕೆ ಪ್ರತಿಕ್ರಿಯಿಸಿದ ಆಯುಕ್ತ ಪಾಟೀಲ್, ಗ್ರೇಟರ್ ಮೈಸೂರು ಅಂತಿಮ ನೋಟಿಫಿಕೇಷನ್ ಆಗುವವರೆಗೆ ಯಾವುದೇ ತಂಡ ರಚಿಸಲು ಸಾಧ್ಯವಿಲ್ಲ. ಈ ವಿಚಾರವಾಗಿ ಮೈಸೂರಿನವರೇ ಆದ ನಗರಾಭಿವೃದ್ಧಿ ಸಚಿವ ಡಾ.ಯತೀಂದ್ರ ಅವರಿಗೆ ಮೈಗ್ರಾಪ ಸದಸ್ಯರು ಮನವಿ ಮಾಡಿಕೊಳ್ಳಬಹುದು ಎಂದು ಸಲಹೆ ನೀಡಿದರು.

ಪಾದಚಾರಿ ಮಾರ್ಗ ಮುಕ್ತಗೊಳಿಸಿಲ್ಲ: ಸುಪ್ರೀಂ ಕೋರ್ಟ್ ನಿರ್ದೇಶನಗಳಿದ್ದರೂ ಮೈಸೂರಿನಲ್ಲಿ ಪಾದಚಾರಿ ಮಾರ್ಗಗಳನ್ನು ಸಾರ್ವಜನಿಕರ ಬಳಕೆಗೆ ಮುಕ್ತಗೊಳಿಸುವಲ್ಲಿ ಪಾಲಿಕೆ ಹಿಂದೇಟು ಹಾಕುತ್ತಿದೆ ಎಂದು ಭಾಮಿ ಶೆಣೈ ದೂರಿದರು. ಫುಟ್‌ಬಾತ್ ತೆರವಿಗೆ ಅಧಿಕಾರಿಗಳಿಗೆ ಹಲವಾರು ಬಾರಿ ಸೂಚನೆ ನೀಡಲಾಗಿಯೂ ಯಾವುದೇ ಪ್ರಯೋಜನವಾಗಿಲ್ಲ. ಜಿಲ್ಲಾಧಿಕಾರಿ, ಪೊಲೀಸ್ ಆಯುಕ್ತರಿಗೆ ಹೇಳಿದರೂ ಕೆಲಸವಾಗುತ್ತಿಲ್ಲ. ಎಂಜಿಪಿ ಸದಸ್ಯರು ಜಿಲ್ಲಾಧಿಕಾರಿ, ಪೊಲೀಸ್ ಆಯುಕ್ತರನ್ನು ಸ್ಥಳ ಪರಿಶೀಲನೆಗೆ ಕರೆದೊಯ್ಯುವಾಗ ತಾವೂ ಬರುವುದಾಗಿ ಭರವಸೆ ನೀಡಿದರು.

ನಗರದಲ್ಲಿ ಒಳಚರಂಡಿ ಸಮಸ್ಯೆ ಅತೀ ಪ್ರಮುಖವಾಗಿದೆ. ನಗರದಲ್ಲಿ ಹಲವು ಕಡೆ ಒಳಚರಂಡಿ ನೀರು ರಸ್ತೆಗಳಿಗೆ ಹರಿಯುತ್ತಿದೆ ಎಂದು ಎಂಜಿಪಿ ಆತಂಕ ವ್ಯಕ್ತಪಡಿಸಿತು.

ಈ ಬಗ್ಗೆ ಮಾಹಿತಿ ನೀಡಿದ ನಿತೇಶ್ ಪಾಟೀಲ್, 30–40 ವರ್ಷಗಳ ಹಿಂದಿನ ಒಳ ಚರಂಡಿ ವ್ಯವಸ್ಥೆಯಲ್ಲಿ ಬಳಸಲಾಗಿದ್ದ ಪೈಪ್‌ಗಳು ಬಹಳ ಚಿಕ್ಕದಾಗಿವೆ. ನಗರದಾದ್ಯಂತ ಅವುಗಳನ್ನು ಬದಲಿಸಿ ಹೊಸ ಪೈಪ್ ಅಳವಡಿಕೆಗೆ ಸಾವಿರದ ಐನೂರು ಕೋಟಿ ವೆಚ್ಚವಾಗುತ್ತದೆ. ತಕ್ಷಣದ ಯುಜಿಡಿ ಸಮಸ್ಯೆ ಪರಿಹಾರಕ್ಕೆ 50 ಕೋಟಿ ರೂ. ಇಡಲಾಗಿದೆ. ಈಗಾಗಲೇ 130 ಕಾಮಗಾರಿಗಳು ಪ್ರಗತಿಯಲ್ಲಿದ್ದು, 10 ಎಸ್‌ಟಿಪಿ ಅಳವಡಿಕೆಗೆ ಡಿಪಿಆರ್ ಸಿದ್ಧಪಡಿಸಲಾಗಿದೆ ಎಂದರು.

ಜೊತೆಗೆ ಮೈಸೂರು ನಗರದಲ್ಲಿ ಸುಮಾರು 350 ಎಂಎಲ್‌ಡಿ ನೀರು ಬಳಕೆಯಾಗುತ್ತದೆ. ಇದರಲ್ಲಿ 150 ಎಂಎಲ್‌ಡಿ ನೀರು ಶುದ್ಧೀಕರಣ ಮಾಡಲಾಗುತ್ತಿದೆ. 170 ಎಂಎಲ್‌ಡಿ ನೀರು ಶುದ್ಧೀಕರಣ ಮಾಡಲು ಸಾಧ್ಯವಾಗುತ್ತಿಲ್ಲ ಎಂದು ವಿವರಿಸಿದರು.

ಪಾಲಿಕೆ ಸೂಪರಿಟೆಂಡೆಂಟ್ ಇಂಜಿನಿಯರ್ ಮಂಜು, ವಲಯ ಕಚೇರಿ 4ರ ಆಯುಕ್ತ ಮಹೇಶ್ ಜಿಗಣಿ, ಮೈಗ್ರಾಪ ಕಾರ್ಯಾಧ್ಯಕ್ಷ ಎಸ್.ಕೆ. ದಿನೇಶ್, ಸಂಚಾಲಕ ಡಿ.ವಿ. ದಯಾನಂದ್ ಸಾಗರ್, ರವಿಚಂದ್ರನ್ ಬೇಕಲ್, ಮಾಳವಿಕ ಗುಬ್ಬಿವಾಣಿ, ಶಂಕರ್, ಅಶೋಕ್, ರಾಕೇಶ್, ಶ್ವೇತಾ ಮಡಪ್ಪಾಡಿ ಉಪಸ್ಥಿತರಿದ್ದರು.

ಮೈಸೂರು ಚಿತ್ರಮಂದಿರಗಳಲ್ಲಿ

ಪದ್ಮ	(ದೂ: 2521923)
ಬ್ಲಾಸ್ಟ್ (ತ)	4 ಪ್ರದರ್ಶನಗಳು
ವುಡ್‌ಲ್ಯಾಂಡ್ಸ್	(ದೂ: 2422871)
ರೆಬೆಲ್ (ತೆ)	4 ಪ್ರದರ್ಶನಗಳು
ಬಾಲಾಜಿ	(ದೂ: 2497199)
ಹಂಟೆಡ್ (ಹಿ)	3 ಪ್ರದರ್ಶನಗಳು
ಮಹದೇಶ್ವರ	(ಮೊ:9900820093)
ಪೆದ್ದಿ (ಕ)	4 ಪ್ರದರ್ಶನಗಳು
ಗಾಯಿತ್ರಿ	
ಲೋ ನವೀನ (ಕ)	4 ಪ್ರದರ್ಶನಗಳು
ರಾಜಕಮಲ್	
ಪರಿಮಳ & ಕಂಪನಿ (ತ)	4 ಪ್ರದರ್ಶನಗಳು
ಸಂಗಂ	
ಪೊಲೀಸ್ ಕಂಪ್ಲೆಂಟ್ (ಕ) + ಮ್ಯಾಂಗೋ ಪಚ್ಚ (ಕ)	2+2 ಪ್ರದರ್ಶನಗಳು
ಲಿಡೋ	
ಕೆಡಿ(ಕ)	4 ಪ್ರದರ್ಶನಗಳು
ತಿಬ್ಬಾದೇವಿ	
–	–
ಪ್ರಭಾ	
ಲೋ ನವೀನ (ಕ)	4 ಪ್ರದರ್ಶನಗಳು

ಗಾಂಜಾ ಮಾರಾಟ ಯತ್ನ; ಯುವಕನ ಬಂಧನ

2 ಲಕ್ಷ ಮೌಲ್ಯದ 2.48 ಕೆಜಿ ಗಾಂಜಾ ವಶಕ್ಕೆ

ಮೈಸೂರು, ಜೂ.11(ಪಿಎಂ)– ಗಾಂಜಾ ಮಾರಾಟಕ್ಕೆ ಯತ್ನಿಸುತ್ತಿದ್ದ ಯುವಕನೊಬ್ಬನನ್ನು ಬಂಧಿಸಿರುವ ವಿಜಯನಗರ ಪೊಲೀಸರು, ಆತನಿಂದ 2 ಲಕ್ಷ ರೂ. ಮೌಲ್ಯದ 2 ಕೆಜಿ 48 ಗ್ರಾಂ ಗಾಂಜಾ, 3 ಸಾವಿರ ರೂ. ನಗದು ಹಾಗೂ ಒಟ್ಟು 25 ಸಾವಿರ ರೂ. ಮೌಲ್ಯದ ಎರಡು ಮೊಬೈಲ್ ಫೋನ್‌ಗಳನ್ನು ವಶಪಡಿಸಿಕೊಂಡಿದ್ದಾರೆ.

ನಗರದ ಹೆಬ್ಬಾಳು 1ನೇ ಹಂತದ ನಿವಾಸಿ ವಿ.ವಿಶ್ವಾಸ್ (23) ಗಾಂಜಾ ಮಾರಾಟಕ್ಕೆ ಯತ್ನಿಸಿ ಪೊಲೀಸರಿಗೆ ಸಿಕ್ಕಿ ಬಿದ್ದಿರುವ ಯುವಕ. ಖಚಿತ ಮಾಹಿತಿ ಮೇರೆಗೆ ದಾಳಿ ನಡೆಸಿದ ಪಿಎಸ್ಐ ಜೈಕೀರ್ತಿ ಮತ್ತು ತಂಡ, ಈತನನ್ನು ಬಂಧಿಸಿ ನ್ಯಾಯಾಂಗ ಬಂಧನಕ್ಕೊಪ್ಪಿಸಿದೆ.

ಜೂ.9ರಂದು ಸಂಜೆ ವಿಜಯನಗರ 4ನೇ ಹಂತದ ಹೈಟೆನ್ಷನ್ ಜೋಡಿ ರಸ್ತೆಯಲ್ಲಿ ಕಾಲೇಜು ಬ್ಯಾಗ್ ಅನ್ನು ಬೆನ್ನಿಗೆ ಹಾಕಿಕೊಂಡು ಕುಳಿತಿದ್ದ ವಿಶ್ವಾಸ್, ಪೊಲೀಸರನ್ನು ನೋಡಿ ಪರಾರಿಯಾಗಲು ಪ್ರಯತ್ನಿಸಿದ. ಕೂಡಲೇ ಆತನನ್ನು ಹಿಡಿದು ಪೊಲೀಸರು, ವಿಚಾರಣೆ ನಡೆಸಿದಾಗ, ತಾನು ಗಾಂಜಾ ಸೊಪ್ಪು ಮಾರಾಟ ಮಾಡಲು ಬಂದಿದ್ದು, ನನ್ನ ಬ್ಯಾಗಿನಲ್ಲಿ ಗಾಂಜಾ ಸೊಪ್ಪಿದೆ ಎಂದು ಒಪ್ಪಿಕೊಂಡ. ಈ ಸಂಬಂಧ ವಿಜಯನಗರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ವಾಹನ ಡಿಕ್ಕಿ ಪರಿಣಾಮ ಮುರಿದು ಬಿದ್ದ ಅಲಂಕಾರಿಕ ಕಂಬಗಳು ; ಪ್ರಕರಣ ದಾಖಲು

ಮೈಸೂರು, ಜೂ.11(ಪಿಎಂ)– ಅಪರಿಚಿತ ವಾಹನ ಡಿಕ್ಕಿ ಹೊಡೆದ ಪರಿಣಾಮ ಅರಮನೆ ಕೋಟೆ ಮಾರಮ್ಮ ದೇವಸ್ಥಾನದ ಸಮೀಪ ಫುಟ್‌ಪಾತ್‌ನಲ್ಲಿ ಅಳವಡಿಸಿದ್ದ ಸಾದರಳ್ಳಿ ಕಲ್ಲಿನ ಅಲಂಕಾರಿಕ ಕಂಬಗಳು ಮುರಿದು ಬಿದ್ದಿರುವ ಸಂಬಂಧ ದೇವರಾಜ ಸಂಚಾರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ. ಪಾಲಿಕೆ ವಲಯ ಕಚೇರಿ 1ರ ಅಭಿವೃದ್ಧಿ ಅಧಿಕಾರಿ ಎಸ್.ಎನ್.ಚೇತನ ಅವರು ಜೂ.6ರಂದು ನೀಡಿದ ದೂರಿನನ್ವಯ ಪ್ರಕರಣ ದಾಖಲಾಗಿದೆ.

ನಟನದಲ್ಲಿ ನಾಟಕ 'ಸಂಜೆ ಹಾಡು'

ಮೈಸೂರು, ಜೂ. 11– ಮೈಸೂರಿನ ಮತ್ತು ಸುತ್ತಮುತ್ತಲಿನ ಸದಭಿರುಚಿಯ, ಸಹೃದಯ ರಂಗಾಸಕ್ತರಿಗಾಗಿ ನಟನವು ವಾರಾಂತ್ಯ ರಂಗ ಪ್ರದರ್ಶನಗಳನ್ನು ನಡೆಸುತ್ತಿದ್ದು, ಜೂನ್ 14ರಂದು ಸಂಜೆ 06.30ಕ್ಕೆ ರಾಮಕೃಷ್ಣ ನಗರದಲ್ಲಿರುವ ನಟನ ರಂಗಶಾಲೆಯಲ್ಲಿ ಲಾವಣ್ಯ ಬೈಂದೂರು ಪ್ರಸ್ತುತ ಪಡಿಸುವ 'ಸಂಜೆ ಹಾಡು' ನಾಟಕ ಪ್ರದರ್ಶನಗೊಳ್ಳಲಿದೆ. ನಾಟಕದ ರಚನೆ ರಾಜೇಂದ್ರ ಕಾರಂತ ಹಾಗೂ ನಿರ್ದೇಶನ ಬಿ. ಗಣೇಶ ಕಾರಂತ ಅವರದ್ದು. ಹೆಚ್ಚಿನ ಮಾಹಿತಿಗಾಗಿ 7259537777, 9480468327, 9845595505 ಸಂಪರ್ಕಿಸಬಹುದು.

ದೇವೇಗೌಡರಿಗೆ ರಾಜ್ಯಸಭಾ ಟಿಕೆಟ್ ದೊಡ್ಡದೇನಲ್ಲ...!

●ಮೈಸೂರಲ್ಲಿ ಮಾಜಿ ಸಚಿವ ಹೆಚ್.ಡಿ.ರೇವಣ್ಣ ಪ್ರತಿಕ್ರಿಯೆ
●ಪ್ರಧಾನಿ ಮೋದಿ ಕೈ ಬಲಪಡಿಸುವುದೇ ನಮ್ಮ ಉದ್ದೇಶ

ಮೈಸೂರು,ಜೂ.11(ಎಂಟಿವೈ)– ಮಾಜಿ ಪ್ರಧಾನಿ ಹೆಚ್.ಡಿ.ದೇವೇಗೌಡರಿಗೆ ರಾಜ್ಯಸಭಾ ಸದಸ್ಯ ಸ್ಥಾನ ಮುಖ್ಯ ಅಲ್ಲ, ನಮಗೆ ಪ್ರಧಾನಿ ನರೇಂದ್ರ ಮೋದಿ ಅವರ ಕೈ ಬಲಪಡಿಸುವುದೇ ಮುಖ್ಯ ಎಂದು ಮಾಜಿ ಸಚಿವ ಹೆಚ್.ಡಿ.ರೇವಣ್ಣ ಪ್ರತಿಪಾದಿಸಿದ್ದಾರೆ.



ರೇವಣ್ಣ

ಮೈಸೂರಲ್ಲಿ ಪತ್ರಕರ್ತರೊಂದಿಗೆ ಮಾತನಾಡಿದ ಅವರು, ಹೆಚ್.ಡಿ.ದೇವೇಗೌಡರು ರಾಜ್ಯಸಭಾ ಸ್ಥಾನವನ್ನು ಕೇಳಿರಲಿಲ್ಲ. ಆದರೆ, ಮಾಧ್ಯಮಗಳಲ್ಲಿ ಆ ವಿಚಾರ ಪ್ರಸ್ತಾಪವಾಯಿತು. ಬಿಜೆಪಿ ರಾಜ್ಯಾಧ್ಯಕ್ಷರು ಒಮ್ಮೆ ದೇವೇಗೌಡರ ಹೆಸರು ಪ್ಯಾನಲ್‌ನಲ್ಲಿ ಇದೆ ಎಂದಿದ್ದರು. ಮತ್ತೊಮ್ಮೆ ದೇವೇಗೌಡರ ಹೆಸರು ಇಲ್ಲ ಎಂದರು. ಟಿಕೆಟ್ ಕೊಡದೇ ಇರುವುದಕ್ಕೆ ಬೇಸರವಿಲ್ಲ. ಟಿಕೆಟ್ ವಿಚಾರದಲ್ಲಿ ನಮ್ಮಲ್ಲಿ ಯಾವ ಗೊಂದಲವೂ ಇರಲಿಲ್ಲ. ನಾನಾಗಲೀ, ಹೆಚ್.ಡಿ.ಕುಮಾರಸ್ವಾಮಿಯಾಗಲೀ ಅಥವಾ ಹೆಚ್.ಡಿ.ದೇವೇ ಗೌಡರಾಗಲೀ ರಾಜ್ಯಸಭಾ ಸ್ಥಾನ ಕೊಡಿ ಎಂದು ಬಿಜೆಪಿಯವರನ್ನು ಕೇಳಿರಲಿಲ್ಲ. ಪ್ರಧಾನಿ ಹುದ್ದೆಯನ್ನೇ ತ್ಯಾಗ ಮಾಡಿ ಬಂದ ದೇವೇಗೌಡರಿಗೆ ರಾಜ್ಯಸಭಾ ಸ್ಥಾನ ದೊಡ್ಡದೇನಲ್ಲಾ. ಆದರೆ, ರಾಜ್ಯಸಭಾ ಸ್ಥಾನ ಕೈತಪ್ಪಿದ್ದಕ್ಕೆ ಕಾಂಗ್ರೆಸ್ ಈಗ ಮಾತನಾಡುತ್ತಿರುವುದು ಅಪ್ರಸ್ತುತ. ಈ ಹಿಂದೆ ಹೆಚ್.ಡಿ.ದೇವೇಗೌಡರ ರಾಜಕಾರಣ ಮುಗಿದೇ ಹೋಯಿತು ಎಂದು ಹಲವರು ಹೇಳಿದ್ದರು. ಆದರೆ, ಈಗಲೂ ದೇವೇಗೌಡರು ರಾಜಕಾರಣ ಮಾಡುತ್ತಲೇ ಇದ್ದಾರೆ ಎಂದರು.

ಒಕ್ಕಲಿಗ ಮತ ಚದರುವುದಿಲ್ಲ: ಡಿ.ಕೆ.ಶಿವಕುಮಾರ್ ಮುಖ್ಯಮಂತ್ರಿ ಆಗಿರುವುದರಿಂದ ಒಕ್ಕಲಿಗ ಮತಗಳು ಜೆಡಿಎಸ್‌ನಿಂದ ಚದುರುವುದಿಲ್ಲ. 2004ರಲ್ಲಿ ಎಸ್.ಎಂ.ಕೃಷ್ಣ ಮುಖ್ಯಮಂತ್ರಿಯಾಗಿದ್ದರು. ಆಗ ಒಕ್ಕಲಿಗ ಮತಗಳು ಕಾಂಗ್ರೆಸ್ ಜೊತೆ ಹೋಗಿತ್ತಾ? ಎಂದು ಪ್ರಶ್ನಿಸಿದ ಅವರು, ಜೆಡಿಎಸ್ ಒಕ್ಕಲಿಗೆ ಓಟ್ ಬ್ಯಾಂಕ್‌ಗೆ ಈ ಹಿಂದೆಯೂ ಸಮಸ್ಯೆಯಾಗಿಲ್ಲ, ಮುಂದೆಯೂ ಆಗುವುದಿಲ್ಲ. ಡಿಕೆ ಮುಖ್ಯಮಂತ್ರಿಯಾಗಿರುವುದಕ್ಕೂ, ಒಕ್ಕಲಿಗ ಮತ ಬ್ಯಾಂಕ್‌ಗೂ ಸಂಬಂಧವೇ ಇಲ್ಲ ಎಂದು ಸ್ಪಷ್ಟಪಡಿಸಿದರು.

ಮುಖ್ಯಮಂತ್ರಿಯಾಗಿ ಸಿದ್ದರಾಮಯ್ಯ ಮುಂದುವರೆಯುತ್ತಾರೆ ಎಂದು ನಾನು ಊಹಿಸಿದ್ದೆ. ಆದರೆ, ಏನೋ ಒಪ್ಪಂದ ಮಾಡಿಕೊಂಡಿದ್ದರಿಂದ ಸಿದ್ದರಾಮಯ್ಯ ಅವರು ಅಧಿಕಾರ ಬಿಟ್ಟುಕೊಟ್ಟಿದ್ದಾರೆ. ನಮ್ಮ ಸಮಾಜದ ಒಬ್ಬರು ಸಿಎಂ ಆಗಿದ್ದಾರೆ. ಆಗಲಿ ಬಿಡಿ. ಅವರೂ ಆಡಳಿತ ನಡೆಸಲಿ ಬಿಡಿ ಎಂದರಲ್ಲದೆ, 2028 ಚುನಾವಣೆಯ ಬಗ್ಗೆ ಈಗಲೇ ಯಾಕೆ ಮಾತು ಎಂದು ಪ್ರತಿಕ್ರಿಯಿಸಲು ನಿರಾಕರಿಸಿದರು.

ಜಿ.ಟಿ.ದೇವೇಗೌಡರು ಜೆಡಿಎಸ್ ಬಿಡಲ್ಲ...!

ಮಾಜಿ ಸಚಿವ ಜಿ.ಟಿ.ದೇವೇಗೌಡ ಜೆಡಿಎಸ್ ಬಿಡಲ್ಲ. ಅವರು ಮುಂದಿನ ಚುನಾವಣೆಯಲ್ಲಿ ಜೆಡಿಎಸ್‌ನಿಂದಲೇ ಸ್ಪರ್ಧಿಸುತ್ತಾರೆ. ನಾನು ಹೆಚ್.ಡಿ.ಕುಮಾರಸ್ವಾಮಿ, ಜಿ.ಟಿ.ದೇವೇಗೌಡ ಹಾಗೂ ಸಾರಾ ಮಹೇಶ್ ಎಲ್ಲರೂ ಒಟ್ಟಾಗಿ ಮಾತನಾಡಿ ಸಮಸ್ಯೆಯನ್ನು ಬಗೆಹರಿಸುತ್ತೇವೆ. ಜಿ.ಟಿ.ದೇವೇಗೌಡರು ನಮ್ಮನ್ನ ಬಿಟ್ಟು ಎಲ್ಲೂ ಹೋಗುವುದಿಲ್ಲ. ಈಗಾಗಲೇ ಜಿ.ಟಿದೇವೇಗೌಡರು ಹೆಚ್.ಡಿ.ದೇವೇಗೌಡರನ್ನು ಖುದ್ದಾಗಿ ಭೇಟಿ ಮಾಡಿ ಹೇಳಿದ್ದಾರೆ. ಈ ಸಮಸ್ಯೆ ಬಗೆಹರಿಯುತ್ತದೆ. ಹಾಸನದಲ್ಲಿರುವವರು ಬಿಜೆಪಿ ರಾಜ್ಯ ಪ್ರಧಾನ ಕಾರ್ಯದರ್ಶಿಯೋ ಅಥವಾ ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿಯೋ ಎಂದು ನಮಗೆ ಗೊತ್ತಿಲ್ಲ. ಅವರು ಯಾವ ಪಕ್ಷದ ಪ್ರಧಾನ ಕಾರ್ಯದರ್ಶಿ ಎಂದು ಬಿಜೆಪಿ ರಾಜ್ಯಾಧ್ಯಕ್ಷರೇ ಹೇಳಬೇಕು ಎಂದು ಪ್ರೀತಂಗೌಡರ ವಿಚಾರದಲ್ಲಿ ಮಾರ್ಮಿಕವಾಗಿ ನುಡಿದರು.

ಧರ್ಮಸ್ಥಳ ಬುರುಡೆ ಕೇಸ್: ತನಿಖಾ ವರದಿ ಬಹಿರಂಗಕ್ಕೆ ಚಿನ್ನಯ್ಯ ಅರ್ಜಿ

ಸರ್ಕಾರ, ಎಸ್‌ಐಟಿಗೆ ಹೈಕೋರ್ಟ್ ನೋಟಿಸ್

ಬೆಂಗಳೂರು: ಧರ್ಮಸ್ಥಳ ಗ್ರಾಮದ ಬುರುಡೆ ಪ್ರಕರಣದ ತನಿಖಾ ವರದಿ ಬಹಿರಂಗಪಡಿಸುವಂತೆ ಕೋರಿ ದೂರುದಾರ ಚಿನ್ನಯ್ಯ ಸಲ್ಲಿಸಿರುವ ಅರ್ಜಿ ವಿಚಾರಣೆ ನಡೆಸಿದ ಹೈಕೋರ್ಟ್, ಸರ್ಕಾರ ಮತ್ತು ವಿಶೇಷ ತನಿಖಾ ದಳ(ಎಸ್‌ಐಟಿ)ಕ್ಕೆ ಗುರುವಾರ ನೋಟಿಸ್ ಜಾರಿಗೊಳಿಸಿದೆ.



ತನಿಖೆಯ ಸ್ಥಿತಿಗತಿ ಬಗ್ಗೆ ಮಾಹಿತಿ ನೀಡಲು ಎಸ್‌ಐಟಿಗೆ ಸೂಚನೆ ನೀಡಬೇಕೆಂದು ಕೋರಿ ಸಿ.ಎನ್.ಚಿನ್ನ (ಚಿನ್ನಯ್ಯ) ಸಲ್ಲಿಸಿದ್ದ ಅರ್ಜಿಯನ್ನು ನ್ಯಾಯಮೂರ್ತಿ ಸೂರಜ್ ಗೋವಿಂದರಾಜ್ ಅವರಿದ್ದ ಏಕ ಸದಸ್ಯಪೀಠ ವಿಚಾರಣೆ ನಡೆಸಿತು.

ಕೆಲ ಕಾಲ ವಾದ ಆಲಿಸಿದ ಬಳಿಕ ನ್ಯಾಯಾಲಯವು ಪ್ರತಿವಾದಿಗಳಿಗೆ ನೋಟಿಸ್ ಜಾರಿಗೊಳಿಸಿ, ಎಸ್‌ಐಟಿ ತನಿಖೆಯ ಸ್ಥಿತಿಗತಿಯ ಕುರಿತು ವಿವರ ಒದಗಿಸುವಂತೆ ಸರ್ಕಾರಕ್ಕೆ ಸೂಚನೆ ನೀಡಿ ವಿಚಾರಣೆಯನ್ನು ಜೂ.29ಕ್ಕೆ ಮುಂದೂಡಿತು.

ವಿಚಾರಣೆ ವೇಳೆ ದೂರುದಾರರ ಪರ ವಕೀಲರು, ನಿಜವಾದ ಆರೋಪಿಗಳನ್ನು ಹೆಸರಿಸಿದ್ದರೂ ಎಸ್‌ಐಟಿ ಕ್ರಮ ಕೈಗೊಂಡಿಲ್ಲ. ಪ್ರಾಥಮಿಕ ವರದಿಯಲ್ಲಿರುವವರ ಮೇಲೆ ಸರಿಯಾದ ತನಿಖೆ ನಡೆದಿಲ್ಲ. ಇಷ್ಟು ದಿನಗಳಾದರೂ ಎಸ್‌ಐಟಿ ಎಫ್‌ಐಆರ್ ನಂ.39/2025ರ ತನಿಖೆ ಪೂರ್ಣಗೊಳಿಸಿಲ್ಲ. ಹಾಗಾಗಿ, ಎಸ್‌ಐಟಿ ಹಾಗೂ ಸರ್ಕಾರಕ್ಕೆ ನಿರ್ದೇಶನ ನೀಡಬೇಕೆಂದು ಕೋರಿದರು.

ಅಭಿನಂದನೆ



ಬೆಂಗಳೂರಿನಲ್ಲಿ ನಗರಾಭಿವೃದ್ಧಿ ಸಚಿವ ಡಾ.ಯತೀಂದ್ರ ಸಿದ್ದರಾಮಯ್ಯ ಅವರನ್ನು ಕೆಪಿಸಿಸಿ ಓಬಿಸಿ ವಿಭಾಗದ ಕಾರ್ಯದರ್ಶಿ ಹರೀಶ್ ಮೊಗಣ್ಣ ನೇತೃತ್ವದಲ್ಲಿ ಆತ್ಮೀಯವಾಗಿ ಅಭಿನಂದಿಸಲಾಯಿತು. ಈ ವೇಳೆ ಮೈಸೂರಿನ 46ನೇ ವಾರ್ಡ್ ಮುಖಂಡರಾದ ವಿಕ್ಕಿವಾಸು, ಹಿರಿಯರಾದ ಶಿವಣ್ಣ, ದಿನೇಶ್ ನಾಗರಾಜ್, ವಿಜಯಕುಮಾರ್, ಅನಿಲ್ ಕುಮಾರ್, ಅಮಿತ್, ಸುಜಿತ್ ಮತ್ತಿತರರು ಉಪಸ್ಥಿತರಿದ್ದರು.

ಬೀದಿಬದಿ ವ್ಯಾಪಾರಿಗಳ ಅಹವಾಲು ಸ್ವೀಕರಿಸಿದ ವಿಧಾನ ಮಂಡಲ ಅಧೀನ ಶಾಸಕ ರಚನಾ ಸಮಿತಿ

ವ್ಯಾಪಾರಿಗಳ ಹಕ್ಕು ರಕ್ಷಣೆಗೆ ಬದ್ಧ: ಸಮಿತಿ ಅಧ್ಯಕ್ಷ ಶಾಸಕ ಎಸ್.ಆರ್.ಶ್ರೀನಿವಾಸ್ ಭರವಸೆ

ಮೈಸೂರು, ಜೂ.11(ವಿವಿಹೆಚ್)– ನಗರದ ಚಿಕ್ಕಗಡಿಯಾರ ವೃತ್ತದಲ್ಲಿ ಬೀದಿಬದಿ ವ್ಯಾಪಾರಿಗಳೊಂದಿಗೆ ಕರ್ನಾಟಕ ವಿಧಾನ ಮಂಡಲ ಅಧೀನ ಶಾಸನ ರಚನಾ ಸಮಿತಿ ಅಧ್ಯಕ್ಷರೂ ಆದ ಗುಬ್ಬಿ ಕ್ಷೇತ್ರದ ಶಾಸಕ ಎಸ್.ಆರ್.ಶ್ರೀನಿವಾಸ್ ಸಂವಾದ ನಡೆಸಿ, ಸಮಸ್ಯೆಗಳು ಹಾಗೂ ಅಹವಾಲುಗಳನ್ನು ಆಲಿಸಿದರು.



ಬೀದಿಬದಿ ವ್ಯಾಪಾರಿಯೊಂದಿಗೆ ಶಾಸಕ ಎಸ್.ಆರ್.ಶ್ರೀನಿವಾಸ್ ಸಂವಾದ ನಡೆಸಿದರು. ಈ ವೇಳೆ ಶಾಸಕ ಜಿ.ಡಿ.ಹರೀಶ್ ಗೌಡ, ಎಂಎಲ್‌ಸಿಗಳಾದ ಕೆ.ಶಿವಕುಮಾರ್, ಶರವಣ್ ಉಪಸ್ಥಿತರಿದ್ದಾರೆ.

ಬೀದಿ ಬದಿಯ ಪ್ರತಿಯೊಬ್ಬ ವ್ಯಾಪಾರಿಯೊಂದಿಗೂ ನೇರ ಸಂವಾದ ನಡೆಸಿದ ಅಧ್ಯಕ್ಷರು, ಯಾವುದೇ ತೊಂದರೆ, ತಗಾದೆ ಇದ್ದಲ್ಲಿ ನೇರವಾಗಿ ಹಂಚಿಕೊಳ್ಳಿ, ನಿಮ್ಮ ಕಷ್ಟಗಳಿಗೆ ಸ್ಪಂದಿಸುವ ಸಲುವಾಗಿಯೇ ನಾವಿಲ್ಲಿಗೆ ಬಂದಿದ್ದೇವೆ. ಪಾಲಿಕೆ, ಸಂಬಂಧಪಟ್ಟ ಅಧಿಕಾರಿ ವರ್ಗ ನಿಮ್ಮಗಳ ಕಷ್ಟಗಳಿಗೆ ಪರಿಹಾರ ಕಂಡುಕೊಳ್ಳುವುದಕ್ಕಾಗಿಯೇ ಇವೆ. ವ್ಯಾಪಾರಿಗಳ ಹಕ್ಕುಗಳನ್ನು ರಕ್ಷಿಸುವ ಜೊತೆಗೆ ಸರ್ಕಾರ ಸದಾ ನಿಮ್ಮ ಬೆಂಬಲಕ್ಕೆ ನಿಲ್ಲಲಿದೆ ಎಂದು ಸಂವಾದ ನಡೆಸಿದರು.

ಅಧ್ಯಕ್ಷರಿಗೆ ಸಕಾರಾತ್ಮಕವಾಗಿಯೇ ಸ್ಪಂದಿಸಿದ ವ್ಯಾಪಾರಿಗಳು, ತಮಗೆ ಯಾವುದೇ ತೊಂದರೆ ಇಲ್ಲವೆಂದು, ವ್ಯಾಪಾರಕ್ಕಾಗಿ ಅಧಿಕೃತ ಚೀಟಿ ನೀಡಿದ್ದಾರೆ. ಮುಕ್ತವಾಗಿ ವ್ಯಾಪಾರ ಮಾಡಲು ಅನುವು ಮಾಡಿಕೊಟ್ಟಿದ್ದಾರೆ ಎಂದು ತಿಳಿಸಿದರು. ನಂತರ ಬೀದಿಬದಿ ವ್ಯಾಪಾರಿಗಳಿಂದ ಶ್ರೀನಿವಾಸ್, ಸೇಬು, ಬಾಳೆಹಣ್ಣು ಖರೀದಿಸಿ, ಮೈಸೂರು ಪಾಕ್ ಸವಿದರು.

ಬಳಿಕ ಮಾಧ್ಯಮಗಳೊಂದಿಗೆ ಮಾತನಾಡಿದ ಶಾಸಕ ಶ್ರೀನಿವಾಸ್, ಬೀದಿ ಬದಿ ವ್ಯಾಪಾರಿಗಳ ಸ್ಥಿತಿಗತಿಗಳ ಬಗ್ಗೆ ಪರಿಶೀಲನೆ ನಡೆಸಲಾಗುತ್ತಿದೆ. ವ್ಯಾಪಾರಿಗಳ ಹಿತರಕ್ಷಣೆಗೆ ಬೇಕಾಗಿರುವ ಎಲ್ಲಾ ಅಗತ್ಯ ಕ್ರಮಗಳನ್ನು ಕೈಗೊಳ್ಳುವಂತೆ ನರಗಪಾಲಿಕೆಗೆ ಈಗಾಗಲೇ ಸೂಚನೆ ನೀಡಲಾಗಿದೆ ಎಂದರು.

ಬೀದಿಬದಿ ವ್ಯಾಪಾರಿಗಳ ಕುಂದುಕೊರತೆ ಸಂಬಂಧ ಅಧಿಕಾರಿಗಳೊಂದಿಗೆ ಮತ್ತೊಮ್ಮೆ ಸಭೆ ನಡೆಸಿ, ಮೂಲಭೂತ ಸೌಕರ್ಯ ಸೇರಿದಂತೆ ಸಾಧಕ–ಬಾಧಕಗಳ ಕುರಿತು ಚರ್ಚೆ ನಡೆಸಲಾಗುವುದು ಎಂದು ತಿಳಿಸಿದರು.

ಬೀದಿ ಬದಿ ವ್ಯಾಪಾರಿಗಳಿಗೆ ಗುರುತಿನ ಚೀಟಿ ನೀಡಲಾಗಿದೆ. ಆದರೆ, ಎಲ್ಲರೂ ಮನೆಯಲ್ಲಿಯೇ ಚೀಟಿ ಇರಿಸಿದ್ದೇವೆ ಎಂದು ಸಾಮೂಹಿಕವಾಗಿ ಉತ್ತರಿಸಿದ್ದಾರೆ ಎಂದು ಕೇಳಲಾದ ಪ್ರಶ್ನೆಗೆ, ಬೀದಿ ಬದಿ ವ್ಯಾಪಾರಿಗಳಿಗೆ ಗುರುತಿನ ಚೀಟಿ ನೀಡುವ ಪ್ರಕ್ರಿಯೆಗೆ ಸಂಬಂಧಿಸಿದಂತೆ ಸರ್ವೇ ನಡೆಸಲು ಹೊಸದಾಗಿ ಟೆಂಡರ್ ಕರೆಯಲಾಗಿದೆ. ಈ ಹಿಂದೆ ಟೆಂಡರ್ ಪಡೆದಿದ್ದ ಸಂಸ್ಥೆಯು ಸಮರ್ಪಕವಾಗಿ ಕೆಲಸ ನಿರ್ವಹಿಸದ ಕಾರಣ ಪ್ರಕ್ರಿಯೆಯಲ್ಲಿ ವಿಳಂಬವಾಗಿತ್ತು. ಹೀಗಾಗಿ, ಈ ಬಾರಿ ಪಾಲಿಕೆ ವತಿಯಿಂದ ಸರ್ವೇ ನಡೆಸಿ, ಯಾರಿಗೆಲ್ಲಾ ಗುರುತಿನ ಚೀಟಿ ಮಿಸ್ ಆಗಿದೆಯೋ, ಅವರಿಗೆ ತಪ್ಪದೇ ಕಾರ್ಡ್ ತಲುಪಿಸುವಂತೆ ಪಾಲಿಕೆ ಆಯುಕ್ತರಿಗೆ ಕಟ್ಟುನಿಟ್ಟಿನ ಸೂಚನೆ ನೀಡಲಾಗಿದೆ ಎಂದು ಉತ್ತರಿಸಿದರು.

ಸರ್ಕಾರ ನೀಡುವ ಆರ್ಥಿಕ ನೆರವು ಮತ್ತು ಸವಲತ್ತುಗಳನ್ನು ಬಳಸಿಕೊಂಡು ವ್ಯಾಪಾರವನ್ನು ಹೇಗೆ ವೃದ್ಧಿಸಿಕೊಳ್ಳಬೇಕು ಎಂಬುದು ಅವರವರ ವೈಯಕ್ತಿಕ ನಿರ್ಧಾರಕ್ಕೆ ಬಿಟ್ಟಿದ್ದಾಗಿರುತ್ತದೆ. ಆದರೆ, ಸರ್ಕಾರದಿಂದ ಸಿಗಬೇಕಾದ ಮೂಲಭೂತ ಸೌಲಭ್ಯಗಳು ಪ್ರತಿಯೊಬ್ಬರಿಗೂ ಸರಿಯಾಗಿ ತಲುಪುತ್ತಿವೆಯೇ ಇಲ್ಲವೇ ಎಂಬುದನ್ನು ಪರಿಶೀಲಿಸುವುದು ನಮ್ಮ ಕರ್ತವ್ಯ. ಒಂದು ವೇಳೆ ಸೌಲಭ್ಯ ತಲುಪದೇ ಇದ್ದರೆ, ಅದನ್ನು ಪ್ರತಿಯೊಬ್ಬರಿಗೂ ತಲುಪಿಸುವ ಪ್ರಾಮಾಣಿಕ ವ್ಯವಸ್ಥೆಯನ್ನು ನಮ್ಮ ಸರ್ಕಾರ ಮಾಡುತ್ತದೆ ಎಂದು ಭರವಸೆ ನೀಡಿದರು.

ವ್ಯಾಪಾರಿಗಳ ಗುರುತಿಸುವಿಕೆ ಹಾಗೂ ಸರ್ಕಾರದ ಸೌಲಭ್ಯಗಳ ವಿತರಣಾ ಪ್ರಕ್ರಿಯೆಯನ್ನು ಮತ್ತಷ್ಟು ಪಾರದರ್ಶಕಗೊಳಿಸಲು ಅಧಿಕಾರಿಗಳೊಂದಿಗೆ ಶೀಘ್ರದಲ್ಲೇ ಮತ್ತೊಂದು ಪ್ರಮುಖ ಸಭೆಯನ್ನು ಆಯೋಜಿಸಲಾಗುವುದು ಎಂದು ಹೇಳಿದರು.

ಈ ವೇಳೆ ಸಮಿತಿಯ ಸದಸ್ಯರು ಹಾಗೂ ವಿಧಾನ ಪರಿಷತ್ ಸದಸ್ಯರಾದ ಶರವಣ್, ಸಮಿತಿಯ ಸದಸ್ಯರು ಹಾಗೂ ವಿಧಾನ ಪರಿಷತ್ ಸದಸ್ಯರಾದ ಕೆ.ಶಿವಕುಮಾರ್, ಶಾಸಕರಾದ ಕೆ.ಹರೀಶ್ ಗೌಡ, ಜಿ.ಡಿ. ಹರೀಶ್ ಗೌಡ, ದರ್ಶನ್ ಧ್ರುವನಾರಾಯಣ್, ಮೈಸೂರು ನಗರ ಪೊಲೀಸ್ ಆಯುಕ್ತೆ ಸೀಮಾ ಲಾಟ್ಕರ್, ಪಾಲಿಕೆ ಆಯುಕ್ತ ಶೇಕ್ ತನ್ವಿರ್ ಆಸೀಫ್, ಡಿಸಿಪಿ ಸುಂದರ್ ರಾಜು, ಟ್ರಾಫಿಕ್ ಎಸಿಪಿ ಶಿವಶಂಕರ್ ಸೇರಿದಂತೆ ವಿವಿಧ ಇಲಾಖೆಗಳ ಅಧಿಕಾರಿಗಳು ಉಪಸ್ಥಿತರಿದ್ದರು.

ಡಾ.ಹೆಚ್.ಸಿ.ಮಹದೇವಪ್ಪರಿಗೆ ಪ್ರಬಲ ಖಾತೆ ನೀಡಲು ಒತ್ತಾಯಿಸಿ ಪ್ರತಿಭಟನೆ; ರಾಜ್ಯ ದಲಿತ ಸಂಘರ್ಷ ಸಮಿತಿ ಭಾಗಿ

ಸಾಮಾಜಿಕ ನ್ಯಾಯದಲ್ಲಿ ಬದ್ಧತೆ ಇದ್ದರೆ ತಮ್ಮ ಪುತ್ರನಿಗಿಂತಲೂ ಮೊದಲು ಮಹದೇವಪ್ಪನವರಿಗೆ ಮಂತ್ರಿ ಮಾಡುವಂತೆ ಕೇಳಬೇಕಿತ್ತು ; ಮಾಜಿ ಸಿಎಂ ಸಿದ್ದರಾಮಯ್ಯ ವಿರುದ್ಧ ಜೀವನಹಳ್ಳಿ ವೆಂಕಟೇಶ್, ದೇವಗಳ್ಳಿ ಸೋಮಶೇಖರ್ ಆಕ್ರೋಶ



ಬೆಂಗಳೂರು ಫ್ರೀಡಂ ಪಾರ್ಕ್‌ನಲ್ಲಿ ಡಾ.ಹೆಚ್.ಸಿ.ಮಹದೇವಪ್ಪರಿಗೆ ಸಚಿವ ಸ್ಥಾನ ನೀಡಲು ಆಗ್ರಹಿಸಿ ಗುರುವಾರ ಪ್ರತಿಭಟನೆ ನಡೆಸಲಾಯಿತು.

ಮೈಸೂರು, ಜೂ.11(ಪಿಎಂ)– ದಲಿತರ ಧ್ವನಿ ಡಾ.ಹೆಚ್.ಸಿ.ಮಹದೇವಪ್ಪ ಅವರಿಗೆ ಮಂತ್ರಿ ಮಂಡಲದಲ್ಲಿ ಸ್ಥಾನ ನೀಡದಿರುವ ಬಗ್ಗೆ ಆಕ್ರೋಶ ವ್ಯಕ್ತಪಡಿಸಿ, ಕೂಡಲೇ ಪ್ರಭಾವಿ ಖಾತೆ ನೀಡಿ ಆಗಿರುವ ಅನ್ಯಾಯ ಸರಿಪಡಿಸಬೇಕು ಎಂದು ಒತ್ತಾಯಿಸಿ ಬೆಂಗಳೂರು ಫ್ರೀಡಂ ಪಾರ್ಕ್‌ನಲ್ಲಿ ಗುರುವಾರ ರಾಜ್ಯದ ದಲಿತ ಸಂಘಟನೆಗಳು ಪ್ರತಿಭಟನೆ ನಡೆಸಿದ್ದು, ಕರ್ನಾಟಕ ರಾಜ್ಯ ದಲಿತ ಸಂಘರ್ಷ ಸಮಿತಿ (ಲಕ್ಷ್ಮೀ ನಾರಾಯಣ ನಾಗವಾರ ಸ್ಥಾಪಿತ)ಯೂ ಭಾಗವಹಿಸಿ ದಲಿತ ಸಂಘಟನೆಗಳ ಒತ್ತಾಯವನ್ನು ಬೆಂಬಲಿಸಿದೆ.

ದಲಿತ ಸಂಘರ್ಷ ಸಮಿತಿ ರಾಜ್ಯ ಸಂಚಾಲಕ ಜೀವನಹಳ್ಳಿ ವೆಂಕಟೇಶ್ ಹಾಗೂ ರಾಜ್ಯ ಸಂಘಟನಾ ಸಂಚಾಲಕ ದೇವಗಳ್ಳಿ ಸೋಮಶೇಖರ್ ಪ್ರಕಟಣೆಯಲ್ಲಿ ಈ ವಿಷಯ ತಿಳಿಸಿದ್ದಾರೆ. ಮಾಜಿ ಸಿಎಂ ಸಿದ್ದರಾಮಯ್ಯನವರು ಇಷ್ಟೊಂದು ದೊಡ್ಡ ಸ್ಥಾನಮಾನ ಪಡೆದುಕೊಂಡಿರುವುದರ ಹಿಂದೆ ಡಾ.ಹೆಚ್.ಸಿ.ಮಹದೇವಪ್ಪನವರ ಶ್ರಮ ಅಪಾರ. ಆದರೆ ಸಿದ್ದರಾಮಯ್ಯ ಎಲ್ಲಾ ಅಧಿಕಾರ ಪಡೆದ ನಂತರ ಮಹದೇವಪ್ಪನವರನ್ನು ಕಡೆಗಣಿಸಿದ್ದು, ಇದನ್ನು ಸಹಿಸಲಾಗದು. ಕೂಡಲೇ ಡಾ.ಮಹದೇವಪ್ಪನವರಿಗೆ ಪ್ರಬಲ ಮಂತ್ರಿ ಸ್ಥಾನ ನೀಡಬೇಕು ಎಂದು ಒತ್ತಾಯಿಸಿದ್ದಾರೆ.

ಸಿದ್ದರಾಮಯ್ಯನವರಿಗೆ ನಿಜವಾಗಲೂ ಸಾಮಾಜಿಕ ನ್ಯಾಯದ ಬಗ್ಗೆ ಬದ್ಧತೆ, ಗೌರವ ಇದ್ದರೆ ತಮ್ಮ ಪುತ್ರನಿಗಿಂತಲೂ ಮೊದಲು ಮಹದೇವಪ್ಪನವರಿಗೆ ಮಂತ್ರಿ ಮಾಡುವಂತೆ ಹೇಳಬೇಕಿತ್ತು. ಆದರೆ, ಸಿದ್ದರಾಮಯ್ಯ ಒಬ್ಬ ಅವಕಾಶವಾದಿ, ಸ್ವಾರ್ಥ ರಾಜಕಾರಣಿ ಎಂಬುದನ್ನು ತೋರಿಸಿಕೊಟ್ಟಿದ್ದು, ಅವರನ್ನು ನಂಬಿದ್ದ ದಲಿತರಿಗೆ ಆಘಾತವಾಗಿದೆ. ಮಹದೇವಪ್ಪ ಇಲ್ಲದಿದ್ದರೆ ಸಿದ್ದರಾಮಯ್ಯ ಏನೇನು ಇಲ್ಲ. ಅವರ ಎಲ್ಲ ಬೆಳವಣಿಗೆಯಲ್ಲೂ ಅವರ ಪಾತ್ರವಿದೆ. ಇದನ್ನು ಸಿದ್ದರಾಮಯ್ಯ ಮರೆತಿರುವುದು ದುರ್ದೈವದ ಸಂಗತಿ.

ಇದು ಹೀಗೆಯೇ ಮುಂದುವರೆದರೆ ಸಿದ್ದರಾಮಯ್ಯ ಮತ್ತು ಕಾಂಗ್ರೆಸ್‌ಗೆ ದೊಡ್ಡ ನಷ್ಟ ಆಗಲಿದೆ. ಸಿದ್ದರಾಮಯ್ಯ ಕಾಂಗ್ರೆಸ್ ಪಕ್ಷವನ್ನು ಕೇವಲ ಬಾಡಿಗೆ ಮನೆ ರೀತಿ ಹೇಗೆ ಬೇಕೋ ಹಾಗೆ ಬಳಸಿಕೊಂಡಿದ್ದಾರೆ. ಕಾಂಗ್ರೆಸ್ ಪಕ್ಷ ಸರ್ವನಾಶ ಆಗಬೇಕು ಎಂಬುದೇ ಸಿದ್ದರಾಮಯ್ಯರ ಉದ್ದೇಶ. ಹಾಗಾಗಿ ಅವರ ಸರ್ಕಾರದ ಅವಧಿಯಲ್ಲಿ ಒಬ್ಬೇ ಒಬ್ಬ ಮೂಲ ಕಾಂಗ್ರೆಸ್ ಕಾರ್ಯಕರ್ತರಿಗೆ ನಿಗಮ ಮಂಡಳಿ ಸ್ಥಾನ ಕೊಡಲಿಲ್ಲ ಮತ್ತು ಕಾಂಗ್ರೆಸ್ ಪಿಲ್ಲರ್ ಎಂದು ಕರೆಯುವ ಪಕ್ಷದ ಕಾರ್ಯಕರ್ತರಿಗೆ ನಿಗಮ, ಮಂಡಳಿ ಸದಸ್ಯತ್ವವನ್ನೂ ಕೊಡಲಿಲ್ಲ. ಕಾರ್ಯಕರ್ತರು ಗಟ್ಟಿಯಾದರೆ ಪಕ್ಷ ಗಟ್ಟಿಯಾಗುತ್ತದೆ ಎನ್ನುವ ಕಾರಣಕ್ಕೆ ಸದಸ್ಯರನ್ನಾಗಿ ಮಾಡಲಿಲ್ಲ. ಇದನ್ನು ಕಾಂಗ್ರೆಸ್ ಹೈಕಮಾಂಡ್ ಅರ್ಥ ಮಾಡಿಕೊಂಡು ಸಿದ್ದರಾಮಯ್ಯನವರನ್ನು ಪಕ್ಷದಿಂದ ದೂರ ಇಡುವ ಕೆಲಸ ಮಾಡಬೇಕು.

ಈಗಲೂ ಡಿ.ಕೆ.ಶಿವಕುಮಾರ್ ಸರ್ಕಾರವನ್ನು ಸಹ ಸರಿಯಾಗಿ ನಡೆಯಲು ಸಿದ್ದರಾಮಯ್ಯ ಬಿಡಲ್ಲ. ಅವರ ಬೆಂಬಲಿಗರನ್ನು ಬಿಜೆಪಿಗೆ ಕಳಿಸಲು ಸಿದ್ದರಾಮಯ್ಯ ಚಿಂತನೆ ನಡೆಸಿದ್ದಾರೆ. ಆದರಿಂದ ಸಿದ್ದರಾಮಯ್ಯನವರ ಬಗ್ಗೆ ಎಚ್ಚರಿಕೆಯಿಂದ ಇರುವುದು ಅಗತ್ಯ. ಇಡೀ ದಲಿತ ಸಮುದಾಯಗಳನ್ನು ಒಗ್ಗೂಡಿಸಿ ಕಾಂಗ್ರೆಸ್‌ಗೆ ಶೇ.90ರಷ್ಟು ಮತ ಸಿಗುವಂತೆ ಮಾಡಿದ್ದು ಡಾ.ಹೆಚ್.ಸಿ.ಮಹದೇವಪ್ಪ. ಅವರನ್ನು ಮಂತ್ರಿ ಮಾಡಬೇಕೆಂದು ಅಗ್ರಹಿಸುತ್ತೇವೆ. ತಪ್ಪಿದಲ್ಲಿ ಮುಂದಿನ ಎಲ್ಲಾ ಚುನಾವಣೆಗಳಲ್ಲೂ ಸೋಲಿಸುತ್ತೇವೆ. ಕಾಂಗ್ರೆಸ್ ಪಕ್ಷವನ್ನು ಬುಡಸಮೇತ ಕಿತ್ತು ಹಾಕುತ್ತೇವೆ ಎಂಬ ಎಚ್ಚರಿಕೆ ನೀಡಲು ಬಯಸುತ್ತೇವೆ. ಅದಕ್ಕೆ ಅವಕಾಶ ನೀಡದೆ ಕೂಡಲೇ ಮಹದೇವಪ್ಪ ಸೇರಿದಂತೆ ಕನಿಷ್ಠ 5 ಮಂದಿ ನಾಯಕರಿಗೆ ಕ್ಯಾಬಿನೇಟ್ ಮಂತ್ರಿ ಸ್ಥಾನ ನೀಡಬೇಕು ಎಂದು ಆಗ್ರಹಿಸುತ್ತೇವೆಂದು ಜೀವನಹಳ್ಳಿ ವೆಂಕಟೇಶ್ ಹಾಗೂ ದೇವಗಳ್ಳಿ ಸೋಮಶೇಖರ್ ತಿಳಿಸಿದ್ದಾರೆ.

SITE FOR SALE in MYSORE

- 50 x 80 site for sale (can be used for commercial purpose) with Built up area of 24 sqft in No 982, Panchamantra Road, Kuvempu Nagar, Mysuru.
- Site no 4, 1750 sq feet, triangle shape 86x70x50, main road on 50 feet side and 86 feet site, SBM layout near Aravind Nagar temple.
- 11979sqft of land on top of Chamundi hill, Next to bus stand.

Call:
93416 22476 / 93796 12572

HOUSE FOR RENT

30 X 40 Site, West Facing 2 Bedroom House, One Attached Bathroom, One Common Bathroom with Good Car Parking, 4th Stage, Vijaya Nagar, Near NPS School, Mysore.

Mob.9900481320

ಮುಡಾ /ಎಂಡಿಎ ಅಪ್ರೂವ್ಡ್ ನಿವೇಶನಗಳು ಮಾರಾಟಕ್ಕಿವೆ

ಇನ್ಫೋಸಿಸ್ ಹಿಂಭಾಗ, ಮೈಸೂರು

20x30 30x40 & 30x50

ಎಲ್ಲಾ ದಿಕ್ಕುಗಳ ನಿವೇಶನಗಳು ಲಭ್ಯವಿದೆ.

ರೂ. 3500/- ಚದರ ಅಡಿ. ನೆಗೋಶಿಯಬಲ್

Mob: 9900466811 9686573798 9972297217

ಬೇಕಾಗಿದ್ದಾರೆ

ತಕ್ಷಣದ ನೇಮಕಾತಿಗಾಗಿ ಮಣಿಪಾಲ್ ಆಸ್ಪತ್ರೆಯಿಂದ ಕೇವಲ 4 ಕಿಮೀ ದೂರದಲ್ಲಿ ನೆಲೆಗೊಂಡಿರುವ ಪ್ರತಿಷ್ಠಿತ ಕಂಪನಿಗೆ ಡ್ರೈವರ್ (Driver) ವಿದ್ಯಾಸಂಸ್ಥೆಗಳು / ಕಚೇರಿಗಳಲ್ಲಿ / ಕಂಪೆನಿಗಳಲ್ಲಿ ಕೆಲಸ ಮಾಡಿ ಅನುಭವವಿರುವ ಅಭ್ಯರ್ಥಿಗಳು ಬೇಕಾಗಿದ್ದಾರೆ. ತಕ್ಷಣ ಸಂಪರ್ಕಿಸಿ:
email: technoresourceservices@gmail.com

Mobile: 9035238713

ಕೇರಳ ಶ್ರೀ ಭಗವತಿ ಜ್ಯೋತಿಷ್ಯರು
INDIAN FAMOUS ASTROLOGER

ಪಂ: ಎಸ್. ಮಣಿಕಂಠನ್, ಮೊ: 9480743991

ಇವರು ಅಷ್ಟಮಂಗಳ ಪ್ರಶ್ನೆ, ಅರೂಡು ಪ್ರಶ್ನೆ, ತಾಂಬೂಲ ಪ್ರಶ್ನೆ, ವಾಸ್ತು ಪ್ರಶ್ನೆ, ಉದಾ: ವಿದ್ಯೆ ಉದ್ಯೋಗ ಸ್ತ್ರೀ ಪುರುಷ ಪ್ರೇಮ ವಿವಾಹ ಸಂತಾನ ಯೋಗ, ಮನೆಯಲ್ಲಿ ನೆಮ್ಮದಿ ಇಲ್ಲದಿರುವುದು, ಧೈರ್ಯ ಕಡಿಮೆ, ಮರಣ ಭಯ, ಕೋರ್ಟ್ ಕೆಲಸ ಇನ್ನು ಅನೇಕ ಸಮಸ್ಯೆಗಳಿಗೆ ಶಿಷ್ಟಚಾರ ಭಗವತಿ ಕ್ರಿಯೆಯಿಂದ ಕೇರಳದ ಕುಟ್ಟಿ ಚೇತನ್ ನಿಂದ 3 ಶೀಘ್ರ ಮತ್ತು ಶಾಶ್ವತ ಪರಿಹರ ನೀಡುತ್ತಾರೆ. ಖಾಯಂ ವಿಳಾಸ ಅಶೋಕ ರೋಡ್, ಈಸ್ಟ್‌ಕ್ರಾಸ್, 36, ಮೈಸೂರು, ಲ್ಯಾಂಡ್‌ಮಾರ್ಕ್: ಕನ್ನಿಕಾಪರಮೇಶ್ವರಿ ದೇವಸ್ಥಾನದ ಹತ್ತಿರ

ಇಲ್ಲಿ ಹೇಳುವ ವಿಷಯಗಳನ್ನು, ಗುಪ್ತವಾಗಿ ಇಡಲಾಗುವುದು.

TOYOTA | MODY GROUP

WALK-IN INTERVIEW

13th-Sat & 14th-Sun June 2026 From 9:30 AM to 5:00 PM

Mysore

Venue : ibis Styles Mysore - Plot 17, 2, KRS Road, Metagalli.

WE ARE HIRING

JOIN OUR TEAM

OPEN POSITIONS

Sales Department:

- GM Sales
- Sales Manager
- UTrust Manager
- Customer Relationship Manager – Sales
- Finance / Insurance Managers
- Team Leader Sales
- Sales Consultants
- Sales Trainer/Sales Process Co-Ordinator
- Customer Relationship Executives
- Drivers for Sales / Service

Service Department:

- Service Manager
- Customer Relationship Manager - Service
- Front Office Manager
- Service Advisors
- Service Process Co-Ordinator
- Customer Relationship Executives
- Floor Supervisors
- Technicians – PMGR
- Technicians – Bodyshop
- Denter & Painters

Accounts Department:

- Accounts Managers
- Accounts Executives
- Cashiers

IT & EDP Department:

- IT Executive
- EDP/ MIS Executives

>>> APPLY HERE

hr@modygroup.co.in | +91 95814 56748 | +91 96528 62626



HP HYLAND PROPERTIES

ಇಂಪೀರಿಯಲ್ ಸಿಟಿ

ಮೆಗಾ ರೆಸಿಡೆನ್ಸಿಯಲ್ ವಿಲ್ಲಾ ಟೌನ್‌ಶಿಪ್

ಮೈಸೂರು - ಹುಣಸೂರು ಮುಖ್ಯರಸ್ತೆ, ಮೈಸೂರು

MUDA LIMITS

ಕೇವಲ ₹749/ ಪ್ರತಿ ಚದರ ಅಡಿ

ಇಲವಾಲ ಸ್ಯಾಟ್‌ಲೈಟ್ ಬಸ್ ನಿಲ್ದಾಣದಿಂದ ಕೇವಲ 4 ಕೀ.ಮೀ

ಸುಲಭ 4 ಕಂತುಗಳ ಸೌಲಭ್ಯವಿದೆ

BOOKING OPEN

30x40 | 30x50 | 40x60 | 50x80

ಅಳತೆಯ ಎಲ್ಲಾ ಸೌಲಭ್ಯಗಳನ್ನು ಒಳಗೊಳ್ಳುವ ನಿವೇಶನಗಳು

ಹೈಲ್ಯಾಂಡ್ ಪ್ರಾಪರ್ಟೀಸ್ 95133 01854 88840 71010

ಕಾಳಿದಾಸ ರಸ್ತೆ, ವಿಜಯನಗರ 1ನೇ ಹಂತ, ಮೈಸೂರು

ಹಸಿರು ನಮ್ಮ ಉಸಿರು

ಪ್ಲಾಸ್ಟಿಕ್ ಬಳಕೆ ನಿಷೇಧಿಸಿ ಪರಿಸರವನ್ನು ಕಾಪಾಡಿ



WANTED ADVOCATE

Reputed company looking for advocate who can handle civil legal matters, Draft suits and deeds, Legal documentation, Title flow of properties, Case Monitoring, etc.

Job Location : Mysore

Interested people can contact:

93432 22225, 96111 32076

Mail us resume: mysore.bbl@thebharathgroup.com

ಮೈಸೂರು ಮಿತ್ರ
ಓದುಗರ ಗಮನಕ್ಕೆ

ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವು ಗಳಲ್ಲಿನ ಮಾಹಿತಿ, ವಸ್ತು ಲೋಪ ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸ ಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.

-ಜಾಹೀರಾತು ವ್ಯವಸ್ಥಾಪಕರು

